ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗೆ ಮಾಡಿದರೆ ನಾನು ರಾಜ್ಯಪಾಲರ ಭಾಷಣವನ್ನು ಅರ್ಧದಲ್ಲಿ ಬಿಡುವುದು ಸರಿಯಾಗಲಾರದು. ನಾನು ಮಾತನಾಡಿದ ಮೇಲೆ ತೆಗೆದುಕೊಳ್ಳಿ.

MR. SPEAKER: I will leave it to you. ತಾವುಗಳು ಮಾತನಾಡಿದ ಮೇಲೆ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಂಡಲ್ಲಿ ಲೇಟ್ ಆಗಬಹುದು. ಮತ್ತೆ ಕಾರ್ಯಕಲಾಪಗಳು ಸಮಯ ವ್ಯತ್ಯಾಸವಾಗುತ್ತವೆಯಲ್ಲವೆ? ತಾವುಗಳು ಈಗ ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಮಾತನ್ನು ಪ್ರಾರಂಭ ಮಾಡುತ್ತೀರಾ?

(4) ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ ಮತ್ತು ಇದೇ ಸಂದರ್ಭದಲ್ಲಿ ಇವೊತ್ತು ವಿಶೇಷವಾಗಿ ನಾವೆಲ್ಲರೂ ಇದೇ ಕಾರಣಕ್ಕಾಗಿ ಇಲ್ಲಿ ಸೇರಿದ್ದೇವೆ. ಅದರ ಮಹತ್ವ ಏನು ಮತ್ತು ರಾಜ್ಯಪಾಲರ ಭಾಷಣದಲ್ಲಿ ಸರಕಾರದವರು ವಿಶೇಷವಾಗಿ ಯಾವ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಎನ್ನತಕ್ಕಂಥಾದ್ದು ನಾವು ಹೇಳತಕ್ಕಂಥಾದ್ದು ಬಹಳ ಮುಖ್ಯ. ಆದರೆ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆ, ಅದರಲ್ಲಿ ಏನು ಲೋಪದೋಷಗಳು ಇವೆ ಎಂಬುದನ್ನು ನಾವು ಹೇಳಬೇಕೆಂದರೆ ಸದನದಲ್ಲಿ ಮುಖ್ಯಮಂತ್ರಿಯವರೂ ಇಲ್ಲ, ಫೈನಾನ್ಸ್ ಮಿನಿಸ್ಟರ್‌ರವರೂ ಇಲ್ಲ, ಇತರ ಮಂತ್ರಿಗಳೂ ಇಲ್ಲ ಅಂದರೆ, ನಾವು ಹೇಗೆ ಮಾತನಾಡುವುದು? ಯಾರಾದರೂ ಒಬ್ಬ ಸಚಿವರು ಕುಳಿತುಕೊಂಡು ನೋಟ್ ಮಾಡಿಕೊಳ್ಳುತ್ತಾರೆ ಅಂದರೆ ನಾವು ಹೇಳಲು ಆಗುತ್ತದೆಯೇ?

ಶ್ರೀ ವಾಟಾಳ್‌ನಾಗರಾಜ್: ಇದು ಹೀಗೆ ಪ್ರತಿ ಶಾಸನಸಭೆಯಲ್ಲಿಯೂ ನಡೆಯುತ್ತಾ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಂಥ ವಿಚಾರದ ಬಗ್ಗೆ ಪ್ರಸ್ತಾಪವಾಗುವಾಗ ಜವಾಬ್ದಾರಿಯುತರಾಗಿರತಕ್ಕಂಥ ಮುಖ್ಯಮಂತ್ರಿಗಳಾಗಲೀ, ಉಪಮುಖ್ಯ ಮಂತ್ರಿಗಳಾಗಲೀ ಮತ್ತಿತರ ಮಂತ್ರಿಗಳಾಗಲೀ, ಇವರೆಲ್ಲರೂ ಇರಬೇಕೆಂಬ ದೃಷ್ಟಿಯಿಂದಲೇ ನಾವು ಇಲ್ಲಿ ಪ್ರಸ್ತಾಪ ಮಾಡುವುದು. ಇಲ್ಲ ನೀವು ಹೇಳಿದ್ದನ್ನು ನಾವು ನೋಟ್ ಮಾಡಿಕೊಳ್ಳುತ್ತೇವೆ ಅಂದರೆ ನಾವು ಕೂಡ ನಮ್ಮ ಭಾಷಣವನ್ನು ಟೈಪ್ ಮಾಡಿಕೊಡುತ್ತೇವೆ, ಹೇಗೂ ನಮಗೆ ಆ ಸವಲತ್ತನ್ನು ಕೊಟ್ಟಿದ್ದೀರಿ. ಟೈಪ್ ಮಾಡಿಕೊಡುತ್ತೇವೆ. ಅದನ್ನೇ ರೆಡ್ ಅಂಡ್ ರೆಕಾರ್ಡೆಡ್ ಎಂದು ಹೇಳಿ ನಾವು ಹೋಗಿ

ಬಿಡುತ್ತೇವೆ.

ಶ್ರೀ ವಾಟಾಳ್‌ನಾಗರಾಜ್: ಈ ವಿಚಾರವನ್ನು ನಾವು ಎಷ್ಟು ಸಾರಿ ಸದನದಲ್ಲಿ ತಮ್ಮ ಗಮನಕ್ಕೆ ತಂದಿದ್ದೇವೆ. ಇಂಥ ಪ್ರಾಮುಖ್ಯವಾದ ವಿಚಾರವು ಎರಡನೇ ದಿವಸ ಪ್ರಾರಂಭ ಆಗಿರತಕ್ಕಂಥಾದ್ದು. ರಾಜ್ಯಪಾಲರ ಭಾಷಣದ ಮೇಲೆ ವಿರೋಧಪಕ್ಷದ ನಾಯಕರು ಮಾತನ್ನು ಪ್ರಾರಂಭ ಮಾಡುವಾಗ ಮುಖ್ಯಮಂತ್ರಿಗಳಿಲ್ಲ, ಉಪ ಮುಖ್ಯಮಂತ್ರಿಗಳಿಲ್ಲ ಅಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ವಾಟಾಳ್‌ರವರು ಒಂದು ಸಾರಿ ಹೀಗೆ ಬರುತ್ತಾರೆ, ಒಂದು ಸಾರಿ ಹಾಗೆ ಬರುತ್ತಾರೆ ಏನು ಮಾಡುವುದು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಈ ವಿಧಾನಸಭೆಗೆ ಯಾರು ಬಂದರೂ ಕೂಡ ಈ ಮೂರು ಬಾಗಿಲುಗಳಿಂದಲೇ ಬರಬೇಕು. ಇದಕ್ಕೆ ಬೇರೆ ದಾರಿಯೇ ಇಲ್ಲ. ತಮಗೆ ಮಾತ್ರ ಒಂದೇ ಬಾಗಿಲು ಇದೆ. ಆದರೂ ಕೂಡ ಇಂಥ ಮಹತ್ವವಾದಂಥ ವಿಷಯವನ್ನು ಪ್ರಸ್ತಾಪ ಮಾಡುವಾಗ ಅವರೇ ಇಲ್ಲ. ಅವರೇ ಬಾಕಿ ಸಮಯದಲ್ಲಿ ಎಲ್ಲರಿಗೂ ಹೇಳುತ್ತಾರೆ. ಸೌಜನ್ಯ ಇರಬೇಕು, ಚೆನ್ನಾಗಿ ನಡೆದುಕೊಳ್ಳಬೇಕು ಕನ್‌ವೆನ್‌ಶನ್ ಇರಬೇಕು, ಎಂದೆಲ್ಲಾ ಹೇಳುವವರು ವಿರೋಧ ಪಕ್ಷದವರು ಮಾತನಾಡುವಾಗ ಇರಬೇಕೆಂಬ ಕನ್‌ವೆನ್‌ಶನ್ ಅವರಿಗೆ ಎಲ್ಲಿ ಹೋಯಿತು? ಅಂದರೆ ಬೇರೆಯವರಿಗೆ ಬುದ್ಧಿ ಹೇಳುವುದು, ಅವರು ಮಾತ್ರ ಹೇಳಿದ ಹಾಗೆ ನಡೆದುಕೊಳ್ಳುವುದಿಲ್ಲ ಅಂದರೆ ಸರಿಯಲ್ಲ. ನೀವು ಇದೇ ರೀತಿಯಲ್ಲಿ ನಡೆದುಕೊಳ್ಳುವುದು ಎಂದು ಹೇಳಿದರೆ ನಾನು ನನ್ನ ಮಾತನ್ನು ಪ್ರಾರಂಭಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ರಾಜ್ಯಪಾಲರ ಭಾಷಣದ ಮೇಲೆ ವಿರೋಧಪಕ್ಷದ ನಾಯಕರು ಮಾತನಾಡುವುದು ಅಂದರೆ ಗೌರವದ ವಿಚಾರ. ಅಷ್ಟೇ ಅಲ್ಲ ಇದೊಂದು ಶಿಷ್ಟಾಚಾರದ ವಿಚಾರವೂ ಹೌದು. ಇಲ್ಲಿ ಸರಕಾರವೇ ಇರಬೇಕು. ಆದರೆ ಇಲ್ಲವಲ್ಲ? ಮುಖ್ಯಮಂತ್ರಿಗಳು ಎಲ್ಲಿ, ಉಪಮುಖ್ಯಮಂತ್ರಿಗಳೆಲ್ಲಿ? ಏನು ವಿಚಾರ ಇದು? ನಾವು ಇದನ್ನು ಯಾರಿಗೆ ಹೇಳಬೇಕು? ಹೀಗೆ ಸದನಕ್ಕೆ ಅಗೌರವ ಮಾಡುವುದಾದರೆ ಇದು ನಿಜವಾಗಿಯೂ ಇದೊಂದು ಅಪಾಯಕಾರಿ ಬೆಳವಣಿಗೆಯಾಗುತ್ತದೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಅಧ್ಯಕ್ಷರೇ, ಇಂಥ ಪ್ರಾಮುಖ್ಯ ಭಾಷಣ ಮಾಡುವಾಗ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಇರಬೇಕಲ್ಲವೆ? ರಾಜ್ಯಪಾಲರ ಭಾಷಣದ ಮೇಲೆ ವಿರೋಧ ಪಕ್ಷದ ನಾಯಕರು ಭಾಷಣವನ್ನು ಪ್ರಾರಂಭ ಮಾಡುತ್ತಾ ಇದ್ದಾರೆ. ಹೀಗೆ ಯಾರೂ ಇರದೇ ಬೇಜವಾಬ್ದಾರಿಯಿಂದ ನಡೆದುಕೊಳ್ಳುವುದಾದರೆ ಇದು ಒಳ್ಳೆಯ ಸಂಪ್ರದಾಯವಲ್ಲ. ಇದು ಇದೊಂದೇ ಸಾರಿ ಅಲ್ಲ. ಅನೇಕ ಸಂದರ್ಭಗಳಲ್ಲಿ ಇಂಥ ಭಾಷಣ ಮಾಡುವಾಗ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಇರಬೇಕೆಂಬ ಮಾತನ್ನು ಅನೇಕ ಸಾರಿ ಅನೇಕರು ಹೇಳಿದ್ದಾರೆ.

ಅನೇಕ ಸಾರಿ ಒತ್ತಾಯ ಮಾಡಿದ್ದೇವೆ. ಆದರೂ ಕೂಡ ನಿಮಗೆ ಕಾಳಜಿ ಇಲ್ಲ ಅಂದರೆ ನಮಗೆ ಅತ್ಯಂತ ನೋವು ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಚರ್ಚೆಯಾಗತಕ್ಕಂಥ ಕಾಲದಲ್ಲಿ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸುತ್ತಾರೆ ಅವರು ಇದ್ದರೆ ಸಾಕಾಗುತ್ತದೆ. ಆದರೆ ವಂದನಾ ನಿರ್ಣಯದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಉತ್ತರ ಹೇಳತಕ್ಕಂಥವರು ಮುಖ್ಯಮಂತ್ರಿಯವರು. ಅವರೇ ಇಲ್ಲಿ ಹೇಳಿದ ಮಾತುಗಳನ್ನು ಕೇಳಲು ಸದನದಲ್ಲಿ ಯಾರೂ ಇಲ್ಲದೇ ಹೋದರೆ ಅವರು ಉತ್ತರವನ್ನು ಯಾವರೀತಿಯಾಗಿ ಹೇಳುತ್ತಾರೆ ಎಂಬುದನ್ನು ನಾವು ಊಹಿಸಿಕೊಳ್ಳಬಹುದು. ಆದ್ದರಿಂದ ಅದಕ್ಕೆ ಪ್ರಾಮುಖ್ಯತೆಯೂ ಬರುವುದಿಲ್ಲ, ಅರ್ಥವೂ ಇರುವುದಿಲ್ಲ. ನಿಜವಾಗಿಯೂ ಚರ್ಚೆಗೆ ಅರ್ಥ ಬರಬೇಕು ಮತ್ತು ಪ್ರಾಮುಖ್ಯತೆಯೂ ಸಿಗಬೇಕೆಂದರೆ ವಿಶೇಷವಾಗಿ ವಿರೋಧಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇರಲೇಬೇಕು ಎಂಬ ಸಂಪ್ರದಾಯವನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಇವೊತ್ತು ಮುಖ್ಯಮಂತ್ರಿಗಳು ಇಲ್ಲದೇ ಇರತಕ್ಕಂಥಾದ್ದು ನಿಜವಾಗಿಯೂ ಸರಿ ಅಲ್ಲ. ಇದನ್ನು ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಆದರೆ ಈ ಚರ್ಚೆಯನ್ನು ನೀವು ಬಹಳ ಲಘುವಾಗಿ ಕಾಣುತ್ತಿದ್ದೀರಿ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆ ರೀತಿ ಮಾಡುವುದರಿಂದ ಯಾವ ಅರ್ಥವೂ ಸರಕಾರಕ್ಕೆ ಬರುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಯಾವ ದೃಷ್ಟಿಯಿಂದಲೂ ಕೂಡ ಸದನಕ್ಕಾಗಲೀ, ವಿರೋಧ ಪಕ್ಷದ ನಾಯಕರಿಗಾಗಲೀ, ಅವಮಾನ ಮಾಡಬೇಕು ಅಥವಾ ಇದನ್ನು ಕಡೆಗಣಿಸಬೇಕೆಂಬುದು ನಮ್ಮ ದೃಷ್ಟಿ ಅಲ್ಲ. ತಾವು ಕೂಡ ಆ ರೀತಿಯಲ್ಲಿ ಹೇಳಿಲ್ಲ. ಆದರೆ ತಾವುಗಳು ಹೇಳಿದ ಸತ್ ಸಂಪ್ರದಾಯವನ್ನು ಅಕ್ಷರಶಃ ನಾನು ಒಪ್ಪಿಕೊಳ್ಳುತ್ತೇನೆ. ವಿರೋಧ ಪಕ್ಷದ ನಾಯಕರು ಮತ್ತು ಪ್ರತಿಪಕ್ಷದ ಅನೇಕ ನಾಯಕರುಗಳು ಮಾತನಾಡುವಾಗ ಸಂಬಂಧಪಟ್ಟಂಥ ಎಲ್ಲಾ ಸಚಿವರುಗಳು ಇರಬೇಕೆಂಬುದು ಸಂಪ್ರದಾಯ. ಆದರೆ ಕೌನ್ಸಿಲ್‌ನಲ್ಲಿ ಕೆಲವು ಪ್ರಸ್ತಾವನೆಗಳು ಇರುವುದರಿಂದ ಅಲ್ಲಿಗೆ ಹೋಗಿದ್ದಾರೆ. ಮುಖ್ಯಮಂತ್ರಿಗಳು ಈಗ ಬರುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಪ್ರಾಮುಖ್ಯವಾದುದು. ಇಲ್ಲಿ ಮುಖ್ಯ ಕಾರ್ಯದರ್ಶಿ ಮತ್ತಿತರರೂ ಇರಬೇಕು. ಇದನ್ನು ಅಷ್ಟು ಲಘುವಾಗಿ ಕಾಣತಕ್ಕಂಥಾದ್ದು ಅಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಈ ಕೂಡಲೇ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನೂ ಕರೆಸುತ್ತೇನೆ. ಈಗಾಗಲೇ ಸಂಬಂಧಪಟ್ಟ ವಿಚಾರಗಳಿಗೆ ಅವರು ಉಪ-ಮುಖ್ಯ ಕಾರ್ಯದರ್ಶಿಯವರನ್ನು ನೇಮಕ ಮಾಡಿದ್ದಾರೆ, ಅವರ ಉಪಸ್ಥಿತರಿದ್ದಾರೆ.

ಅಧ್ಯಕ್ಷರು: ನಾನು ಹೇಳುವುದೇನೆಂದರೆ, ನಮೆಗೆಲ್ಲರಿಗೂ ಕೂಡ ಸಾಕ್ಟು ಪ್ರಮಾಣದಲ್ಲಿ ಪಾರ್ಲಿಮೆಂಟರಿ ಲೈಫ್‌ನಲ್ಲಿ ಅನುಭವವಾಗಿದೆ. ಅಧಿಕೃತವಾಗಿ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಭಾಷಣವನ್ನು ಪ್ರಾರಂಭ ಮಾಡಿದ್ದಾರೆ. ನಮ್ಮ ಕಾರ್ಯಕಲಾಪಗಳಲ್ಲಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಸಲ್ಲಿಸುತ್ತಾ ಮಾತನಾಡುವುದು ಒಂದು ಅವಕಾಶ. ಬಜೆಟ್ ಮೇಲೆ ಜನರಲ್ ಡಿಸ್‌ಕಶನ್ ಮೇಲೆ ಮಾತನಾಡತಕ್ಕಂಥಾದ್ದು ಮತ್ತೊಂದು ಅವಕಾಶ. ಇಲ್ಲಿ sky is the limit. ಸಾಮಾನ್ಯವಾಗಿ ಎಲ್ಲಾ ವಿಚಾರಗಳನ್ನೂ ಒಳಗೊಂಡು ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಮುಕ್ತ ಅವಕಾಶ ಇರುತ್ತದೆ. ಇಂಥ ಒಂದು ಪದ್ಧತಿ ಬೆಳೆದುಕೊಂಡು ಬಂದಿದೆ. ರೆಸ್ಪಾನ್ಸಿಬಲ್ ಆಫೀಸರ್ಸ್, ಸೀನಿಯರ್ ಆಫೀಸರ್ಸ್ ಎಲ್ಲರೂ ಕೂಡ ಇಲ್ಲಿ ಹಾಜರಿರಬೇಕು. ಮಾನ್ಯ ಮುಖ್ಯಮಂತ್ರಿಗಳಿಗೆ ಬೇರೆ ಒಂದು ಸಮಸ್ಯೆ ಇದೆ ಎಂದು ಇಟ್ಟುಕೊಳ್ಳೋಣ. ಯಾರನ್ನಾದರೂ ಡೆಪ್ಯೂಟ್ ಮಾಡಬಹುದು. ಅವರು ನೀವು ಮಾತನಾಡುವ ಸಮಯಕ್ಕೆ ಬಂದು ಹಾಜರಾಗಬಹುದು. ನಿಮ್ಮ ಬಗ್ಗೆ ಗೌರವ ಇದೆ. the position does not reveal what you speak. It speaks otherwise. I have a responsibility to guard the dignity and honour of the Leader of Opposition and an equal responsibility to protect the interest of the Leader of the House. Don't you think so.

Sri M.P.PRAKASH: Sir, we are also equally responsible. With all anguish I say that I regret for the lapses, if any, and I will certainly see that the directions are issued and immediately the responsible officers....

Mr. SPEAKER: What I say is, you are a very senior Minister, you can understand the delicacy. The Officers of that rank should not expect any directions to be issued to them. They have put in sufficient number of years of service. They know that the Assembly is in session. They know what is the agenda. After all, they shouldn't expect the directions to be issued. I can understand the position of the officers down the ladder, not the officers of this rank.

ಶ್ರೀ ವಾಟಾಳ್‌ನಾಗರಾಜ್: ಈಗ ತಾವು ಅವರನ್ನು ಕರೆಯಿಸುವುದು ಅಲ್ಲ, ಅವರಿಗೆ ಆ ಜವಾಬ್ದಾರಿ ಇರಬೇಕು. ಇವತ್ತು ರಾಜ್ಯಪಾಲರ ಭಾಷಣ, ಅದರ ಮೇಲೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ, ಎಂದು ಅಧಿಕಾರಿಗಳಿಗೆ ಇದರ ಬಗ್ಗೆ ಜವಾಬ್ದಾರಿ ಇರಬೇಕು. ಇದನ್ನು ತಾವು ಹೇಳಿ, ಅವರನ್ನು ಕರೆಸುವುದು ಅಲ್ಲಾ, ಅವರಿಗೆ ಜವಾಬ್ದಾರಿ ಇರಬೇಕು.

Mr. SPEAKER: My only desire in speaking this is directly or indirectly an inference cannot be drawn by anybody that the Assembly can be taken so lightly. The happenings around the country to-day have gradually made us so weak and make us look as objects of redicule before the people. I, as a Speaker, would not allow such a thing to happen. We would take it very seriously.

Sri M.P.PRAKASH: As far as this Government is concerned, I assure you Sir, the position will not be repeated again and I will certainly see that the officers should come. The point is that they were not aware of it and immediately it will be taken-up. Because, they were under the impression that the Calling Attention Notice is also there and it may take a little more time, so that they could come. However, I will see to it the Chief Minister also comes.

Mr. SPEAKER: My intention is not to put either you in a fix or try to please them. But, I think this much was the minimum required to be said by the Presiding officer in a given situation like this.

ಶ್ರೀ ಕಾಗೋಡು ತಿಮ್ಮಪ್ಪ: ಈ ಸದನದಲ್ಲಿ ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡತಕ್ಕಂಥದ್ದು ಎರಡು ಸಂದರ್ಭದಲ್ಲಿ. ಅದಕ್ಕೆ ತಾವು ಮಿತಿ ಹೇಳಿದಿರಿ, ಆ ಮಿತಿ ತುಂಬಾ ವ್ಯಾಪಕ ಇರುತ್ತದೆ, ಎಲ್ಲ ವಿಷಯಗಳನ್ನು ಒಳಗೊಂಡಿರುತ್ತದೆ. ಇಡೀ ಸರ್ಕಾರದ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಮತ್ತು ಯಾರು ಉತ್ತರ ಹೇಳುತ್ತಾರೆ ಅಂಥವರು ಸದನದಲ್ಲಿ ಚರ್ಚೆ ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ, ಇಲ್ಲದೆ ಹೋದರೆ ನಮ್ಮ ಭಾವನೆಗಳಿಗೆ ಒಂದು ಒತ್ತು ಬರುವುದಿಲ್ಲ.

ಅಧ್ಯಕ್ಷರು: ನಾನು ಅದನ್ನು ಒಪ್ಪಿದೆ. ಈಗ ಏನು ಮಾಡೋಣ?

ಶ್ರೀ ಕಾಗೋಡು ತಿಮ್ಮಪ್ಪ: ಅದ್ದಾಗಿ 5- 10 ನಿಮಿಷ ಸಭೆಯನ್ನು ಮುಂದುವರಿಸೋಣ ಅಂದರೆ ಅಡ್ಜರ್ನ್ ಮಾಡೋಣ.

ಶ್ರೀ ಎಂ.ಪಿ.ಪ್ರಕಾಶ್: ಅದು ಅಗತ್ಯ ಇಲ್ಲ. ಮಾನ್ಯ ಸದಸ್ಯರು ಮತ್ತು ತಾವು ವ್ಯಕ್ತ ಮಾಡಿದ ಅಭಿಪ್ರಾಯ ತಿಳಿದಿದೆ. ನಾವು ಇದನ್ನು ಉದ್ದೇಶವಪೂರ್ವಕವಾಗಿ ಈ ರೀತಿಯಾದಂಥ ಕ್ರಮ ಕೈಗೊಳ್ಳುವಂಥ ಪ್ರಯತ್ನ ಇಲ್ಲ. ಸದನಕ್ಕೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಮತ್ತು ಇತರ ಸದಸ್ಯರಿಗೆ ದೊಡ್ಡ ಗೌರವ ಕೊಡುತ್ತೇವೆ. ಅನೇಕ ಸಂದರ್ಭಗಳಲ್ಲಿ ವಿರೋಧ ಪಕ್ಷದ ನಾಯಕರು, ಹೇಳತಕ್ಕಂಥ ಸಂದರ್ಭಗಳಲ್ಲಿ ನಾವು ಆ ಪಾಯಿಂಟ್‌ಗಳನ್ನು ಗುರ್ತು ಹಾಕಿಕೊಂಡಿರುತ್ತೇವೆ. ಈಗಲೂ ಕೂಡ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ: ನಾವು ಚರ್ಚೆಯನ್ನು ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಯಾವ ಭಾವನೆಯಿಂದ ಹೇಳುತ್ತೇವೆ ಎನ್ನುವುದನ್ನು ಕೇಳುವುದಕ್ಕೆ ಇಲ್ಲದೆ ಹೋದರೆ ಹೇಗೆ?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಎಲ್ಲಾ ಕಾಲದಲ್ಲೂ ಮುಖ್ಯಮಂತ್ರಿಗಳು ಸದಾ ಇರಬೇಕಾದ ಅಗತ್ಯ ಇಲ್ಲ. ಆದರೆ ಗೌರವ ಸೂಚಕವಾಗಿ ತಮ್ಮ ಅಭಿಪ್ರಾಯಗಳನ್ನು ಗುರ್ತು ಮಾಡಿಕೊಳ್ಳುತ್ತೇವೆ. ಅಧ್ಯಕ್ಷರ ಮನವಿಯ ಮೇರೆಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಕೈಗೊಳ್ಳಲಿ, ಅವರು ಈಗ ಬರುತ್ತಾರೆ, ಯಾವುದೇ ರೀತಿಯಾದ ಅಗೌರವ ತೋರಿಸುವ ಅಗತ್ಯ ಇಲ್ಲ.

Mr. SPEAKER: You are a senior member. You will have to guide me. You have entered this House much earlier to us. After all, we look to people like you for guidance in a situation like this.

Sri M.Y.GHORPADE: It is a serious matter that it is repeated in this House for many many times and you have sufficiently warned also. I can sympathise with the Leader of the Oppostition when he expects the Chief Minister and senior Ministers and Officers to be present to listen to debate. If you adjourn the House for a while, it is noted more emphatically.

ಶ್ರೀ ವಾಟಾಳ್‌ನಾಗರಾಜ್: ನಾವು ಯಾವಾಗಲೂ ಮುಖ್ಯಮಂತ್ರಿಗಳು ಇಲ್ಲಿಯೇ ಕುಳಿತುಕೊಳ್ಳಬೇಕೆಂದು ಯಾರೂ ಹೇಳಲಿಲ್ಲ. ಆ ಪ್ರಶ್ನೆಯೇ ಇಲ್ಲ. ಇಂತಹ ಪ್ರಸಂಗ ಬರತಕ್ಕಂಥದ್ದು ಎರಡು ಸಂದರ್ಭದಲ್ಲಿ. ಒಂದು ಆಯವ್ಯಯದ ಚರ್ಚೆಯಾಗುವಾಗ ಮತ್ತೊಂದು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವಾಗ. ತಮಗೆ ಎಲ್ಲಾ ಗೊತ್ತಿದೆ. ಇವತ್ತು ರಾಜ್ಯಪಾಲರ ಭಾಷಣದ ಮೇಲೆ ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡುತ್ತಾರೆ. ಮುಖ್ಯಮಂತ್ರಿಗಳು ಇಲ್ಲದಿರುವುದರಿಂದ ಸಭೆಯನ್ನು ಮುಂದೂಡುವುದು ಒಳ್ಳೆಯದು.

ಅಧ್ಯಕ್ಷರು: ನಾನು ವಿನಂತಿಸಿಕೊಳ್ಳುತ್ತೇನೆ, ನಾವು ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದು ಬೇಡ. ಮಂತ್ರಿಗಳು ಸಭೆಯನ್ನು ಮುಂದಕ್ಕೆ ಹಾಕುವುದು ಬೇಡವೆಂದಿದ್ದಾರೆಂದು ನಾವು ಮುಂದಕ್ಕೆ ಹಾಕುವುದು ಬೇಡವೆಂದು ಅಲ್ಲಾ I have understood the feelings. We will meet at 1.30 p.m.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈ ರೀತಿ ಯಾವುದೋ ಒಂದು ಕಾರಣಕ್ಕಾಗಿ ಸಭೆ ಮುಂದೂಡುವುದು ಆದರೆ, ಇದು ಸದನದ ಒಂದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಮುಖ್ಯಮಂತ್ರಿಗಳು ಬೇರೆ ಕರ್ತವ್ಯದಲ್ಲಿದ್ದಾರೆ. ಮಾನ್ಯ ಘೋರ್ಪಡೆಯವರು ಹೇಳಿದ ಮಾತನ್ನು ಒಪ್ಪುತ್ತೇನೆ. ಆದರೆ ಅನೇಕ ಸಂದರ್ಭಗಳಲ್ಲಿ ಕೂಡ ಮುಖ್ಯಮಂತ್ರಿಗಳು ಹಾಜರಾಗಿರುವುದಿಲ್ಲ. ಆದರೆ ಅಧಿಕಾರಿಗಳು ಇದ್ದೇ ಇರಬೇಕು ಅದರ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗಲೂ ಕೂಡ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ವಿಶೇಷವಾಗಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಮಾಡುವಾಗ ಮುಖ್ಯಮಂತ್ರಿಗಳು ಕೇಳುವುದಕ್ಕೆ ಇರುತ್ತಾರೆ. ನೀವು ರೆಕಾರ್ಡ್ ತೆಗೆದು ನೋಡಿ. ಮಧ್ಯದಲ್ಲಿ ಎದ್ದು ಹೋಗುವುದು ಬರುವುದು ಇದೆ. ತಾವು ಒಂದು ಬಜೆಟ್ ಮಂಡಿಸಿರುತ್ತೀರಿ ಆಗ ನಾವು ಮುಖ್ಯಮಂತ್ರಿಗಳು ಇರಬೇಕೆಂದು ಹೇಳುವುದಿಲ್ಲ. ಯಾವುದೋ ಬೇರೆ ವಿಷಯಗಳು ಇರುತ್ತವೆ ಆಗ ನಾವು ಮುಖ್ಯಮಂತ್ರಿಗಳು ಇರಬೇಕೆಂದು ಹೇಳುವುದಿಲ್ಲ. ತಾವು ಅವರ ಪರವಾಗಿ ಎಷ್ಟೋ ಸಲ ಉತ್ತರ ಕೊಡುತ್ತೀರಿ. ನಾವು ಕೇಳುತ್ತೇವೆ. ಆದರೆ ಈಗಲೂ ಕೂಡ ತಾವು ಅದನ್ನೆ ಹೇಳಿದರೆ ಹೇಗೆ?

Mr. SPEAKER: Alright. The situation is saved. The Chief Minister has landed.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಈಗ 1 ಗಂಟೆ ಮೂವತ್ತು ನಿಮಿಷಕ್ಕೆ ಹೇಳಿದಿರಲ್ಲಾ.

Mr. SPEAKER: No, I don't allow this.

ಶ್ರೀ ಎಂ.ಪಿ.ಪ್ರಕಾಶ್: ರಾಜ್ಯದ ಜವಾಬ್ದಾರಿಯನ್ನು ಹೊತ್ತುಕೊಂಡು ಹೋಗುವಂಥ ಸಂದರ್ಭದಲ್ಲಿ ಅಜೆಂಡಾದಲ್ಲಿ ಇರುವ ಪ್ರಕಾರ ಕೆಲವು ಸಲ ಆಗುವುದಿಲ್ಲ.

Mr. SPEAKER: All is well that ends well. Since he has come, we will go on. May I now request the Leader of Oppostion to begin his speach?

ಶ್ರೀ ಎಂ.ಪಿ.ಪ್ರಕಾಶ್: ನಾವು ಸಂಪೂರ್ಣವಾಗಿ ಸದನವನ್ನು ಉಪೇಕ್ಷೆ ಮಾಡುತ್ತಾರೆ ಎನ್ನುವ ಭಾವನೆ ಜನಗಳಿಗೆ ಹೋಗಬಾರದು. ಆ ಕಾರಣಕ್ಕಾಗಿ ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ಅಂತಹ ದೊಡ್ಡ ಗೌರವವನ್ನು ಕೊಟ್ಟಿದ್ದೇವೆ. ಅನೇಕ ಸಂದರ್ಭಗಳಲ್ಲಿ ಕೂಡ ಮುಖ್ಯಮಂತ್ರಿಗಳು ಸದಾ ಕಾಲ ಇರಬೇಕೆನ್ನುವ ಸಂಪ್ರದಾಯ ಇಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಚರ್ಚೆ ಅಧಿವೇಶನವಾಗಿರುವುದರಿಂದ ಅವರಿಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ನೇರವಾಗಿ ಸಂಬಂದಪಟ್ಟವರೇ ಉತ್ತರ ಕೊಡಬೇಕಾಗುತ್ತದೆ ಆದ್ದರಿಂದ, ಅವರೇ ಇರಬೇಕು ಎಂದು ಹೇಳುತ್ತೇವೆ.

ಶ್ರೀ ಜೆ.ಹೆಚ್.ಪಟೇಲ್: ಈ ಸದನಕ್ಕೆ ಗೌರವ ಕೊಡಬೇಕು. ಯಾರು ಇಲ್ಲದಾಗ ನಾನು ಕುಳಿತಿದ್ದನ್ನು ಹಲವಾರು ಸಾರಿ ತಾವು ನೋಡಿದ್ದೀರಿ. ಈ ಅಧಿವೇಶನಕ್ಕಿಂತ ದೊಡ್ಡದು ಇನ್ನು ಯಾವುದೂ ಇಲ್ಲ. ಆದರೂ ಇವರು ಏನು ಹೇಳುತ್ತಾರೆಂದು ನಾನು ಅಲ್ಲಿ ನಿಂತು ಕೇಳುತ್ತಿದ್ದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಅಲ್ಲಿಯೇ ಬಂದು ಹೇಳುತ್ತಿದ್ದೆವಲ್ಲಾ; ನಾವು ಏನೂ ಹೇಳಿಲ್ಲಾ, ನೀವು ಅಲ್ಲಿ ಏನು ಕೇಳುತ್ತಿದ್ರಿ

ಶ್ರೀ ವಾಟಾಳ್ ನಾಗರಾಜ್: ನಾವು ಹೇಳುವುದನ್ನು ಅವರು ಅಲ್ಲಿಯೇ ನಿಂತು ಕೇಳುತ್ತಿದ್ದರೆ, ನಾವು ಎಲ್ಲೋ ಒಂದು ಕಡೆ ನಿಂತು ಎಲ್ಲಾ ಹೇಳಿಬಿಡೋಣ.

ಶ್ರೀ ಹೆಚ್.ಎನ್.ನಂಜೇಗೌಡ: ಆಲ್ ಇಂಡಿಯಾ ರೇಡಿಯೋ ಕೇಳುವುದು ಬೇರೆ, ಟಿ.ವಿ.ಯನ್ನು ನೋಡುವುದು ಬೇರೆ. ಆದರೆ ನೋಡುವ ರುಚಿ ಕೇಳುವುದರಲ್ಲಿ ಇರುವುದಿಲ್ಲ.

ಶ್ರೀ ಜೆ.ಹೆಚ್.ಪಟೇಲ್: ಇಷ್ಟು ಪ್ರೀತಿ ಇದ್ದರೆ ಸಾಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ನಾನು ಇಂದು ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಇವತ್ತು ವಿಶೇಷವಾಗಿ ಒಂದು ರಾಜಕೀಯ ಸಂದರ್ಭ ಕೂಡ ಈ ದೇಶದಲ್ಲಿ ಬೆಳೆದಿದೆ. ಇದು ಎಲ್ಲವನ್ನೂ ಕೂಡ ನಾವು ಗಮನದಲ್ಲಿಟ್ಟುಕೊಂಡು ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಯಾವ ರೀತಿಯಾಗಿ ನಾವು ನಡೆದುಕೊಳ್ಳಬೇಕು, ನಾವು ಎಂತಹ ಸರ್ಕಾರವನ್ನು ಎಂತಹ ಆಡಳಿತವನ್ನು ಜನರಿಗೆ ಕೊಡಬೇಕು ಎನ್ನತಕ್ಕಂಥದ್ದನ್ನು ಬಹಳ ಗಂಭೀರವಾಗಿ ವಿಚಾರ ಮಾಡಿ ಇವತ್ತು ಜನರ ಮುಂದೆ ಹೋಗಬೇಕಾಗಿದೆ. ಆದರೆ ಇಂದಿನ ಸರಕಾರ ಈ ಪ್ರಚಲಿತದಲ್ಲಿ ಇರತಕ್ಕಂತಹ ಒಂದು ಪರಿಸ್ಥಿತಿಯಾಗಲೀ ಅಥವಾ ರಾಜ್ಯದಲ್ಲಿನ ರಾಷ್ಟ್ರದಲ್ಲಿನ ಪರಿಸ್ಥಿತಿಯನ್ನು ಗಮನದಲ್ಲಿ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಬಹಳ ನೋವಿನಿಂದ ನಾನು ಹೇಳುತ್ತಿದ್ದೇನೆ. ಅದೇ ರೀತಿಯಾಗಿ ಕಳೆದ ಸಲ ಫೆಬ್ರವರಿ 10 1997ರಲ್ಲಿ ಏನು ಮಾನ್ಯ ರಾಜ್ಯಪಾಲರ ಭಾಷಣವನ್ನು ಈ ಸದನದಲ್ಲಿ ಮಂಡಿಸಿದರು, ಅದನ್ನು ನಾನು ಒಂದು ಸಲ ನೋಡಿದೆ. ಆ ಒಂದು ರಾಜ್ಯಪಾಲರ ಭಾಷಣ ಮತ್ತು ಅಂದಿನ ಕಾಲದಲ್ಲಿ ಅವರು ಸುಮಾರು 27 ಪುಟಗಳನ್ನು ಇಲ್ಲಿ ಏನು ಓದಿದರು ಆ ಒಂದು ಭಾಷಣದಲ್ಲಿ ಅವರು ಕೊಟ್ಟಂತಹ ಆಶ್ವಾಸನೆಗಳನ್ನು ಮತ್ತು ಅದರಲ್ಲಿ ಹೇಳಿದಂತಹ ಮಾತುಗಳನ್ನು ನಿರ್ವಹಣೆ ಮಾಡಿದ್ದಾರೆಯೇ ಅಥವಾ ಅದನ್ನು ಆಚರಣೆಯಲ್ಲಿ ತಂದಿದ್ದಾರೆಯೇ ಎನ್ನುವುದನ್ನು ನೋಡಿದಾಗ ಅದರಲ್ಲಿ ಸಾಕಷ್ಟು ವ್ಯತ್ಯಾಸಗಳು ಇರುವುದು ಕಂಡುಬಂತು. ಮತ್ತು ಯಾವ ಗಂಭೀರತೆಯಿಂದ ಅವರು ಈ ಸದನದ ಮುಂದೆ ಆ ಒಂದು ಭಾಷಣವನ್ನು ಮಂಡಿಸಿದರೋ, ಏನು ಮಾತುಗಳನ್ನು ಮಾನ್ಯ ರಾಜ್ಯಪಾಲರ ಮುಖಾಂತರ ಹೇಳಿಸಿದರೋ ಅದನ್ನು ಸಾಧನೆ ಮಾಡುವುದರಲ್ಲಿ ಸಾಕಷ್ಟು ವಿಫಲರಾಗಿದ್ದಾರೆನ್ನುವ ವಿಚ್ಹಾರವನ್ನು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಅಂಕಿ ಅಂಶ ಸಮೇತ ಆಮೇಲೆ ಪ್ರಸ್ತಾಪ ಮಾಡುತ್ತೇನೆ. ಆದರೆ ಇವತ್ತು ನಾವು ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿರತಕ್ಕಂತಹ ಕೆಲವು ಪರಿಸ್ಥಿತಿ ಬಗ್ಗೆ ಕೂಡ ಗಮನಹರಿಸಬೇಕಾಗುತ್ತದೆ. ಅದರಲ್ಲೂ ಮಾನ್ಯ ಜೆ.ಹೆಚ್.ಪಟೇಲ್ ಅವರು ವಿಶೇಷವಾಗಿ ಆಸಕ್ತಿ ವಹಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಪದೇ ಪದೇ ಅನೇಕ ಸಾರಿ ಈ ಮನೆಯಲ್ಲಿ ನಾವು ಒಬ್ಬರೇ ಅಲ್ಲ ಆ ಕಡೆ ಈ ಕಡೆ ಕುಳಿತಿರತಕ್ಕಂತಹ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಇರತಕ್ಕಂತಹ ವಿಶೇಷ ರಾಜಕೀಯ ಹಿನ್ನೆಲೆಯಲ್ಲಿ ಮತ್ತು ಅವರು ಬೆಳೆದುಬಂದಂತಹ ಒಂದು ವಿಶೇಷವಾದಂತಹ ರಾಜಕೀಯ ಪರಿಸ್ಥಿತಿಯಲ್ಲಿ ಮತ್ತು ಯಾವ ಧೋರಣೆಗಳ ಮೇಲೆ ಯಾವ ಕಾರ್ಯಕ್ರಮದ ಮೇಲೆ ಯಾವ ಐಡಿಯಾಲಜಿಯಲ್ಲಿ ನಂಬಿಕೆ ಇತ್ತು ಆ ನಂಬಿಕೆಯನ್ನು ಅವರಿಗೆ ಅಧಿಕಾರ ಸಿಕ್ಕಾಗ ಅದನ್ನು ನೇರವಾಗಿ ಆಡಳಿತದಲ್ಲಿ ತರುತ್ತಾರೆ ಜನರಿಗೆ ಅನುಕೂಲ ಮಾಡಿಕೊಡುತ್ತಾರೆಂದು ತಿಳಿದಿದ್ದೆವು. ನಿಮ್ಮ ಅನಿಸಿಕೆಗಳು ನಿಮ್ಮ ಭಾವನೆಗಳು ಏನು ಇತ್ತು ಅಥವಾ ಯಾವ ಮೌಲ್ಯ ಯಾವ ತತ್ವಕ್ಕೆ ನಿಮ್ಮ ಹೋರಾಟ ಇತ್ತು ಆ ಗುರಿಯನ್ನು ಸಾಧಿಸುವುದಕ್ಕೆ ಈ ಮೂರು ವರ್ಷದಲ್ಲಿ ನೀವು ಎಷ್ಟರ ಮಟ್ಟಿಗೆ ಸಾಧನೆ ಮಾಡಿದಿರಿ

ಎನ್ನುವುದು ಬಹಳ ಮುಖ್ಯ. ಇದರ ಹಿಂದೆ ತಾವು ಆರೇಳು ವರ್ಷ ಮಂತ್ರಿಯಾಗಿದ್ದರೆ. ನಾವು ಕೇಳುತ್ತಿರಲಿಲ್ಲ. ಆ ಮುಖ್ಯಮಂತ್ರಿಗಳ ಆ ಸಚಿವ ಸಂಪುಟದ ಅವರ ವಿಚಾರಗಳು ಭಿನ್ನ ಭಿನ್ನವಾಗಿದ್ದಾಗ ನನಗೆ ಅದನ್ನು ಆಚರಣೆಯಲ್ಲಿ ತರುವುದಕ್ಕೆ ತೊಡಕುಗಳು ಇವೆ ಎನ್ನುವ ಮಾತನ್ನು ಹೇಳಿಕೊಂಡು ಹೋಗಬಹುದು. ಆದರೆ ನಿಮಗೇ ಈ ಅಧಿಕಾರದ ಚುಕ್ಕಾಣಿ ಸಿಕ್ಕಾಗ ತಾವೇ ಮುಖ್ಯ ಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡಾಗ ನಿಮ್ಮ ವಿಚಾರಧಾರೆಯನ್ನು ಈ ರಾಜ್ಯದ ರೈತರಿಗೆ ಬಡವರಿಗೆ, ದೀನದಲಿತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಗಮನ ಹರಿಸಬಹುದಿತ್ತು. ಆ ರೀತಿಯ ವಿಚಾರಧಾರೆಯನ್ನು ಹರಿಸುತ್ತೀರಿ ಎಂದು ಜನರ ಅಪೇಕ್ಷೆ ಇತ್ತು. ಆ ಅಪೇಕ್ಷೆಯ ಪ್ರಕಾರ ತಾವು ನಡೆದುಕೊಳ್ಳದೇ ಇದ್ದಾಗ ಖಂಡಿತವಾಗಿ ಈ ಸರಕಾರ ಕೆಟ್ಟು ಹೋಗಿದೆ ಪೊಳ್ಳು ಆಶ್ವಾಸನೆಗಳನ್ನು ಕೊಡುತ್ತದೆ, ಈ ಸರಕಾರ ದುರಾಡಳಿತದಿಂದ ಕೂಡಿದೆ ಎಂಬ ಮಾತನ್ನು ಹೇಳಬೇಕಾಗುತ್ತದೆ. ಈ ಮಾತನ್ನು ಹೇಳಿದರೆ ನೀವು ಅದಕ್ಕೆ ಪದೇ ಪದೇ ಸಿಟ್ಟಿಗೆ ಬಂದು ಎಷ್ಟೋ ಸಲ ಸಮರ್ಥನೆ ಮಾಡಿಕೊಂಡಿದ್ದು, ನಾವು ಮಾಡಿದ್ದೇ ಸರಿ ಎಂದು ಹೇಳಿದ್ದೀರಿ. ಯಾವ ಹಿನ್ನೆಲೆಯಲ್ಲಿ ಯಾವ ವಿಚಾರಧಾರೆಯಿಂದ ನಾವು ಮಾತನಾಡುತ್ತಿದ್ದೇವೆನ್ನುವುದನ್ನು ಅನೇಕ ಸಾರಿ ನಿಮ್ಮ ಗಮನವನ್ನು ಸೆಳೆದರೂ ಕೂಡ ಕಳೆದ 2-3 ವರ್ಷದಲ್ಲಿ ನೀವು ಆ ಕಡೆ ಲಕ್ಷ್ಯ ಕೊಟ್ಟಿಲ್ಲ. ನಮ್ಮ ರಾಷ್ಟ್ರದಲ್ಲಾಗಲೀ, ರಾಜ್ಯದಲ್ಲಾಗಲೀ ಅಲ್ಲಿರತಕ್ಕಂತಹವರು ಮತ್ತು ನಾವೆಲ್ಲರೂ ಸಂವಿಧಾನದ ಪ್ರಕಾರ ನಡೆದುಕೊಳ್ಳುತ್ತೇವೆಂದು ಪ್ರಮಾಣ ವಚನ ಸ್ವೀಕಾರ ಮಾಡಿ ಅಧಿಕಾರವನ್ನು ವಹಿಸಿಕೊಳ್ಳುತ್ತೇವೆ. ನಮ್ಮ ಸಂವಿಧಾನದ ಪ್ರಿಯಾಂಬಲ್‌ನಲ್ಲಿ ಏನು ಇದೆ ಎಂದು ನಾನು ಹೇಳಬೇಕಾಗಿಲ್ಲ ಅನೇಕ ಸಾರಿ ತಾವು ಓದಿದ್ದೀರಿ ಆದರೂ ಸಹ ಈ ಸದನದಲ್ಲಿ ಇಂದು ಅದನ್ನು ಸದನದ ಗಮನಕ್ಕೆ ತಂದು ಇವತ್ತು ಯಾವ ರೀತಿಯಾಗಿ ನಾವೆಲ್ಲರೂ ಈ ದೇಶದಲ್ಲಿ ನಡೆಯುತ್ತಿದ್ದೇವೆ ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ ಅದಕ್ಕೆ ನೀವು ಯಾವ ರೀತಿಯಾಗಿ ಪ್ರೋತ್ಸಾಹ ನೀಡುತ್ತಿದ್ದೀರಿ ಎಂಬುದನ್ನು ನಿಮ್ಮ ಗಮನಕ್ಕೆ ತರುವುದಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಸಂವಿಧಾನದಲ್ಲಿನ ಮೊದಲನೇ ವಾಕ್ಯದಲ್ಲಿ

'WE, THE PEOPLE OF INDIA, having solemnly resolved to constitute India into a SOVEREIGN SOCIALIST SECULAR DEMOCRATIC REPUBLIC and to secure to all its citizens:

Justice, social economic and political; Liberty of thought, expression, belief, faith and worship; Equality of status and opportunity; and to promote among them all.

Fraternity assuring the dignity of the individual and the unity and integrity of the Nation ಎಂದು ಇದೆ. ಈ ತತ್ವದ ಆಧಾರದ ಮೇಲೆ ನಾವೆಲ್ಲರೂ ಕೂಡ ರಾಜ್ಯ ಕಟ್ಟುತ್ತೇವೆ, ದೇಶ ಕಟ್ಟುತ್ತೇವೆ. ಮತ್ತು ಯಾವುದೇ ಪಕ್ಷ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ತನ್ನ ಸರಕಾರವನ್ನು ನಡೆಸಿಕೊಂಡು ಹೋಗುತ್ತೇವೆ. ಇದರಲ್ಲಿ ಹೇಳಿದಂತಹ ಮಾತಿಗೆ ಬೆಲೆಯನ್ನು ಕೊಟ್ಟು ಯಾವ ರೀತಿಯಾಗಿ ನಾವು ಜನರಿಗೆ ಸಹಾಯ ಮಾಡಬೇಕು. ಅವರ ಗೌರವವನ್ನು ಕಾಪಾಡಬೇಕು, ಸಮಾನತೆ ತರಬೇಕು ಸೆಕ್ಯುಲರಿಸಮ್ ಉಳಿಸಬೇಕು ಎಂದು ವಿಚಾರ ಮಾಡಬೇಕಾಗಿದೆ. ಸಮಾಜವಾದದ ತತ್ವ ಎಂಬ ಶಬ್ದ ಹಿಂದೆ ಇರಲಿಲ್ಲ ಅದನ್ನು ಪುನಃ ಸಂವಿಧಾನದಲ್ಲಿ 76ರಲ್ಲಿ ಅಳವಡಿಸಿಕೊಂಡು ಅದಕ್ಕೆ ಒತ್ತು ಕೊಡಬೇಕೆಂಬ ದೃಷ್ಟಿಯಿಂದ ಜಾರಿಗೆ ತರಲಾಗಿದೆ. ಅದರ ಅಡಿಯಲ್ಲಿ ನಾವು ಕಾನೂನುಗಳನ್ನು ಇಟ್ಟುಕೊಂಡು, ಹೊಸ ಕಾನೂನುಗಳನ್ನು ತಯಾರು ಮಾಡಿ ಜನರಿಗೆ ಸಹಾಯ ಮಾಡಬೇಕು ಅದನ್ನು ಜಾರಿಗೆ ತರಬೇಕು ಎನ್ನುವ ಗುರಿಯಿಂದಲೇ ಈ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ನಮ್ಮ ಸಂವಿಧಾನದಲ್ಲಿ ತಂದಿದ್ದು, ಮತ್ತು ನಮ್ಮ ಸಂವಿಧಾನದ ಪ್ರಿಯಾಂಬಲ್‌ನಲ್ಲಿ ಕೂಡ ಪ್ರಮುಖವಾದ ಈ 3-4 ತತ್ವಗಳನ್ನು ಹೇಳಿದೆ. ಇದರ ಪ್ರಕಾರ ತಾವು ಅಂದರೆ ಈ ಸರಕಾರ ನಡೆದುಕೊಂಡಿದೆಯೇ? ಏಕೆಂದರೆ ಈ ಮಾತನ್ನು ಬೇರೆಯವರನ್ನು ಕೇಳುವುದಕ್ಕಾಗುವುದಿಲ್ಲ. ನಮಗೆ ಜನ ಆದೇಶ ಕೊಟ್ಟಿದ್ದಾರೆ ನಾವು ಇದೇ ರೀತಿ ನಡೆದುಕೊಳ್ಳುವುದು ಎಂದು ಹೇಳಿದರೆ ಅದು ಸರಿಯಾಗುವುದಿಲ್ಲ. ನನ್ನ ಪ್ರಿಯಾರಿಟಿ ಬರೀ ನೀರು ಕೊಡುವುದು ಇದೆ ಎಂದು ಹೇಳಬಹುದು. ಕುಡಿಯುವ ನೀರು ಕೊಡುವುದು ನನ್ನ ಪ್ರಿಯಾರಿಟಿ ಇದೆ ಎಂದು ಹೇಳಬಹುದು. ಇನ್ನು ಕೆಲವು ಜನ ಸಾಮಾಜಿಕ ನ್ಯಾಯ ಒದಗಿಸುವುದು ಇದೊಂದೇ ನನ್ನ ಪ್ರಿಯಾರಿಟಿ ಇದೆ ಎಂದು ಹೇಳಬಹುದು. ಆದರೆ ನೀವು ಮುಖ್ಯಮಂತ್ರಿಯಾಗಿ ಈ ಮಾತನ್ನು ಹೇಳುವ ಹಾಗಿಲ್ಲ. ನೀವು ಸಾಮಾಜಿಕ ನ್ಯಾಯದ ಜೊತೆಯಲ್ಲಿ ಈ ದೇಶದಲ್ಲಿ ಸಮಾಜವಾದ ಮತ್ತು ಜಾತ್ಯಾತೀತ ರಾಷ್ಟ್ರವನ್ನು ಅದರ ತತ್ವನ್ನು ಭದ್ರಪಡಿಸಬೇಕೆನ್ನುವ ಹೋರಾಟದ ಫಲವನ್ನು ಹೊತ್ತು ಈ ಮಾತುಗಳನ್ನು ಹೇಳಿ ನೀವು ಅಧಿಕಾರಕ್ಕೆ ಬಂದಿದ್ದೀರಿ.

1.10 ಪಿ.ಎಂ

ಮತ್ತು ಜೀವನದುದ್ದಕ್ಕೂ ಕೂಡ ಅದೇ ಮಾತನ್ನು ಹೇಳಿಕೊಂಡು ಹೋಗಿದ್ದೀರಿ. ಆದರೆ ಇವತ್ತು ಅದನ್ನು ಸಾಧನೆ ಮಾಡಿದ್ದೀರಾ? ಮಾಡಿದ್ದರೆ ಎಷ್ಟರಮಟ್ಟಿಗೆ ನೀವು ಸಾಧನೆ ಮಾಡಿದ್ದೀರಿ? ಈ ಮೂರು ವರ್ಷಗಳ ಅವಧಿಯಲ್ಲಿ ಯಾವ ಯಾವ ಕೆಲಸ ಈ ದಿಕ್ಕಿನಲ್ಲಿ ಅಥವಾ ಈ ತತ್ವದ ಸಮೀಪ ಬರುವ ನಿಮ್ಮ ಕೆಲಸಗಳು ಆಗಿವೆ? ನನಗೆನಿಸಿದ ಮಟ್ಟಿಗೆ ನಾನು ತಮ್ಮ ಹಿಂದಿನ ರಾಜ್ಯಪಾಲರ ಭಾಷಣವನ್ನು ಇಲ್ಲಿ ತಂದಿದ್ದೇನೆ, ಓದಿ ನೋಡಿದೆ. ಇಂದಿನ ರಾಜ್ಯಪಾಲರ ಭಾಷಣ ಕೂಡ ಇದೆ. ಅದನ್ನು ಕೂಡ ನಾನ್ ಓದಿದ್ದೇನೆ. ಆದರೆ ಇನ್ನಾವುದರಲ್ಲೂ ಕೂಡ ನಿಮ್ಮ ವಿಚಾರವನ್ನು ಅದರಲ್ಲಿ

ಅಳವಡಿಸಿಕೊಂಡು ಜನರಿಗೆ ಸಹಾಯ ಮಾಡುವ ಕೆಲಸವಾಗಿಲ್ಲ ಎಂದರೆ ಇದು ತಪ್ಪಾಗಲಾರದು. ಭಾಷಣದ ಒಳಹೊಕ್ಕು ನೋಡಿದರೆ ಪ್ರತಿಯೊಂದು ಇಲಾಖೆಯಲ್ಲಿ ಖಂಡಿತವಾಗಿಯೂ ನೀವು ಸ್ಟೇಟಸ್‌ಕೋವನ್ನು ಮೇನ್‌ಟೈನ್ ಮಾಡಿಲ್ಲ. ಇನ್ನೂ ಹಿಂದಕ್ಕೆ ಹೋಗಿದ್ದೀರಿ. ಏಕೆಂದರೆ ಈ ರಾಜಕೀಯ ಒತ್ತಡದಿಂದ ನಿಮ್ಮ ಮೇಲೆ ಇರುವ ಶಾಸಕರ ಪ್ರಭಾವ ಅಥವಾ ನಿಮ್ಮ ಪಕ್ಷದಲ್ಲಿರುವ ವೆಸ್ಟೆಡ್ ಇಂಟರೆಸ್ಟ್ ಪ್ರಭಾವವೋ ಅಥವಾ ಈ ಕುರ್ಚಿಗೆ ಅಂಟಿಕೊಂಡು ಕೂಡಬೇಕು ಎನ್ನುವ ನಿಮ್ಮ ಮನಸ್ಸಾಗಿದೆಯೋ ಗೊತ್ತಿಲ್ಲ. ಅದಕ್ಕಾಗಿ ಆ ಮಾತುಗಳನ್ನು ಕೃತಿಯಲ್ಲಿ ತರುವುದಕ್ಕೆ ಸಾಧ್ಯವಾಗಲಿಲ್ಲ ಮತ್ತು ಈ ಆಡಳಿತವನ್ನು ಕೂಡ ಸರಿಯಾದ ರೀತಿಯಿಂದ ನಡೆಸಲಿಕ್ಕೆ ನೀವು ವಿಫಲರಾಗಿದ್ದೀರಿ ಎನ್ನುವುದಕ್ಕೆ ನಾನು ಬೇರೇನೂ ಹೇಳಬೇಕಾಗಿಲ್ಲ. ಈ ಮಾತನ್ನು ನೀವೇ ಒಪ್ಪಿಕೊಂಡಿದ್ದೀರಿ, ಪತ್ರಿಕೆಯಲ್ಲಿ ಕೂಡ ಅದು ಬಂದಿದೆ. ನನಗೆ ಇಬ್ಬರ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿದ್ದೇನೆ, ನನಗೆ ಫ್ರೀಯಾಗಿ ಬಿಟ್ಟಿಲ್ಲ. ಈಗ ನಾನು ಸ್ವತಂತ್ರವಾಗಿದ್ದೇನೆ. ನನ್ನ ವಿಚಾರಧಾರೆಯನ್ನು ನನಗೆ ಕೆಲಸ ಮಾಡುವುದಕ್ಕೆ ಮುಕ್ತವಾಗಿ ಅವಕಾಶ ಇದೆ ಎನ್ನುವ ಮಾತು ಇದು ಪತ್ರಿಕೆಯಲ್ಲಿ ಬಂದಿದ್ದರೂ ಡಿನೈ ಮಾಡಿಲ್ಲ. ಸ್ಪಷ್ಟವಾಗಿ ಇದು ಬಂದಿದೆ. ನೀವೇ ಹೇಳಿಕೊಂಡಿದ್ದೀರಿ, ನನಗೆ ಬಹಳ ಫುಲ್ ಅಂಡ್ ಪ್ರೆಷರ್. ಒಂದು ಕಡೆ ಹೆಗಡೆಯವರ ಕಾಟ, ಇನ್ನೊಂದು ಕಡೆ ದೇವೇಗೌಡರ ಕಾಟ, ಇನ್ನೊಂದು ಕಡೆ ಶಾಸಕರ ಕಾಟ, ಈ ಮಧ್ಯದಲ್ಲಿ ನನಗೆ ಸರಿಯಾದ ರೀತಿಯಿಂದ ಒಂದು ಒಳ್ಳೆಯ ಆಡಳಿತ ಕೊಡಲಿಕ್ಕೆ ಅವಕಾಶವಾಗಲಿಲ್ಲ ಎನ್ನುವ ಮಾತನ್ನು ತಾವು ಮನಸಾಪೂರ್ವಕವಾಗಿ ಒಪ್ಪಿಕೊಂಡಿದ್ದೀರಿ.

ಅಧ್ಯಕ್ಷರು: ನಾನು, ಇಬ್ಬರ ಮಧ್ಯ ಎಂದರೆ ನಿಮ್ಮ ಮತ್ತು ಯಡಿಯೂರಪ್ಪನವರ ಮಧ್ಯೆ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನು ಲೈಟ್ ಆಗಿ ತೆಗೆದುಕೊಳ್ಳುವುದಿದ್ದರೆ ಅದು ಬೇರೆ. ನನಗೆ ಗೊತ್ತು. ಈ ಮಾತು ಕೊನೆಗೆ ಅವರು ತಿರುವಿ ಮುರುವಿ ಮಾಡಿ ನಗಿಸಿ ಈ ವಿಚಾರಧಾರೆಯನ್ನು ಮುಕ್ತಾಯ ಮಾಡುತ್ತಾರೆ. ನಾನು ಹೇಳುವುದು ಇದನ್ನು ಸೀರಿಯಸ್ ಆಗಿ. ಏಕೆಂದರ ಅವರು ಹೇಳುವಾಗ ನಾವು ನಗೋಣ. ಆದರೆ ನಮಗೆ ಅನೇಕ ಸಾರಿ ಏನು ದುಃಖ ಎಂದರೆ ಇವರಿಗೇನಾದರೂ ನಾವು ಸ್ವಲ್ಪ ಸೀರಿಯಸ್ ಮಾಡೋಣ, ಅಥವಾ ಇವರ ವಿಚಾರಧಾರೆಯಿಂದ ಏನಾದರೂ ಸಮಾಜದ ಈ ಕೆಳವರ್ಗಕ್ಕೆ ಲಾಭವಾಗಲಿ ಎನ್ನುವ ದೃಷ್ಟಿಯಿಂದ ನಾವು ಅನೇಕ ಸಾರಿ ಮಾತನಾಡಿದರೆ, ಹತ್ತಾರು ಪುಸ್ತಕ ತರುವುದು, ಎರಡು-ಮೂರು ಕೊಟೇಷನ್ ಹೇಳುವುದು, ನಾಲ್ಕು ಜೋಕ್ ಮಾಡಿಕೊಂಡು ಹೊರಟುಹೋಗುವುದು, ಹೀಗೆಲ್ಲಾ ಆಗಿ ಆ ವಿಷಯದ ಗಾಂಭೀರ್ಯತೆಯೇ ಹೊರಟುಹೋಗಿದೆ. ಅದಕ್ಕೆ ನಾನು ಇವತ್ತು ವಿಶೇಷವಾಗಿ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನಿಮಗೆ ಸಮಯ ಸಿಕ್ಕಿಲ್ಲ ಎಂದು ಇಲ್ಲ, ಎರಡು ವರ್ಷ ಆಯಿತು. ನಿಮ್ಮ ಸರ್ಕಾರ ಬಂದು ಮೂರು ವರ್ಷವಾಯಿತು. ಈಗ ಪೀರಿಯಡ್

ಮುಗಿಯುವುದಕ್ಕೆ 1 ವರ್ಷ 10 ತಿಂಗಳು ಉಳಿದಿದೆ. ಅಂದರೆ ನಮಗೆ ಅವಕಾಶ ಸಿಕ್ಕಿಲ್ಲ, ನೀವು ಕೆಲಸ ಮಾಡುವುದಕ್ಕೆ ಅವಕಾಶ ಕೊಡಲೇ ಇಲ್ಲ ಎನ್ನುವ ಮಾತು ಇಲ್ಲ. ಯಾವುದಾದರೂ ಅವಕಾಶ ಸಿಗದೇ ಇದ್ದರೆ ಅಥವಾ ನಿಮ್ಮ ಕೆಲಸ ಮಾಡಿಕೊಡದ ಪರಿಸ್ಥಿತಿ ನಿರ್ಮಾಣವಾಗಿದ್ದರೆ ನಿಮ್ಮವರಿಂದ ಆಗಿರಬಹುದೇ ಹೊರತಾಗಿ ಬೇರೆಯವರಿಂದ ಅಲ್ಲ. ಬೇರೆಯವರು ಇಲ್ಲಿ ನಾಲ್ಕು ವಿಷಯಗಳನ್ನು ಹೇಳಿರಬೇಕು. ಪ್ರಸ್ತಾಪ ಮಾಡಿರಬಹುದು. ಪ್ರತಿಭಟನೆ ಮಾಡಿರಬಹುದು, ಹೋಗಿರಬಹುದು. ಆದರೆ ನಿಮಗೆ ಸದವಕಾಶ ಸಿಕ್ಕಾಗ ನೀವು ಮಾಡಿದ್ದೇನು? ನನ್ನ ಕೈಯಿಂದ ಮಾಡುವುದಕ್ಕೆ ಆಗಲಿಲ್ಲ ಎನ್ನುವ ಮಾತನ್ನು ನೀವೇ ಹೇಳುವಾಗ ಎಷ್ಟರಮಟ್ಟಿಗೆ ಆಡಳಿತದಲ್ಲಿ ಬಿಗಿ ಇದೆ ಎನ್ನುವುದನ್ನು ನೀವೇ ಹೇಳಬೇಕು. ಮತ್ತು ನಿಮ್ಮ ಈ ಪರಿಸ್ಥಿತಿಯ ಒಂದು ಲಾಭವನ್ನು ಯಾರು ಪಡೆದುಕೊಂಡಿದ್ದಾರೆ ಎಂದರೆ ಈ ಒಂದು ಹೊಸ ಹೊಸ ಪರಿಸ್ಥಿತಿಗಳನ್ನು ಸೃಷ್ಟಿ ಮಾಡಿ ಅದರ ಲಾಭವನ್ನು ಕೆಲವು ರಾಜಕೀಯ ಪುಡಾರಿಗಳು ಮುಖಂಡರು ತೆಗೆದುಕೊಂಡಿರಬಹುದೇ ಹೊರತಾಗಿ ರಾಜ್ಯದ ಜನತೆಗಾಗಲೀ, ರಾಜ್ಯದ ರೈತರಿಗಾಗಲೀ, ರಾಜ್ಯದ ಬಡಜನತೆಗಾಗಲೀ ನಿಮ್ಮ ಅನುಭವದ ಲಾಭವಾಗಲೀ ನಿಮ್ಮ ವಿಚಾರದ ಲಾಭವಾಗಲೀ, ನಿಮ್ಮ ಆಡಳಿತ ಲಾಭವಾಗಲೀ ಸಿಕ್ಕಿಲ್ಲ ಎನ್ನುವ ಮಾತನ್ನು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಅದರಿಂದ ಏನಾಗಿದೆ ಎಂದರೆ ಇವತ್ತು ಯಾವ ತತ್ವದ ಮೇಲೆ ಯಾವ ಬುನಾದಿ ಮೇಲೆ ನಾವು ರಾಜ್ಯವನ್ನು ಕಟ್ಟಬೇಕು ಮತ್ತು ಯಾವ ಪಕ್ಷದ ವಿಚಾರಧಾರೆಯಿಂದ ನೀವು ಸರ್ಕಾರಗಳನ್ನು ನಡೆಸಬೇಕು ಎಂದು ಹೇಳಿ ಬಂದಿದ್ದಿರಿ, ಇವತ್ತು ಗತಿ ಏನಾಗಿದೆ? ಮೊನ್ನೆ ಚುನಾವಣೆಗಳಾದವು. ಏನು ಪರಿಸ್ಥಿತಿಯಾಯಿತು? ಈ ಚುನಾವಣೆಗಳಲ್ಲಿ ಇವತ್ತು ನೀವೆಲ್ಲರೂ ಸೇರಿ ಏನು ಮಾಡಿದ್ದೀರಿ ಎಂಬುವದನ್ನು ಹೇಳಬೇಕಾಗಿದೆ. ತಾವೆಲ್ಲರೂ ಕೂಡ ಸೇರಿ ಪ್ರೋತ್ಸಾಹ ನೀಡಿ ಇವತ್ತು ಯಾವ ಜಾತಿವಾದಿ ಪಕ್ಷ ಇದೆ ಯಾರಿಗೆ ಅಧಿಕಾರದಿಂದ ದೂರ ಇಡಬೇಕು ಎನ್ನುವ ಇಚ್ಛೆ ಜನರದ್ದು ಇತ್ತು, ಅಂಥವರ ಜೊತೆಯಲ್ಲಿ ಶಾಮೀಲಾಗಿ ಈ ಸಂವಿಧಾನದಲ್ಲಿ ಏನು ನಾವು ಎಲ್ಲರೂ ಕೂಡ ಪ್ರಮಾಣವಚನವನ್ನು ತೆಗೆದುಕೊಂಡು ಇದರ ರಕ್ಷಣೆ ಮಾಡುತ್ತೇವೆ ಎಂದು ಹೇಳಿದ್ದೇವೆ, ಅದಕ್ಕೆ ಮೋಸ, ದಗಾ, ದ್ರೋಹ ಮಾಡುವ ಕೆಲಸ ಯಾರಾದರೂ ಮಾಡಿದ್ದರೆ ಅದನ್ನು ನೀವು ಮಾಡಿದಿರಿ ಎನ್ನುವ ಮಾತನ್ನು ನಾನು ಇವತ್ತು ಸ್ಪಷ್ಟವಾಗಿ ಹೇಳುತ್ತೇನೆ. ನಾನು ನಿಮ್ಮಿಂದ ಉತ್ತರವನ್ನು ಬಯಸುತ್ತೇನೆ. ಇವತ್ತು ಜನತಾದಳದ ಮೇಲೆ ಒಂದು ಪ್ರಣಾಳಿಕೆಯನ್ನು ತೆಗೆದುಕೊಂಡು ಜನರ ಮುಂದೆ ಹೇಳಿಕೊಂಡು, ಈ ಒಂದು ಸಂವಿಧಾನದಲ್ಲಿರುವ ಅಂಶಗಳನ್ನು ಎದುರು ಇಟ್ಟುಕೊಂಡು ಯಾವ ಮಾತನ್ನು ಹೇಳಿಕೊಂಡು ಅಧಿಕಾರವನ್ನು ಸ್ವೀಕಾರ ಮಾಡಿದವರು, ಏನು ಕೆಲಸವನ್ನು ಮಾಡುತ್ತಿದ್ದೀರಿ ಎಂದರೆ ಆ ಸಂವಿಧಾನದ ವಿರುದ್ಧ, ಆ ತತ್ವಗಳ ವಿರುದ್ಧ ಮತ್ತು ಯಾವ ತತ್ವವನ್ನು ನೀವು ಬಲಿಷ್ಠಪಡಿಸಬೇಕು ಎಂದು ಹೇಳಿದ್ದೀರಿ, ಪ್ರತ್ಯಕ್ಷವಾಗಿ. ಅಪ್ರತ್ಯಕ್ಷವಾಗಿ ನಿಮ್ಮ ಕುರ್ಚಿಯನ್ನು ಉಳಿಸಿಕೊಳ್ಳಬೇಕು ಎಂದು ಹೇಳಿ ಅದಕ್ಕೆ ತಿಲಾಂಜಲಿಯನ್ನು ಕೊಡುವ ಕೆಲಸವನ್ನು ಮಾಡಿದಿರಿ ಎನ್ನುವ ಆಪಾದನೆ, ನಾನಲ್ಲ, ಈ

ರಾಜ್ಯದಲ್ಲಿರುವ ಐದು ಕೋಟಿ ಜನ ಇವತ್ತು ನಿಮಗೆ ಶಾಪವನ್ನು ಹಾಕುತ್ತಿದ್ದಾರೆ. ನೀವು ಹೇಳಿಕೊಳ್ಳಬಹುದು. ಅನೇಕ ಕಾರಣಗಳನ್ನು ಕೊಡಬಹುದು. ನಾವು ಹೀಗೆ ಮಾಡಿದ್ದೇವೆ, ನಿಮಗ್ಯಾಕೆ ಚಿಂತೆ ಎನ್ನಬಹುದು. ಇದು ನಮಗೆ ಚಿಂತ ಅಲ್ಲ. ಇಡೀ ದೇಶಕ್ಕೆ ಚಿಂತೆಯಾಗಿದೆ, ರಾಜ್ಯಕ್ಕೆ ಚಿಂತೆಯಾಗಿದೆ. ಜನರಿಗೆ ಚಿಂತೆಯಾಗಿದೆ. ಇವತ್ತು ಯಾರಾದರೂ ಒಬ್ಬರು ಐದು ವರ್ಷ ಮುಖ್ಯಮಂತ್ರಿಗಳು ಇರಬಹುದು, ಹೋಗಬಹುದು. ಆದರೆ ಒಂದು ಸಲ ಈ ಸಮಾಜದ ವ್ಯವಸ್ಥೆ ಕೆಟ್ಟುಹೋದರೆ ರಾಜ್ಯದ ವ್ಯವಸ್ಥೆ ಕೆಟ್ಟುಹೋದರೆ ಅದನ್ನು ಸುಧಾರಣೆ ಮಾಡಬೇಕು ಎಂದರೆ ಸಾವಿರಾರು ಜನ ನಿಮ್ಮಂಥ ರಿಫಾರ್ಮರ್ಸ್ ಆಗಲೀ ಅಥವಾ ಹೇಳಿಕೊಳ್ಳುವ ಮುಖಂಡರು ಏನು ಇದ್ದೀರಿ, ಅವರು ಹುಟ್ಟಿದರೂ ಕೂಡ ಪುನಃ ಆ ವ್ಯವಸ್ಥೆ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಅದಕ್ಕೆ ಇಂಥ ಹದಗೆಟ್ಟಂಥ ರಾಜಕೀಯ ಪರಿಸ್ಥಿತಿಯನ್ನು ಮಾಡುವುದಕ್ಕೆ ಇವತ್ತು ನೀವು ಕಾರಣಕರ್ತರಿದ್ದೀರಿ. ಇವತ್ತು ಏನಾಗಿದೆ, ಇವತ್ತು ನನ್ನ ಪಕ್ಷಕ್ಕೂ ಕೂಡ ಹೆಚ್ಚಿನ ಬೆಂಬಲ ಸಿಕ್ಕಿದೆ. ಸಿಕ್ಕಿದರೆ ಅದರಿಂದಲೇ ನಾನು ಶಹಭಾಷ್‌ಗಿರಿ ಪಡೆದುಕೊಂಡು ಬಹಳ ಸಂತೋಷದಿಂದಿದ್ದೇನೆ ಎನ್ನುವುದಲ್ಲ. ಇವತ್ತು ನಮಗೆ ಪಾರ್ಲಿಮೆಂಟ್‌ನಲ್ಲಿ 9 ಸೀಟು ಸಿಕ್ಕಿರಬಹುದು. ಅವರಿಗೆ 13 ಸೀಟು ಸಿಕ್ಕಿರಬಹುದು. ನಿಮ್ಮಿಂದಲೇ ಒಡೆದುಬಂದು ಸಿಡಿದುಬಂದು ನಿಮಗೆ ಅವರಿಗೆ ಪ್ರೀತಿ ಇದ್ದದ್ದು ಈ ಕಡೆ ಅಪ್ಪಿಕೊಂಡು ಅವರೂ ಇವರೂ ಒಂದಾಗಿ ಅವರಿಗೂ ಮೂರು ಸೀಟು ಸಿಕ್ಕಿರಬಹುದು. ಆದರೆ, ಇವತ್ತು ಪರಿಸ್ಥಿತಿ ಏನಾಗಿದೆ? ಆದರೆ ಇವತ್ತು ಪರಿಸ್ಥಿತಿ ನೀವು ಯಾವುದು ಬೇಡ ಎಂದು ಹೇಳಿ, ಯಾವ ಸರ್ಕಾರವನ್ನು ದೂಷಿಸಿದಿರಿ, ಕಾಂಗ್ರೆಸ್ ಪಾರ್ಟಿಯನ್ನು, ಅಥವಾ ಕಾಂಗ್ರೆಸ್ ಸರ್ಕಾರಗಳನ್ನು ದೂಷಿಸುತ್ತೀರಿ. ಅವರನ್ನು ಹತ್ತಿಕ್ಕುವ ಪ್ರಯತ್ನವನ್ನು ಮಾಡಿದಿರಿ. ಆದರೆ ನೀವಾದರೂ ಯಶಸ್ವಿಯಾಗಿ ಈ ಸಂವಿಧಾನದಲ್ಲಿರುವ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಅದಕ್ಕೆ ರಕ್ಷಣೆ ಮಾಡುವುದಾದರೂ ಮಾಡಿದಿರಾ? ಎಲ್ಲಿ ಹೋದಲ್ಲಿ ಯಾವುದಾದರೂ ಒಂದು ಮಾತನ್ನು ತೆಗೆದುಕೊಳ್ಳುವುದು, ಬಯ್ಯುವುದು. ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಏಕೆಂದರೆ ಅವರಿಗೆ ಮಾತನಾಡುವುದಕ್ಕೆ ಬರುತ್ತದೆ ಎಂದು ಹೇಳಿ ಅನೇಕ ಸಾರಿ ಬೇರೆ ಬೇರೆ ಮಾತನಾಡುತ್ತಾರೆ. ಅದನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಆದರೆ ಇದು ರಾಜ್ಯಪಾಲರ ಭಾಷಣ 11ನೇ ಫೆಬ್ರವರಿ 1997ರದ್ದು. ಪೇಜ್ 3, ಪ್ಯಾರಾ 5 ತಮ್ಮ ಗಮನಕ್ಕೂ ಕೂಡ ಮಾನ್ಯ ಅಧ್ಯಕ್ಷರೇ ತರುತ್ತಿದ್ದೇನೆ. ಅವರು ಹೇಳಿರುವುದರಲ್ಲಿ ಅದು ಈ ರೀತಿ ಇದೆ.

"The Hon'ble Members are well aware that the present year is of special significance for all Indians, wherever they may be. Fifty years ago India achieved independence from foreign rule. Since then, our Nation has made significant progress in

many areas. The ideals of a resurgent, progressive and strong India which inspired the Freedom Fighters and the framers of our Constitution, must be revived once again and the feeling of excitment and rededication of our energies to Nation-building must be brought back. My Government is drawing up plans for celebrating this significant event. Apart from highlighting our achievements we would also like to educate our people on the threats that still persist to a liberal, tolerant and equitable society. Social evils like religious fundamentalism, casteism and corruption, will have to be fought relentlessly. Secularism, communal harmony, social justice and harmonious Centre-State relations must be emphasised." ಎಂಬ ಮಾತನ್ನು ತಾವು ಹೋದ ವರ್ಷ ರಾಜ್ಯಪಾಲರ ಭಾಷಣದಲ್ಲಿ ಹೇಳಿದಿರಿ. ಆದರೆ ಅದತಕ್ಕೆ ತಕ್ಕಂತೆ ನಡೆದುಕೊಂಡಿರಾ? ನೀವು ಏನು ಮಾಡಿದಿರಿ? ನೀವು ಯಾವ ಸೆಕ್ಯುಲರಿಸಮನ್ನು ರಕ್ಷಣೆ ಮಾಡುತ್ತೇವೆ ಎಂದು ಹೇಳಿಕೊಂಡು ಬಂದಿರಿ, ಆ ಸೆಕ್ಯುಲರಿಸಂ ತತ್ವವನ್ನೇ ಸಮಾಧಿ ಮಾಡಿ ಇವತ್ತು ಜಾತಿವಾದಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಿ ಅವುಗಳಿಗೆ ಕಾಂಟ್ರಿಬ್ಯೂಟ್ ಮಾಡಿ ಬೆಳೆಸಿ, ಈ ರಾಜ್ಯದಲ್ಲಷ್ಟೇ ಅಲ್ಲ, ದೇಶದಲ್ಲಿಯೂ ಕೂಡ ಅವು ಬೆಳೆಯುವುದಕ್ಕೆ ನೀವೇ ಕಾರಣಕರ್ತರಾಗಿದ್ದೀರಿ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದಕ್ಕೆ 50 ವರ್ಷಗಳಲ್ಲಿ ಏನಾಗಿದೆ ಎಂಬುದನ್ನು ಇಲ್ಲಿ ಹೇಳಿದ್ದೀರಿ. ನಾವು ಬೇಕಾದಷ್ಟು ಸಾಧನೆ ಮಾಡಿದ್ದೇವೆ ಇನ್ನೂ ಮಾಡಬೇಕಾದುದು ಬಹಳಷ್ಟಿದೆ ಎಂಬ ಮಾತನ್ನು ನೀವೇ ಹೇಳಿದ್ದೀರಿ. ಜೊತೆಗೆ 50 ವರ್ಷಗಳಲ್ಲಿ ಕಾಂಟ್ರಿಬ್ಯೂಟ್ ಮಾಡಿದಂತಹ ಅನೇಕರು ನಿಮ್ಮ ಜೊತೆಯಲ್ಲಿದ್ದಾರೆ. ನಾನು ಅವರ ಹೆಸರುಗಳನ್ನು ಹೇಳುವುದಿಲ್ಲ, ಅದಕ್ಕಾಗಿ ವಾದ ವಿವಾದ ಕೂಡ ಬೇಕಾಗಿಲ್ಲ. ಅವರು ಈ ಕಡೆ ಸುಮಾರು 25-30 ವರ್ಷ ಅನುಭವ ಪಡೆದುಕೊಂಡು ಮತ್ತೆ ಆ ಕಡೆ ಹೋಗಿ ಅಲ್ಲಿಯೂ ಕೂಡ ಅನುಭವ ಪಡೆದು ಮತ್ತೆ ನಿಮ್ಮ ಮುಖಂಡರಾಗಿ ಬಂದು ಯಾವ ತತ್ವಗಳಿಗೆ ಬೆಲೆ ನೀಡುತ್ತೇವೆ ಎಂದು ಪ್ರತಿಪಾದನೆ ಮಾಡಿಕೊಂಡು ಬಂದರು ಆ ತತ್ವಗಳಿಗೆ ತಿಲಾಂಜಲಿ ಕೊಟ್ಟು ಕುರ್ಚಿಗಳು ಮತ್ತು ಅಧಿಕಾರಗಳನ್ನು ಭದ್ರಪಡಿಸಿಕೊಳ್ಳಬೇಕೆಂದು ಹೇಳಿ ಏನು ಕುತಂತ್ರ, ತಂತ್ರಗಳನ್ನು ನಡೆಸಿದ್ದಾರೆ ಆ ಎಲ್ಲಾ ಶ್ರೇಯಸ್ಸು ನಿಮಗೆ ಸೇರಬೇಕಾಗುತ್ತದೆ. ಅದಕ್ಕಾಗಿ ಇಲ್ಲಿ ನಿಮ್ಮ ಒಂದು ಪ್ರಯತ್ನ ಏನಿದೆ ಎನ್ನತಕ್ಕಂಥದ್ದು ಬಹಳ ಮುಖ್ಯ. ಆ ಪ್ರಯತ್ನದಿಂದಾಗಿ ನೀವು ಹೇಳಿದಂತಹ ಮಾತನ್ನು ಉಳಿಸಿಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಆಗಿಲ್ಲ. ಸಂವಿಧಾನದಲ್ಲಿರತಕ್ಕಂಥ ಮಾತುಗಳಿಗೆ ಬೆಲೆ ಕೊಟ್ಟು ಅದನ್ನು ಉಳಿಸಿ ಕಾಪಾಡುವ ಶಕ್ತಿ ನಿಮಗೆ ಬರಲಿಲ್ಲ. ಇದರಿಂದ ಈ ರಾಜ್ಯಕ್ಕೆ ಹೆಚ್ಚಿನ ಆಘಾತವಾಗಿದೆ. ನೀವು ಒಂದೆರಡು ಕೊಳವೆ ಬಾವಿಯನ್ನು ತೋಡಿಸಿರಬಹುದು ಅಥವಾ ರಿಪೇರಿ ಮಾಡಿಸಿರಬಹುದು.

ಅದನ್ನು ನೀವು ಮಾಡಿದ್ದೀರಿ, ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಸಮಾಜದ ವ್ಯವಸ್ಥೆಯನ್ನು ನೀವು ಕೆಡಿಸಿದ್ದೀರಿ. ರಾಜ್ಯದ ವ್ಯವಸ್ಥೆಯನ್ನು ಹದಗೆಡಿಸಿದ್ದೀರಿ. ಇದನ್ನು ರಿಪೇರಿ ಮಾಡುವುದಕ್ಕೆ ಎಷ್ಟು ಕೋಟಿ ರೂಪಾಯಿ ಬೇಕು, ಎಷ್ಟು ಜನ ಬೇಕು, ಎಷ್ಟು ವರ್ಷ ಬೇಕು ಎನ್ನತಕ್ಕಂಥ ಮಾತನ್ನು ನಾನು ಇವತ್ತು ಕೇಳಬಯಸುತ್ತೇನೆ. ಇವತ್ತಿನ ದಿವಸ ಸಂಪೂರ್ಣವಾಗಿ ತಾವು ಇದರಲ್ಲಿ ವಿಫಲರಾಗಿದ್ದೀರಿ. ತಮ್ಮಿಂದ ಯಾವ ಪ್ರಾಮಾಣಿಕ ಪ್ರಯತ್ನ ಕೂಡ ನಡೆಯಲಿಲ್ಲ. ಅಧಿಕಾರದ ಆಸೆಯಿಂದ ಈ ಕುರ್ಚಿಯನ್ನು ಉಳಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ತಮ್ಮೆಲ್ಲಾ ಪ್ರಯತ್ನ ನಡೆಯಿತು. ಇದರಿಂದಾಗಿ ತಮ್ಮ ಲಕ್ಷ್ಯವನ್ನು ಆಡಳಿತದ ಕಡೆಗೆ ಕೊಡಲು ಸಹ ಆಗಲಿಲ್ಲ. ಏಕೆಂದರೆ ಈಗಾಗಲೇ ನಾವು ನೋಡಿದ್ದೇವೆ, ಮೊನ್ನೆ ರೈತರ ಬಗ್ಗೆ ಮಾತನಾಡಿದರು, ಕೆಇಬಿ ವಿಷಯ ಪ್ರಸ್ತಾಪವಾಯಿತು, ಪುನಃ ನೀರಾವರಿ ವಿಷಯ ಹೀಗೆ ಅನೇಕ ವಿಷಯಗಳು ಪ್ರಸ್ತಾಪವಾಗುತ್ತಿವೆ. ಆದರೆ ಇವತ್ತು ಈ ಕಡೆ ಕೂಡ ತಮ್ಮ ಗಮನವನ್ನು ಹರಿಸಲಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಒಂದು ಹೊಸ ವಿಷಯವನ್ನು ಪ್ರಸ್ತಾಪ ಮಾಡಲಾಗಿದೆ. ಅದರಲ್ಲಿ ಅಂತಹ ಹೊಸ ಯೋಜನೆಗಳೇನೂ ಇಲ್ಲ. ಬಹುಪಾಲು ಹಳೆಯ ಯೋಜನೆಗಳನ್ನೇ ಸ್ವಲ್ಪ ಹೆಚ್ಚು ಕಡಿಮೆ ತಿರುಗು ಮುರುಗು ಮಾಡಿ ಹೇಳಿದ್ದಾರೆ. ರಾಜ್ಯಪಾಲರ ಭಾಷಣದ 4ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಎಂದರೆ, "There is no improvement in the State economy by any of the foreign investment. The economic growth rate is on the decline." ಅಂದರೆ ನ್ಯಾಷನಲ್ ಅವರೇಜ್ ಗ್ರೋತ್ ರೇಟ್ 5.6 ಪರ್ಸೆಂಟ್. ಆ ಆವರೇಜನ್ನು ನಾವು ಆರ್ಥಿಕವಾಗಿ ರೀಚ್ ಆಗುತ್ತೇವೆ ಎನ್ನುವಂತಹ ಮಾತನ್ನು ಅದರಲ್ಲಿ ಹೇಳಿದ್ದಾರೆ. ಆದರೆ ಇವತ್ತು ಸಾಧನೆ ಮಾಡಿದ್ದು ಎಷ್ಟು ಎಂಬುದನ್ನು ಹೋಲಿಸಿ ನೋಡಿದರೆ ಕೇವಲ ಶೇಕಡ 5.3 ಮಾತ್ರ. ಆದುದರಿಂದ, ಈ ಗ್ರೋತ್ ರೇಜ್ ರಾಷ್ಟ್ರ ಮಟ್ಟದಲ್ಲಿ 5.6 ಪರ್ಸೆಂಟ್ ಇದ್ದರೆ ರಾಜ್ಯ ಮಟ್ಟದಲ್ಲಿ 5.3 ಪರ್ಸೆಂಟ್ ಇದೆ. ಅಂದರೆ ನಾವು ಇನ್ನೂ ನ್ಯಾಷನಲ್ ಗ್ರೋತ್‌ರೇಟ್ ಆ್ಯವರೇಜ್‌ಗಿಂತಲೂ 0.3 ಪರ್ಸೆಂಟ್‌ನಷ್ಟು ಕಡಿಮೆ ಇದ್ದೇವೆ. ಅವರು ಹೋದ ಸಲ ಏನು ಹೇಳಿದ್ದಾರೆ ಆ ಮಾತಿಗೂ ನಾನು ಬರುತ್ತೇನೆ. ಆದರೆ ಇವತ್ತು ನೀವು ಹೇಳಿದ್ದು ಮತ್ತು ರಾಜ್ಯಪಾಲರಿಂದ ಮಾಡಿಸಿದಂತಹ ಭಾಷಣವನ್ನೂ ನೋಡಿದರೆ ನಿಜವಾಗಿಯೂ ಇದನ್ನು ಸಾಧನೆ ಮಾಡಲು ಅಥವಾ ನ್ಯಾಷನಲ್ ಆವರೇಜನ್ನು ಮುಟ್ಟಲು ಈಗಲೂ ನಿಮ್ಮಿಂದ ಆಗುವುದಿಲ್ಲ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ, ನೀವು ಮಾತ್ರ ಯಾವುದೋ ದೃಷ್ಟಿಯಿಂದ ಅದನ್ನು ಅಚೀವ್ ಮಾಡುತ್ತೇವೆ ಎಂದು ಹೇಳಿಕೊಳ್ಳಬಹುದು. ಆದರೆ ನನಗೆ ಆ ಬಗ್ಗೆ ಅಂಕಿಅಂಶಗಳು ಬೇಕು. ಕಳೆದ ಸಲ ಕೂಡ ಪ್ಲ್ಯಾನಿಂಗ್ ಬಗ್ಗೆ ರಾಜ್ಯಪಾಲರ ಭಾಷಣದ 5ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಎಂದರೆ, 9th 5 year plan, it is mentioned that the State would plan to match the national economic growth rate of 7%. But this year the State's

growth rate stood at 5.4% only i.e., 1.6% less than the national average. ಈ ವರ್ಷ ನಮಗೆ ಸಿಕ್ಕಿರುವಂತಹ ಅಂಕಿಅಂಶಗಳ ಪ್ರಕಾರ ಈ ವರ್ಷ ಕೂಡ ತಾವು 0.3 ಪರ್ಸೆಂಟ್‌ಗಿಂತಲೂ ಕಡಿಮೆ, ಅಂದರೆ ಕಳೆದ ವರ್ಷ 7 ಪರ್ಸೆಂಟ್ ಬೆಳವಣಿಗೆ ಸಾಧಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ಅದನ್ನು ಸಾಧಿಸಲು ನಿಮಗೆ ಸಾಧ್ಯವಾಗಲಿಲ್ಲ. ಈ ವರ್ಷ ನೀವು ಕಡಿಮೆ ಪ್ರಮಾಣದಲ್ಲಿ ಗುರಿ ಇಟ್ಟುಕೊಂಡರೂ ಸಹ ಆ ಗುರಿಯನ್ನು ಮುಟ್ಟಲಾಗದೆ ನ್ಯಾಷನಲ್ ಗ್ರೋತ್ ರೇಟ್ ಆವರೇಜ್ ಪ್ರಮಾಣದಲ್ಲಿ ಕಡಿಮೆ ಮಟ್ಟಕ್ಕೆ ಬಂದಿದ್ದೀರಿ. ಅಂದರೆ ಇದು ಏನು ತೋರಿಸುತ್ತದೆ ಎಂದರೆ ನಮ್ಮ ರಿಸೋರ್ಸ್ ಮೊಬಲೈಸ್ ಮಾಡುವುದರಲ್ಲಾಗಬಹುದು, ಅಥವಾ ಆಡಳಿತದಲ್ಲಿ ಇರಬಹುದು, ನಿಮ್ಮ ಇಚ್ಛಾಶಕ್ತಿಯಲ್ಲಾಗಬಹುದು ನೀವು ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಿಲ್ಲ, ಪ್ರಯತ್ನ ಮಾಡುತ್ತಿಲ್ಲ ಎಂಬುದಕ್ಕೆ ಇದು ಒಂದು ಉದಾಹರಣೆ ಸಾಕು. ಇವರು ಇನ್ನೂ ಅನೇಕ ಮಾತುಗಳನ್ನು ಕೆಇಬಿ ಬಗ್ಗೆ, ಪವರ್ ಜನರೇಟರ್ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಬೇರೆ ಬೇರೆ ಪ್ರಶ್ನೆಗಳೂ ಕೂಡ ಇವೆ. ಅವುಗಳ ಬಗ್ಗೆ ನಾನು ಆನಂತರ ಮಾತನಾಡುತ್ತೇನೆ. ಆದರೆ ಹೊಸ ಜಿಲ್ಲೆಗಳನ್ನು ಫ್ರೇಮ್ ಮಾಡಿದ್ದೇವೆ ಎನ್ನತಕ್ಕಂಥ ನಿಮ್ಮ ಮಾತನ್ನು ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ವಿಶೇಷವಾಗಿ ಶ್ರೀ ವಾಟಾಳ್ ನಾಗರಾಜ್‌ರವರು ಇದರಿಂದ ಹೆಚ್ಚು ಖುಷಿ ಪಟ್ಟು ಅವರು ತಮ್ಮ ಫೋಟೋವನ್ನು ಬಾಜಾ ಭಜಂತ್ರಿ ಸಮೇತ ಮೆರವಣಿಗೆ ಮಾಡಿದ್ದಾರೆ ಎಂದು ಕಾಣುತ್ತದೆ.

ಶ್ರೀ ವಾಟಾಳ್‌ನಾಗರಾಜ್: ಯಾದಗಿರಿಯನ್ನು ಹೊಸ ಜಿಲ್ಲೆಯನ್ನಾಗಿ ಮಾಡಿದರೆ ಅವರೂ ಕೂಡ ಹಾಗೆಯೇ ಮೆರವಣಿಗೆ ಮಾಡಲು ಕಾಯುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಎಲ್ಲಿ ನ್ಯಾಯವಾಗಿ ಹೊಸ ಜಿಲ್ಲೆ ಮಾಡಬೇಕಾಗಿದೆ ಅಲ್ಲಿ ಮಾಡಿ ಎಂದು ಹೇಳಿದ್ದೇವೆ. ಆದರೆ ಈಗಾಗಲೇ ಬಂದಿರುವ ಮೂರು ರಿಪೋರ್ಟ್‌ಗಳೂ ಕೂಡ ಯಾದಗಿರಿಯನ್ನು ಹೊಸ ಜಿಲ್ಲೆಯನ್ನಾಗಿ ಮಾಡಬೇಕೆಂಬ ವಿಷಯದ ಪರವಾಗಿದ್ದರೂ ಕೂಡ ಸರ್ಕಾರ ಅಧಿಕಾರಿಗಳ ರಿಪೋರ್ಟ್ ತರಿಸಿಕೊಂಡು ಮಾಡುತ್ತೇವೆ ಎಂದರು. ಆ ರಿಪೋರ್ಟ್ ಸಹ ಯಾದಗಿರಿಯ ಪರವಾಗಿದ್ದರೂ ಕೂಡ ನೀವು ಅದನ್ನು ಹೊಸ ಜಿಲ್ಲೆಯನ್ನಾಗಿ ಮಾಡದಿರುವುದಕ್ಕೆ ಕಾರಣವೇನು? ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲ ಜಿಲ್ಲೆಗಳನ್ನು ಎರಡು ಮೂರು ಬೇರೆ ಬೇರೆ ಜಿಲ್ಲೆಗಳನ್ನಾಗಿ ಮಾಡಿದಿರಿ. ವರದಿ ಆಧಾರದ ಮೇಲೆ ಅವುಗಳನ್ನೆಲ್ಲಾ ಮಾಡುತ್ತೇವೆ ಎಂದು ಹೇಳಿದಿರಿ, ಕೆಲವನ್ನು ಆ ರೀತಿ ಮಾಡಿದಿರಿ. ಆದರೆ ಯಾದಗಿರಿ ಪರವಾಗಿ ರಿಪೋರ್ಟ್ ಇದ್ದರೂ ಕೂಡ ನೀವು ಅದನ್ನು ಏತಕ್ಕೆ ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡುತ್ತಿಲ್ಲ? ಅಂದರೆ ಯಾರೋ ಇಬ್ಬರು ಮೂವರು ಸದಸ್ಯರುಗಳು ನಿಮ್ಮನ್ನು ಹೆದರಿಸುತ್ತಾರೆ ಎಂದು ಹೆದರಿಕೆಯಿಂದ ನೀವು ಅದನ್ನು ಮಾಡಲಿಲ್ಲವೇ ಹೊರತು ಅದನ್ನು ಬಿಟ್ಟು ಬೇರೆ ಇನ್ನೇನು ಕಾರಣವಿದೆ? ಅದಕ್ಕೆ ನಾನು ಹೇಳಿದ್ದುದು ಅನೇಕ ಸಲ

ನಿಮ್ಮ ವಿಚಾರಗಳು ಎಷ್ಟೇ ಸ್ಪಷ್ಟವಾಗಿದ್ದರೂ ಕೂಡ ನಿಮ್ಮ ಮನಸ್ಸು ಆ ಕೆಲಸವನ್ನು ಮಾಡಬೇಕೆಂದಿದ್ದರೂ ಕೂಡ ಅದನ್ನು ಮಾಡತಕ್ಕಂತಹ ಧೈರ್ಯ ಕೆಲವು ಸಲ ಕುಂಠಿತವಾಗುತ್ತದೆ. ಯಾವ ಕಾರಣಕ್ಕಾಗಿ ಯಾದಗಿರಿ ಜಿಲ್ಲೆ ಆಗಲಿಲ್ಲ ಎನ್ನತಕ್ಕಂಥದ್ದಕ್ಕೆ ಇದೂ ಒಂದು ಸಾಕ್ಷಿ. ಯಾವ ಕಾರಣಕ್ಕಾಗಿ ಅದು ಹಾಗೆಯೇ ಉಳಿದಿದೆ ಎಂಬುದು ನನಗೆ ಗೊತ್ತಿಲ್ಲ. ಒಂದು ವೇಳೆ ಅಲ್ಲಿ ನಾನು ಎಂಎಲ್ಎ ಆಗಿದ್ದೇನೆ ಎಂಬ ಕಾರಣವೊ ಅಥವಾ ಅಲ್ಲಿ ವಿರೋಧ ಪಕ್ಷದ ಇನ್ನೊಬ್ಬ ಶಾಸಕರಾದ ಶ್ರೀಮಾನ್ ಮಲಕರೆಡ್ಡಿಯವರಿದ್ದಾರೆ ಎಂಬ ಕಾರಣದಿಂದಲೋ ಅಥವಾ ಬೇರೆ ಇನ್ನು ಯಾವ ಕಾರಣಕ್ಕಾಗಿ ಅದನ್ನು ತಾವು ಮಾಡಲಿಲ್ಲ? ಎಲ್ಲಾ ಕಡೆಗಳಲ್ಲಿ ಅವರಿಗೆ ಬೇಕಾದಂತಹ ಸರ್ಕಲ್ ಇನಸ್ಪೆಕ್ಟರ್‌ಗಳನ್ನು, ಇಂಜಿನಿಯರುಗಳನ್ನು, ಜ್ಯೂನಿಯರ್ ಇಂಜಿನಿಯರುಗಳನ್ನು ವರ್ಗಾವಣೆ ಮಾಡಿದಿರಿ. ಆದರೆ ಇಲ್ಲಿಯವರೆಗೆ ನಮ್ಮ ಕ್ಷೇತ್ರದಲ್ಲಿ ಇಂಥದ್ದನ್ನು ಮಾಡಿ ಎಂದು ಒತ್ತಡವನ್ನು ಇದುವರೆಗೆ ನಾವು ಮಾಡಿಲ್ಲ. ನನ್ನ ಕ್ಷೇತ್ರದಲ್ಲಿರತಕ್ಕಂಥ ಒಬ್ಬ ಒಳ್ಳೆಯ ಮನುಷ್ಯನನ್ನು ಇಲ್ಲಿಯೇ ಇಡಿ ಅಥವಾ ಅಲ್ಲಿಗೆ ಹಾಕಿರಿ ಎಂದರೆ ಅಲ್ಲಿಗೆ ನೀವು ಯಾರನ್ನೂ ಕೂಡ ತಂದು ಹಾಕಲಿಲ್ಲ. ಆ ಗೋಜಿಗೆ ನಾನು ಬರುವುದೂ ಇಲ್ಲ. ನಿಮಗೆ ಬೇಕಾದ್ದನ್ನು ಮಾಡಿಕೊಳ್ಳಿ. ನೀವು ಬೇಕಾಗಿದ್ದನ್ನೆಲ್ಲಾ ಕೊಟ್ಟಿರಲ್ಲಾ ಸ್ವಾಮಿ, ಕೊನೆಗೆ ಏನಾಯಿತು? ಇಡೀ ರಾಜ್ಯದಲ್ಲಿ 224 ಸ್ಥಾನಗಳಲ್ಲಿ ಕೇವಲ 24 ವಿಧಾನಸಭಾ ಕ್ಷೇತ್ರಗಳಲ್ಲಿ ನಿಮ್ಮ ಪಕ್ಷ ಮೆಜಾರಿಟಿ ಬಂತು. ಮತ್ತೆ ನಿಮಗೆ ಎಷ್ಟು ಪರ್ಸೆಂಟ್ ಮತ ಬಂದಿದೆ? ಜನರ ಬೆಂಬಲ ಎಷ್ಟು ಸಿಕ್ಕಿದೆ? ಕೇವಲ 21 ಪರ್ಸೆಂಟ್ ಮಾತ್ರ. ನೀವು 38 ಸ್ಥಾನಗಳಿಂದ 21 ಸ್ಥಾನಕ್ಕೆ ಬಂದಿರಿ. ಏತಕ್ಕೆ ಬಂದಿರಿ? ಈ ಎಲ್ಲಾ ತತ್ವಗಳಿಗೆ ತಿಲಾಂಜಲಿ ಕೊಟ್ಟು ಒಳ ಜಗಳವಾಡಿ ನೀವು ಈ ರೀತಿ ಆಡಳಿತದಲ್ಲಿ ಬೇಕಾದ್ದನ್ನೆಲ್ಲಾ ಕೊಟ್ಟಿರಲ್ಲಾ ಅದನ್ನು ನಿಮ್ಮ ಮನಸ್ಸಿಗೆ ವಿರುದ್ಧವಾಗಿಯೂ ಮತ್ತು ಮಂತ್ರಿಗಳ ಮನಸ್ಸಿಗೆ ವಿರುದ್ಧವಾಗಿಯೂ ನೀವು ಮಾಡಿರಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೆ, ಇಬ್ಬರು ಕಳೆದುಕೊಂಡವರು. ಎಲ್ಲಿ ಹುಡುಕಬೇಕೋ ಅಲ್ಲಿ ಹುಡುಕದೇ ಇಲ್ಲಿ ಹುಡುಕುತ್ತಿದ್ದಾರೆ, ಅದೇ ಆಗಿರುವ ಸಮಸ್ಯೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಕಳೆದುಕೊಂಡಿಲ್ಲ, ನಾವು ಬೆಳೆಯುತ್ತಿದ್ದೇವೆ. ಇವತ್ತು ತಮಗೆ ಓಟು ಸಿಕ್ಕಿರತಕ್ಕದ್ದು 26 ಪರ್ಸೆಂಟ್.

ಶ್ರೀ ಬಿ.ಎಸ್.ಯಡಿಯೂಪ್ಪ: ಯಾರು ಹೇಳಿದ್ದು? ನಮಗೆ 40 ಪರ್‌ಸೆಂಟ್ ಓಟು ಬಂದಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ದಯಮಾಡಿ ನಾನು ಹೇಳುವುದನ್ನು ಮೊದಲು ಕೇಳಿ, ಆನಂತರ ತಾವು ಉತ್ತರ ಕೊಡಿ. ನಾನು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗಳಾದ ಕ್ಷೇತ್ರಪಾಲ್‌ರವರಿಂದಲೇ ಸರ್ಟಿಫಿಕೇಟ್‌ನ್ನು ತಂದಿದ್ದೇನೆ. ಬೇಕಾದರೆ ತಮಗೂ ಅದನ್ನು ಕೊಡುವೆ. 1996ರಲ್ಲಿ ಕಾಂಗ್ರೆಸ್ 30.85 ಪರ್‌ಸೆಂಟ್ ಓಟು

ಬಂದಿತ್ತು, ಈ ಸಲ 36.20 ಪರ್‌ಸೆಂಟ್ ಬಂದಿದೆ. ಬಿಜೆಪಿಗೆ 1996ರಲ್ಲಿ 24.80 ಪರ್‌ಸೆಂಟ್ ಬಂದಿದ್ದರೆ. ಈ ಸಲ 26.90 ಪರ್‌ಸೆಂಟ್ ಬಂದಿದೆ. ಹೋದ ಸಲ ಜನತಾದಳಕ್ಕೆ 34.91 ಪರ್‌ಸೆಂಟ್ ಬಂದಿದ್ದರೆ ಈ ಸಲ 21.6 ಪರ್‌ಸೆಂಟ್ ಬಂದಿದೆ, ಲೋಕಶಕ್ತಿಗೆ 11.5 ಪರ್‌ಸೆಂಟ್ ಬಂದಿದೆ. ಇವತ್ತು ಬಿ.ಜೆ.ಪಿ.ಮತ್ತು ಲೋಕಶಕ್ತಿ ಎರಡನ್ನೂ ಸೇರಿಸಿದರೂ ಸಹ ತಮ್ಮದು 38.3 ಪರ್‌ಸೆಂಟ್ ಆಗುತ್ತದೆ. ಅದಕ್ಕೆ ನಾವೇನೋ ಬಹಳ ಸಾಧನೆ ಮಾಡಿದ್ದೇವೆ ಎಂದರೆ ಹೇಗೆ? ನನಗೆ ರಾಮಾಯಣ ಅಷ್ಟಾಗಿ ಗೊತ್ತಿಲ್ಲ, ಶ್ರೀಲಂಕಾದಲ್ಲಿ ರಾಮ ಗೆದ್ದಮೇಲೆ ಪಟ್ಟಾಭಿಷೇಕವನ್ನು ಯಾರಿಗೆ ಮಾಡಿದರು ಎಂದರೆ ವಿಭೀಷಣನಿಗೆ ಮಾಡಿದರು ಎನ್ನುತ್ತಾರೆ. ಆ ರೀತಿ ಏನಾದರೂ ಆಗಿದ್ದರೆ ನನಗೆ ಗೊತ್ತಿಲ್ಲ. ಮುಂದೆ ಏನಾಗುತ್ತದೆಯೋ ಅದೂ ಗೊತ್ತಿಲ್ಲ. ಮುಂದೆ ಯಾರಿಗೆ ಪಟ್ಟಾಭಿಷೇಕವಾಗುತ್ತದೋ ಅದೂ ನನಗೆ ಗೊತ್ತಿಲ್ಲ. ಇವತ್ತಿನ ಅಂಕಅಂಶಗಳ ಪ್ರಕಾರ ನಾವು ಒಪ್ಪಿಕೊಳ್ಳೋಣ.

ಅಧ್ಯಕ್ಷರು: ತಮಗೆ 36 ಪರ್‌ಸೆಂಟ್, ಬಿಜೆಪಿ ನವರಿಗೆ 26 ಪರ್‌ಸೆಂಟ್, ಲೋಕಶಕ್ತಿಗೆ 11 ಪರ್‌ಸೆಂಟ್ ಬಿಜೆಪಿ ಲೋಕಶಕ್ತಿ ಸೇರಿ 38 ಪರ್‌ಸೆಂಟ್, ಆದರೆ, ತಾವು ಮತ್ತು ಜನತಾದಳ ಸೇರಿದರೆ ಎಷ್ಟು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮಿಬ್ಬರದನ್ನು ಕೂಡಿಸುವ ಪ್ರಶ್ನೆ ಇಲ್ಲ. ನಮಗೆ ಅವರು ಇವರು, ಇಬ್ಬರೂ ಅಷ್ಟೆ. ಏಕೆ ಸೇರಿಸಬಾರದು ಎಂದರೆ, ಇವತ್ತು ನಿಮ್ಮಲ್ಲಿನ ಜನರು ಒಂದು ಪಕ್ಷದಿಂದ ಒಡೆದು ಚುನಾವಣೆಯಲ್ಲಿ ನಿಂತು ಗೆದ್ದು ಬಂದು ಅದರ ಬಗ್ಗೆ ಹೇಳಲು ತಮಗೇನು ಮಾರಲ್ ರೈಟ್ ಇದೆ? ನೀವೂ ಅವರೂ ಒಂದೇ. ಜನತಾದಳ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಜೆ.ಹೆಚ್.ಪಟೇಲರೇ, ತಾವು ನಮ್ಮ ಮಾತನ್ನು ಕೇಳಲಿಲ್ಲ. 16ನೇ ತಾರೀಖಿನ ಚುನಾವಣೆಯ ಫಲಿತಾಂಶದಂತೆ ಬಿಜೆಪಿ ಹತ್ತು, ಲೋಕಶಕ್ತಿ ಮೂರು, ಕಾಂಗ್ರೆಸ್ ಮೂರು, ಜೆ.ಡಿ. ಮೂರು ಸ್ಥಾನವಿತ್ತು. ತಮಗೆ ಇಂಟಲಿಜೆನ್ಸ್ ರಿಪೋರ್ಟ್ ಬಂತು ಎಂದು ನಿಮ್ಮ ತಮ್ಮನವರನ್ನೇ ನಿಲ್ಲಿಸಿ ಕಾಂಗ್ರೆಸನವರನ್ನು ಗೆಲ್ಲಿಸಿಕೊಟ್ಟಿರಿ. ಬಳ್ಳಾರಿಗೆ ತಾವು, ಪ್ರಧಾನಿಗಳೆಲ್ಲರು ಹೋದಿರಿ, ಅಲ್ಲಿ ಕಾಂಗ್ರೆಸ್‌ನವರನ್ನು ಗೆಲ್ಲಿಸಿದಿರಿ. ಅವರು ಆ ಋಣವನ್ನು ತೀರಿಸುತ್ತಿದ್ದಾರೆ. ತಾವೇನು ಚುನಾವಣೆಯ ಕೊನೆಯ ಮೂರು ದಿವಸ ಅವರಿಗೇನು ಸಹಾಯ ಮಾಡಿದಿರಿ ಅದರಿಂದಾಗಿ ಅವರು ಮೂರ್‍ನಾಲ್ಕು ಸ್ಥಾನಗಳಲ್ಲಿ ಹೆಚ್ಚಾಗಿ ಗೆದ್ದರು. ನನ್ನ ಒಂದು ಕಣ್ಣು ಹೋದರೂ ಪರವಾಗಿಲ್ಲ ಬಿಜೆಪಿ ಯವರ ಎರಡು ಕಣ್ಣು ಹೋಗಲಿ ಎಂದು ಮಾಡಿದ್ದಕ್ಕೆ ನೋಡಿ ಏನಾಗುತ್ತಿದೆ? ತಮ್ಮ ಉಪಕಾರವನ್ನಾದರೂ ಅವರು ಸ್ಮರಣೆ ಮಾಡಲಿಲ್ಲವೆಂದರೆ ಹೇಗೆ? ತಾವು ಇದನ್ನು ಕೇಳಿಕೊಂಡು ಹೇಗೆ ತಾನೇ ಸುಮ್ಮನೆ ಇದ್ದೀರಿ? ಇದು ಸತ್ಯವಲ್ಲವೇ ಎಂಬುದನ್ನು ತಾವು ಹೇಳಿಬಿಡಿ. ತಮ್ಮ ತಮ್ಮನವರಿಗೆ

ಒಂದೂ ಮುಕ್ಕಾಲು ಮತಗಳು ಬಂದದ್ದು ನಿಜ, ಆದರೆ ಬಿಜೆಪಿಯವರು ಬಂದರೆ ಗತಿಯೇನು ಎಂದು ಮಾಡಿದಿರಿ, ನೋಡಿ ಅದೇ ತಮಗೆ ಭೂತವಾಗಿ ಬೆನ್ನು ಹತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಷ್ಟು ಅಂಡರ್‌ಸ್ಟ್ಯಾಂಡಿಂಗ್ ಇವರಿಬ್ಬರ ನಡುವೆ ಇದೆಯೆಂಬುದು ನನಗೆ ಗೊತ್ತಿರಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: 22ನೇ ತಾರೀಖಿನ ಚುನಾವಣೆಯ ಫಲಿತಾಂಶದಂತೆ ಬಿಜೆಪಿ: 3, ಜನತಾದಳ ಏನೂ ಇಲ್ಲ, ಕಾಂಗ್ರೆಸ್ ಆರು ಗೆದ್ದಿರುತ್ತದೆ. ನಾನು ಮಾನ್ಯ ಜೆ.ಹೆಚ್.ಪಟೇಲರನ್ನು ಕೇಳುವುದೇನೆಂದರೆ, ಬಿ.ಎಲ್.ಶಂಕರ್‌ರಂಥವರು, ಜನತಾದಳದ ಅಧ್ಯಕ್ಷರು ಠೇವಣಿಯನ್ನೂ ಸ್ವಲ್ಪದರಲ್ಲಿ ಉಳಿಸಿಕೊಂಡರು ಎಂದರೆ ಹೋದ ಸಲ ಇಷ್ಟೊಂದು ಅಂತರದಲ್ಲಿ ಗೆದ್ದಂಥವರು ಆ ಜಾಗದಲ್ಲಿ ಬಿಜೆಪಿಯನ್ನು ಸೋಲಿಸಲು ಹೊರಟರೆ, ಭಗವಂತನ ದಯೆಯಿಂದ ಅಲ್ಲಿ ಬಿಜೆಪಿಗೆ ಜನ ಬೆಂಬಲ ನೀಡಿದರು. ದಾವಣಗೆರೆಯಲ್ಲಿ ತಾವೇ ಹಗಲು ರಾತ್ರಿ ಕಾಂಗ್ರೆಸ್‌ನವರ ಗೆಲುವಿಗಾಗಿ ದುಡಿದಿರಿ, ಬಳ್ಳಾರಿಯಲ್ಲಿ ದುಡಿದಿರಿ, ಕಾಂಗ್ರೆಸ್‌ನವರನ್ನು ಗೆಲ್ಲಿಸಿಕೊಟ್ಟಿರಿ, ಅವರು ತಮಗೆ ಚಿರಋಣಿಯ ಒಂದು ಮಾತನ್ನು ಹೇಳದಿರುವಾಗ ತಾವು ನಗುತ್ತಾ ಕುಳಿತಿದ್ದೀರಲ್ಲಾ?

ಶ್ರೀ ಎಂ.ವೈ.ಘೋರ್ಪಡೆ: ಬಳ್ಳಾರಿಯಲ್ಲಿ ಬಿಜೆಪಿನೂ ಇಲ್ಲ ಅಥವಾ ದಳದವರೂ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಬಳ್ಳಾರಿಯದ್ದು ತಪ್ಪು ಉದಾಹರಣೆ. ಬಳ್ಳಾರಿಯಲ್ಲಿ ಯಾವಾಗಲೂ ಗೆದ್ದವರು ಗೆದ್ದಿದ್ದಾರೆ, ಸೋತವರು ಸೋತೇ ಇದ್ದಾರೆ. ಎನ್. ತಿಪ್ಪಣ್ಣನವರು ಮೂರು ಸಾರಿ ನಿಂತರು ಮೂರು ಸಾರಿಯೂ ಸೋತರು. ಹಿಂದೆ ವೀರಭದ್ರಪ್ಪನವರು ಇದ್ದರು ಅವರೂ ಮೂರು ಸಾರಿ ಸೋತರು. ಯಾರೂ ಗೆದ್ದವರು ಇದುವರೆಗೆ ಸೋತೇ ಇಲ್ಲ, ಟಿಕೇಟ್ ಸಿಗದೆ ಮನೆಯಲ್ಲಿ ಕುಳಿತಿರಬಹುದು, ಆದರೆ ಬಳ್ಳಾರಿಯಲ್ಲಿ ಚುನಾವಣೆಗೆ ನಿಂತು ಸೋತಿಲ್ಲ. ಅಲ್ಲಿ ಯಾವಾಗಲೂ ಕಾಂಗ್ರೆಸ್ ಗೆದ್ದುಕೊಂಡು ಬಂದಿದೆ. ತಾವು ಇಲ್ಲಿ ಹೊಸ ಕಾಂಟ್ರಿಬ್ಯೂಷನ್ ಮಾಡಬೇಕಾಗಿಲ್ಲ. ಬೇಕಾದರೆ ಬಳ್ಳಾರಿಯ ಇತಿಹಾಸ ತೆಗೆದು ನೋಡಿ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಬಳ್ಳಾರಿಯಲ್ಲಿ ನಾವು ಬಿಜೆಪಿ, ಲೋಕಶಕ್ತಿ ಮತ್ತು ಜನತಾದಳ ಮೂವರಿಗೂ ಸೋಲಿಸಿದ್ದೇವೆ. ಅದನ್ನು ಅವರು ಒಪ್ಪಿಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ತಮ್ಮ ಮಾತನ್ನು ಒಪ್ಪಿಕೊಳ್ಳಬಹುದು. ತಾವು ಒಳ್ಳೆಯವರು, ಚೆನ್ನಾಗಿ ಕೆಲಸ ಮಾಡಿದ್ದೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇಂದಿನ ರಾಜಕೀಯ ಪರಿಸ್ಥಿತಿ ಆ ರೀತಿಯಾಗಿದೆ. ಇದರ ಬಗ್ಗೆ ನಾನು ನೇರವಾಗಿ ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಬಾರದು. ಈ ಮತೀಯ ಮತ್ತು ಕೋಮುವಾರು ಶಕ್ತಿಗಳು ಹೇಗೆ ಬೆಳೆಯುತ್ತಿವೆ ಅದನ್ನು ಬೆಳೆಸಬಾರದು ಎಂದು ತಾವು ಭಾಷಣ ಮಾಡಿದಿರಿ. ಅದನ್ನು ತಡೆಯಬೇಕಾದ ಎಲ್ಲಾ ಪ್ರಯತ್ನ ಮಾಡಬೇಕೆಂದು ತಾವೇನು ಹೇಳಿದ್ದೀರಿ, ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ತಮ್ಮ ಭಾಷಣದ ಪ್ರಕಾರ ನಡೆದುಕೊಂಡಿದ್ದಾರೋ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಮತೀಯ ಶಕ್ತಿಗಳಿಗೆ ಶಕ್ತಿಯನ್ನು ಕೊಡಲು ಕಾರಣಕರ್ತರು ಯಾರು? ಇವತ್ತು ಇಷ್ಟೊಂದು ಹೆಚ್ಚಿನ ಸಂಖ್ಯೆಯಲ್ಲಿ ಅವರು ಗೆಲ್ಲಬೇಕಾದರೆ ತಾವೇ ಕಾರಣರು ಎಂಬುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ನೀರನ್ನಾಕಿ, ಗೊಬ್ಬರವನ್ನಾಕಿ ಬೆಳೆಸಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಇವರನ್ನು ತಂದಿದ್ದೀರೆಂದು ಹೇಳಬೇಕಾಗುತ್ತದೆ. ನಾನು ಬೇರೆ ರಾಜ್ಯಗಳ ಬಗ್ಗೆ ಹೇಳುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದು ಮತದಾರರಿಗೆ ಮಾಡತಕ್ಕ ಅಪಮಾನವೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರ, ಶೇಕಡವಾರು ಎಂದೇನು ಬೆನ್ನು ತಟ್ಟಿಕೊಳ್ಳುತ್ತಿದ್ದೀರಿ ಅದು ಯಾವಾಗಲೂ ಇರುತ್ತದೆಂದು ತಿಳಿದುಕೊಳ್ಳಬಾರದು. ಇತ್ತೀಚಿನ ಚುನಾವಣೆಯನ್ನು ತಾವು ನೋಡಿರಬಹುದು. ಇತ್ತೀಚೆಗೆ ಹೊಸ ಹೊಸ ರೂಪಗಳು, ಬೇರೆ ಬೆರೆ ರೀತಿ ರೆಕ್ಕೆಗಳು ಹುಟ್ಟಿ, ಬೇರೆ ಬೇರೆ ರೀತಿಯಾದ ಚುನಾವಣೆಯಾಗಿದೆ. ಯಾವುದೇ ತತ್ವ, ನೀತಿಯ ಆಧಾರದಮೇಲೆ ಈ ಚುನಾವಣೆ ನಡೆದಿಲ್ಲ. ಆದ್ದರಿಂದ ಈ ಚುನಾವಣೆಯ ವ್ಯವಸ್ಥೆಯ ಬಗ್ಗೆ ಸಮಗ್ರವಾದ ಚಿಂತನೆಯಾಗಬೇಕೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ನಮಗೆ ಇಷ್ಟು ಶೇಕಡಾವಾರು ಬಂತು ಎಂದರೆ ಅದು ಯಾವುದೇ ತತ್ವದ ಆಧಾರದ ಮೇಲೆ ಬಂದಿಲ್ಲ. ತಮಗೆ ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ, ಬೆಂಗಳೂರು ನಗರದಲ್ಲಿ ಹೋದಸಲ ಒಬ್ಬರು ಇಪ್ಪತ್ತು ಸಾವಿರ ಮತಗಳಿಂದ ಗೆದ್ದಿದ್ದರು, ಆದರೆ ಈ ಸಾರಿ ಒಂದೂವರೆ ಲಕ್ಷದಿಂದ ಗೆದ್ದಿದ್ದಾರೆ. ಆದ್ದರಿಂದ ಇದು ಯಾವುದೇ ತತ್ವದ ಆಧಾರದ ಮೇಲೆ ಇಲ್ಲ. ಚಾಮರಾಜನಗರ, ಶಿವಮೊಗ್ಗ ಬೇರೆ ಬೇರೆ ರೀತಿಯಾಗಿ ತಿರುವು ತೆಗೆದುಕೊಂಡವು. ಆದ್ದರಿಂದ ಯಾರ‍್ಯಾರು ಸಹ ಬೆನ್ನು ತಟ್ಟಿಕೊಳ್ಳುವ ಸ್ಥಿತಿ ಇವತ್ತು ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ಇಂಡಿಪೆಂಡೆಂಟ್ ಪಕ್ಷ, ನಾವೇನು ಮಾಡಲು ಆಗುವುದಿಲ್ಲ. ಅವರ ಶೇಕಡಾವಾರೇ ಅಷ್ಟು ಇದೆ.

ಶ್ರೀ ವಾಟಾಳ್‌ನಾಗರಾಜ್: ನಮ್ಮ ಪರ್‌ಸೆಂಟೇಜ್ ಇಷ್ಟೇ ಇದ್ದವರು ಮೇಲಕ್ಕೆ ಹೋಗಿದ್ದನ್ನು ತಾವು ನೋಡಿದ್ದೀರಿ. ಒಂದೇ ಪರ್‌ಸೆಂಟ್ ಇದ್ದವರು ನೂರು

ಪರ್‌ಸೆಂಟ್‌ಗೆ ಹೋಗಿರತಕ್ಕದನ್ನು ತಾವು ನೋಡಿದ್ದೀರಿ. ಆದ್ದರಿಂದ ಹೀಗೆಯೇ ಎಂದು ಯಾರೂ ತೀರ್ಮಾನ ಮಾಡಲು ಆಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ತತ್ವಗಳ ಮೇಲೆ ತಮಗೆ ನಂಬಿಕೆ ಇದ್ದರೆ ಇದರ ಬಗ್ಗೆ ಚಿಂತನೆ ಮಾಡಿ. ಈ ದೇಶದಲ್ಲಿ ಸೆಕ್ಯುಲರಿಸಂ ಜೀವಂತವಾಗಿರಬೇಕು, ಸಂವಿಧಾನ ಜೀವಂತವಾಗಿರಬೇಕು ಸಂವಿಧಾನವನ್ನು ಉಳಿಸಬೇಕೆಂದರೆ ತಾವು ಇದನ್ನು ಒಪ್ಪಿಕೊಳ್ಳಬೇಕು.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ರಾಜ್ಯಪಾಲರ ಭಾಷಣದ ಮೇಲೆ ಬಹಳ ಗಂಭೀರವಾದ ಚರ್ಚೆಯಾಗಬೇಕೆಂದು ಹೇಳಿದ್ದರು. ವಾಟಾಳ್ ನಾಗರಾಜ್‌ರವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದಾರೋ, ಅಥವಾ ಚುನಾವಣೆಯ ಸೋಲು ಗೆಲುವಿನ ಬಗ್ಗೆ ಮಾತನಾಡುತ್ತಿದ್ದಾರೋ, ಅವರವರೇ ಚುನಾವಣೆಯ ಶೇಕಡಾವಾರು ಮಾತನಾಡಿಕೊಂಡು ಕಚ್ಚಾಡುತ್ತಿದ್ದಾರೆಯೋ?

ಶ್ರೀ ವಾಟಾಳ್‌ನಾಗರಾಜ್: ನಾವು ತಮ್ಮಗಳ ಕಚ್ಚಾಟವನ್ನು ಇನ್ನು ಹೊರಗಡೆ ತಂದಿಲ್ಲ. ಸಮಸ್ಯೆಯ ಬಗ್ಗೆ ಹೇಳುತ್ತಿದ್ದೇವೆ.

ಅಧ್ಯಕ್ಷರು: ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಸಲ್ಲಿಸುವಾಗ, ಬಜೆಟ್ ಮೇಲೆ ಸಾಮಾನ್ಯ ಚರ್ಚೆ ನಡೆಯುವಾಗ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ಮಾಡಬಹುದು, ಪ್ರಸ್ತಾಪ ಮಾಡಬಹುದು. ಇದೊಂದು ಅವಕಾಶ ಲೀಲಾದೇವಿಯವರೆ.

1.40 ಪಿ.ಎಂ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ವಿಷಯವನ್ನು ನಾನು ಏಕೆ ಪ್ರಸ್ತಾಪ ಮಾಡಿದೆ ಅಂದರೆ ಯಾವ ತತ್ವಗಳ ಮೇಲ ನಂಬಿಕೆ ನಮಗಿತ್ತೋ ಅಥವಾ ಯಾವ ತತ್ವಗಳ ರಕ್ಷಣೆ ಮಾಡಬೇಕೂಂತ ನಾವೂ ನೀವೂ ಎಲ್ಲರೂ ಮನಸ್ಸು ಮಾಡಿದ್ದೆವೋ ಅದರಿಂದ ನಾವು ಹೇಗೆ ದೂರ ಸರಿಯುತ್ತಿದ್ದೇವೆ, ನಮ್ಮ ವೈಯಕ್ತಿಕ ಜಗಳಗಳಿಂದ ಅಥವಾ ಆಸೆ ಆಕಾಂಕ್ಷೆಗಳಿಂದ ಅಥವಾ ನಾವು ಯಾವುದಾದರೂ ಒಂದು ರೂಪದಲ್ಲಿ ರಾಜಕೀಯದಲ್ಲಿ ಅಸ್ತಿತ್ವದಲ್ಲಿರಬೇಕೂಂತ ಹೇಗೆ ನೀವು ಸಾಮಾನ್ಯ ಜನರನ್ನು ಬೆಳೆಸುತ್ತಿದ್ದೀರಿ ಮತ್ತು ಸಂವಿಧಾನ ತತ್ವಗಳನ್ನು ಕೈಬಿಡುತ್ತಿದ್ದೀವಿ ಅನ್ನುವುದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಜೊತೆಯಲ್ಲೇ ಜನ ನಿಮ್ಮನ್ನು ಬಿಡಲು ಕಾರಣವೇನೆಂದರೆ ನೀವು ಹೇಳಿದ ಒಂದು ಮಾತು ಕೂಡ ನಡೆಸಿಕೊಡಲಿಲ್ಲ. ಕೆಲವು ಕಡೆ ಆ ದಿಕ್ಕಿನಲ್ಲಿ ಪ್ರಯತ್ನ ಕೂಡ ಆಗಲಿಲ್ಲ. ಅನೇಕ ಶಾಸಕರುಗಳು ಹೇಳಿದ್ದನ್ನು ನಾವು ಮಾಡಿದರೂ ಕೂಡ ಗೆದ್ದುಬರುವುದಕ್ಕೆ ಸಾಧ್ಯವಾಗಲಿಲ್ಲ. ಈ ಕಡೆ ಇರಬಹುದು ಆ ಕಡೆ ಇರಬಹುದು ಅನೇಕ

ಶಾಸಕರು ಅವರವರ ಮತಕ್ಷೇತ್ರಗಳಲ್ಲಿ ಮೈನಸ್ಸಾಗಿ ಅವರ ವಿರುದ್ಧ ಜನ ಮತ ನೀಡಿದ್ದಾರೆ. ಅಂದಾಗ ಅವನು ಕೇಳಿದ ಎಇಇ, ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಹಾಕಿದ ತಕ್ಷಣವೇ ಎಲ್ಲ ಮತಗಳು ಸಿಗುತ್ತವೆ ಅಂದುಕೊಂಡರೆ ಅದು ಸಿಗುವುದಿಲ್ಲ ಎನ್ನುವುದಕ್ಕೆ ಇದು ಉದಾಹರಣೆ. ಅದಕ್ಕಾಗಿ ಹಾಕುವಾಗ ಪಕ್ಷಭೇದ ಮಾಡಿ ಅವ ನಮ್ಮ ಮನುಷ್ಯ ನಮಗೆ ಬೆಂಬಲ ನೀಡುತ್ತಾನೆ ಎಂದು ಯೋಚಿಸಿಕೊಂಡು ಅಧಿಕಾರಿಗಳ ವರ್ಗಾವಣೆ ಮಾಡಿದಿರಿ, ಅದು ಎಂದೂ ನಿಮಗೆ ಸಹಾಯ ಆಗುವುದಿಲ್ಲ ಎನ್ನುವುದಕ್ಕೆ ಈ ಒಂದು ಚುನಾವಣೇನ ಸಾಕ್ಷಿ, ನಿಮ್ಮ ಮತಕ್ಷೇತ್ರಗಳಲ್ಲಿ ನೀವು ಗಳಿಸಿದಂತಹ ಮತಗಳೇ ಸಾಕ್ಷಿ. ಅದಕ್ಕೆ ದಯವಿಟ್ಟು ಇನ್ನು ಮೇಲಾದರೂ ಕೂಡ ಕಮಿಟೆಡ್ ಅಧಿಕಾರಿ ಯಾರು ಕೆಲಸ ಮಾಡುತ್ತಾರೋ ನಿಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ನಂಜಿಕೆ ಇಡುತ್ತಾನೋ ಬರೀ ಜಾತಿ ಮೇಲೆ ಅಥವಾ ಯಾವನಿಗಾದರೂ ಬೇಕಾದ ಮನುಷ್ಯ ಅವನು ಅವನನ್ನು ಹಾಕಬೇಕೆಂದು ನಾವು ಇದೇ ಚಿಂತನೆ ಮಾಡಿದರೆ ನಮ್ಮ ನೀತಿ ಕಾರ್ಯಕ್ರಮಗಳಿಗೆ ಹೊಡೆತ ಬೀಳುತ್ತದೆ. ಅನೇಕ ಸಾರಿ ನೀವು ಕೊಟ್ಟ ಟಾರ್ಗೆಟ್ ಅವರು ಅಚೀವ್ ಮಾಡಿಲ್ಲ. ಉದಾಹರಣೆಗೆ ಪ್ರಾಕೃತಿಕ ವಿಕೋಪ. ತಾವು 1997-98ರಲ್ಲಿ -the State Government has released Rs. 51.40 Crores under C.R.F. (Calamity Relief Fund) out of which only Rs. 38.3 crores are spent by respective Deputy Commissioners upto February, 1998. You have not yet spent Rs. 13 Crores out of the released amount. ಈಗ ಎಲ್ಲ ಕಡೆ ಬರಗಾಲ ಇದೆ, ಕೆಲವು ಕಡೆ ತೊಗರಿಬೇಳೆಗೆ ಪರಿಹಾರ ಕೊಟ್ಟಿಲ್ಲ, ಶಿವಮೊಗ್ಗದಲ್ಲಿ ಬತ್ತ ಹಾಳಾಗಿಹೋಗಿದೆ, ಮೇವೂ ಕೂಡ ಸಿಗುವ ಸಂಭವ ಅಲ್ಲಿಲ್ಲ ಇಷ್ಟೆಲ್ಲ ಇದ್ದರೂ ಕೂಡ ಕೃಷಿಕಾರ್ಮಿಕರಿಗೆ ಇವತ್ತು ಕೆಲಸ ಸಿಗುತ್ತಿಲ್ಲ ಎಂದಿದ್ದರೂ ಕೂಡ ಫೆಬ್ರವರಿ ಅಂತ್ಯದವರೆಗೆ 13 ಕೋಟಿ ರೂಪಾಯಿಗಳು ಖರ್ಚಾಗದೆ ಉಳಿದಿದೆ ಅಂದರೆ ನಿಮಗೆ ಆಡಳಿತದಲ್ಲಿ ಆಸಕ್ತಿ ಇದೆ ಅಂತೀರಾ? ಅಥವಾ ನಿಮ್ಮ ಅಧಿಕಾರಿಗಳು ಆಸಕ್ತಿವಹಿಸಿ ಕೆಲಸ ಮಾಡಿದ್ದಾರೆ ಎಂದು ಹೇಳೋಣವೆ? ನಿಮ್ಮ ಮಂತ್ರಿಗಳು ಕೆಲಸ ಮಾಡಿದ್ದಾರೆ ಎಂದು ಹೇಳೋಣವ? ಮೊದಲೇ ದುಡ್ಡಿಲ್ಲ ಅಂತೀರ, ಎಲ್ಲಿ ದುಡ್ಡಿದೆ ಅಲ್ಲಿ ಖರ್ಚು ಮಾಡಿಲ್ಲ. ಈ ರೀತಿ ಆಡಳಿತ ನಡೆಸಿದರೆ ಜನರಿಗೆ ಸಹಾಯ ಮಾಡಿದಂತಾಗುತ್ತದಯೇ? ಇದಕ್ಕೆ ತಾವು ಹೇಳಬೇಕು. ಅದೇರೀತಿ ಸಿಆರ್‌ಎಫ್ ಫಂಡಿನಲ್ಲಿ ಜಿಲ್ಲಾಧಿಕಾರಿಗಳ ಹತ್ತಿರ 25.43 ಕೋಟಿ ಇವತ್ತಿನವರೆಗೆ ಇದೆ ಇನ್ನೊಂದು ವಿಶೇಷವಾದದ್ದೆಂದರೆ ಎಲೆಕ್ಟ್ರಿಸಿಟಿ. ನಮ್ಮ ಸರ್ಕಾರ ಬಂದ ಮೇಲೆ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಸಾಕಷ್ಟು ಉತ್ಪಾದನೆ ಮಾಡುತ್ತೇವೆ ಅಂದಿರಿ, ಆದರೆ ಕಳೆದ ಮೂರು ವರ್ಷದಲ್ಲಿ 50 ಮೆಗಾವ್ಯಾಟ್ ಬಿಟ್ಟರೆ ಹೆಚ್ಚಿನ ಉತ್ಪಾದನೆ ಮಾಡಲು ಆಗಲಿಲ್ಲ. ಇನ್ನೂ ಮಾಡುತ್ತೇವೆ ಎಂದು ಪ್ರೋಗ್ರಾಂ ಇದೆ, ಇನ್ನು ಉಳಿದ ಬೇಡ್ತಿ ಇರಬಹುದು, ಮಹದಾಯ ಇರಬಹುದು ದಾಂಡೇಲಿ ಪವರ್‌ಹೌಸ್ ಇವೆಲ್ಲವನ್ನೂ ಕಮಿನ್ಸ್‌ಮೆಂಟ್

ಮಾಡುವುದು ಇದೆ- ಹೀಗೆ ನೀವು ವಿದ್ಯುದುತ್ಪಾದನೆಗೂ ನೀವು ಲಕ್ಷ್ಯ ಕೊಡುತ್ತಿಲ್ಲ, ಪ್ರಕೃತಿ ವಿಕೋಪದಿಂದ ಜನ ಬರಗಾಲದಲ್ಲಿ ಬಳಲುತ್ತಿದ್ದಾರೆ ಅವರಿಗೆ ಸಹಾಯ ಮಾಡುವ ಕಡೆಯೂ ಸರ್ಕಾರದ ಗಮನವಿಲ್ಲ ಮತ್ತು ಮೂರನೆಯದೆಂದರೆ ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ಸುಮಾರು 111 ಕಿಮೀ.ವರೆಗೆ ಮಾಡುತ್ತೇವೆಂದು ಹೇಳಿದಿರಿ ಅದಕ್ಕೆ ದೊಡ್ಡ ಗಲಾಟೆಯಾಯಿತು, ಎಲ್ಲರೂ ಕೂಡ ಅದರ ಬಗ್ಗೆ ಪ್ರಸ್ತಾಪ ಮಾಡಿದರು. ಹೈವೆ ಎಕ್ಸ್‌ಪ್ರೆಸ್ ಬೇಕು, ಯಾರೂ ಬೇಡವೆನ್ನುವುದಿಲ್ಲ ಏಕೆಂದರೆ ರಸ್ತೆ ಸೇತುವೆಗಳು ಸಂಪರ್ಕ ಅಷ್ಟೇ ಮುಖ್ಯ ನೀರಾವರಿಯೂ ಅಷ್ಟೇ ಪ್ರಾಮುಖ್ಯ. ಆದರೆ ಪ್ರಿಯಾರಿಟಿ ಕೊಡುವಾಗ ನೀರಾವರಿಗೆ ಕೊಡಬೇಕೋ ರಸ್ತೆಗೆ ಕೊಡಬೇಕೊ ಎನ್ನುವುದನ್ನು ನಾವು ತಿಳಿದುಕೊಂಡಿರಬೇಕಾಗುತ್ತದೆ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ನಗರದ ಯೋಜನೆಗಳಿಗೆ ಸಾಲ ತರುವ ಬಗ್ಗೆ ಹೇಳಿದ್ದೀರಿ ವಿಶ್ವಬ್ಯಾಂಕಿರಬಹುದು, ಜಪಾನ್ ಏಡ್ ಇರಬಹುದು ಸ್ವೀಡನ್ ಏಡ್ ಇರಬಹುದು ಮತ್ಯಾವುದೇ ಇರಬಹುದು ಕುಡಿಯುವ ನೀರು ಒಂದನ್ನು ಬಿಟ್ಟರೆ ಹೆಚ್ಚುಹೆಚ್ಚು ರಸ್ತೆಗಳು ಸೇತುವೆಗಳು ಆಮೇಲೆ ನಗರ ಅಭಿವೃದ್ಧಿಗಳು. ಗ್ರಾಮೀಣ ಅಭಿವೃದ್ಧಿಗೆ ವಿಶೇಷವಾಗಿ ಇರಿಗೇಶನ್‌ಗೆ ಸಾಲದ ರೂಪದಿಂದ ಯಾವ ಹಣವನ್ನೂ ಪಡೆಯುತ್ತಿಲ್ಲ, ಅದು ಕೃಷ್ಣ ಭಾಗ್ಯ ನಿಗಮ ಅಥವಾ ನಬಾರ್ಡ್‌ನಿಂದ ಕೆರೆ ಕಟ್ಟೆ ಕಟ್ಟುವುದನ್ನು ಬಿಟ್ಟರೆ ಬೇರೆ ಯಾವ ದೇಶದಿಂದ ಯಾವುದೇ ರೂಪದಿಂದ ನೀರಾವರಿಗೆ, ವಿಶೇಷವಾಗಿ ಸಣ್ಣ ನೀರಾವರಿಗೆ ಒತ್ತುಕೊಡುವ ಬಗ್ಗೆ ಯಾವ ಪಾಲಿಸಿಯನ್ನೂ ಹೇಳಿಲ್ಲ. ಇವತ್ತು ವಿಶೇಷವಾಗಿ ಕೋಲಾರ, ಗುಲ್ಬರ್ಗ, ಚಿತ್ರದುರ್ಗ, ತುಮಕೂರು ಮತ್ತು ತುಂಗಭದ್ರ ಯೋಜನೆಯ ಅಚ್ಚುಕಟ್ಟು ಪ್ರದೇಶ ಬಿಟ್ಟು ಬಳ್ಳಾರಿಯ ಕೆಲವು ಭಾಗಗಳಲ್ಲಿ ನಾವು ಕೆರೆಯ ನೀರನ್ನೇ ಆಶ್ರಯಿಸಬೇಕು ಹೂಳು ತೆಗೆಯುವುದಿರಬಹುದು, ಹೊಸ ಕೆರೆ ನಿರ್ಮಿಸುವುದಿರಬಹುದು, ಇರುವ ಕೆರೆಯ ದುರಸ್ತಿ ಇರಬಹುದು, ಕೆನಾಲ್ ದುರಸ್ತಿ ಇರಬಹುದು ಅವುಗಳ ಬಗ್ಗೆ ಒಂದು ಚೂರು ಇದರಲ್ಲಿ ತಾವು ಹೇಳಲಿಲ್ಲ. ಕೃಷ್ಣಬೇಸಿನ್ ಅನ್ನು 2,000 ಇಸವಿಯೊಳಗೆ ನಾವು ಪೂರ್ಣ ಮಾಡುವ ಕಮಿಟ್‌ಮೆಂಟ್ ಇದೆ ಎಂದು ಹೇಳಿದ್ದೀರಿ ಅಷ್ಟೆ, ಇನ್ನು ಎರಡು ವರ್ಷ ಇದೆ ಅದಕ್ಕೆ. ನೀವು ಹೇಳಿರುವುದನ್ನು ಬಿಟ್ಟರೆ ಎರಡು ವರ್ಷದಲ್ಲಿ ನೀವೇನೂ ಮಾಡುವುದಕ್ಕೆ ಆಗುವುದಿಲ್ಲ ನೀರಾವರಿ ಬಗ್ಗೆ ತಾವು ಏನೂ ಹೇಳಲಿಲ್ಲ. ಕೇವಲ ರಸ್ತೆ ಸೇತುವೆಗಳಿಗೆ ಹೊರದೇಶಗಳಿಂದ ಹಣ ತರುತ್ತೇವೆ ಮತ್ತು ಇನ್‌ಫ್ರಾಸ್ಟ್ರಕ್ಚರ್ ಏನು ಮಾಡುತ್ತೇವೆಂದು ಹೇಳಿ ಕೆಲವು ಪ್ರಾಜೆಕ್ಟ್‌ಗಳಿಗೆ ಮಂಜೂರಾತಿ ಕೊಟ್ಟಿದ್ದೀರಿ ಅದರಿಂದ ಏನಾಗುತ್ತದೆ ಅಂದರೆ. ವಾಸ್ತವವಾಗಿ ಹೈವೇಗೆ ಭೂಮಿ ಬೇಕಾಗಿದ್ದು 5 ಪರ್ಸೆಂಟ್ ಮಾತ್ರ. 3,166 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಏನಿದೆ, ಅದರಲ್ಲಿ 17,194 ಎಕರೆ ಜಮೀನಿನಲ್ಲಿ ಬೆಂಗಳೂರು-ಮೈಸೂರು ಹೈವೇಗೆ ಬೇಕಾದಂತಹ ಜಮೀನು ಕೇವಲ 5 ಪರ್ಸೆಂಟ್ ಮಾತ್ರ. ಉಳಿದ ಭೂಮಿ ಟೌನ್‌ಶಿಪ್ ಮತ್ತು ಬೇರೆ ಬೇರೆ ಪ್ರಾಜೆಕ್ಟ್‌ಗಳಿಗೆ ಎಂದು ಹೇಳಿದಿರಿ, ಆದರೆ ಇಂತಹ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ನಮ್ಮ ರೈತರಿಗೆ ತೊಂದರೆ ಮಾಡತಕ್ಕಂತಹದ್ದಾಗಲಿ, ಅಥವಾ ನಮ್ಮ ರೈತರಿಗೆ ಅವರ ಜಮೀನಿನಿಂದ ಡಿಪ್ರೈವ್ಡ್

ಮಾಡಿ, ರಿಯಲ್ ಎಸ್ಟೇಟ್ ಏಜೆನ್ಸಿ ಮಾಡತಕ್ಕಂತವರ ಕೈಯಲ್ಲಿ ನೀವು ಭೂಮಿಯನ್ನು ಕೊಟ್ಟರೆ ಎಷ್ಟರ ಮಟ್ಟಿಗೆ ನೀವು ರೂರಲ್ ಎಕಾನಮಿ ಇಂಪ್ರೂವ್ ಮಾಡುತ್ತೀರಿ? ಒಂದು ವೇಳೆ ನಿಮಗೇನಾದರೂ ಬೇಕಾದರೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಯಾವ ಪ್ರಾಜೆಕ್ಟ್ ಬೇಕಾದರೂ ಮಾಡಿ. ಆದರೆ, ನೀವು ಅಕ್ವೈರ್ ಮಾಡಿ, ಬೇರೆಯವರಿಗೆ ಕೊಟ್ಟು, ಅವರು ಅದನ್ನು ಪ್ಲಾಟ್‌ಗಳನ್ನಾಗಿ ಮಾಡಿಕೊಂಡು ಹಣವನ್ನು ಸಂಪಾದನೆ ಮಾಡಬೇಕು ಅಂದರೆ, at the cost of farmers, they will earn money. ಅವರು ಸುಮ್ಮನೆ ಯಾರೂ ಬರುವುದಿಲ್ಲ, ದುಡ್ಡು ಗಳಿಸುವುದಕ್ಕೆ ಬರುತ್ತಾರೆ. ಸಂಪಾದನೆ ಮಾಡಲಿ, ಎದುರಿನಲ್ಲೇ ನೇರವಾಗಿ ಒಂದು ರೋಡ್ ಮಾಡುತ್ತೇನೆ ಎಂದು ಹೇಳಿದರೆ ಬೇಕಾದರೆ ಕೊಡಿ. ಆದರೆ ಅಕ್ಕಪಕ್ಕದ ಎಲ್ಲಾ ಭೂಮಿಗಳನ್ನು 17- 18 ಸಾವಿರ ಎಕರೆ ಭೂಮಿ ಬೇಕು ಎಂದು ತೆಗೆದುಕೊಂಡು ಅಲ್ಲೆಲ್ಲಾ ಹೊಸ ಟೌನ್‌ಶಿಪ್ ಮಾಡಿ ಅಲ್ಲಿ ಬೇಕಾದಂಥವರಿಗೆ ಪ್ಲಾಟ್‌ಗಳನ್ನು ಮಾರಿ ಕೊಡತಕ್ಕಂತಹ ವ್ಯವಸ್ಥೆ ನೀವು ಮಾಡಿದ್ದರೆ ಖಂಡಿತವಾಗಿ ಇದರಿಂದ ರೈತರಿಗೆ ತೊಂದರೆ ಆಗುತ್ತದೆ. ಇದರ ಬಗ್ಗೆ ನಾವು ಸಾಕಷ್ಟು ನಿಮ್ಮ ಗಮನವನ್ನು ಸೆಳೆದಿದ್ದೇವೆ. ಈ ಸದನದಲ್ಲಿ ಸಾಕಷ್ಟು ಸಲ ಪ್ರಸ್ತಾಪ ಮಾಡಿದರೂ ಕೂಡ ಇದರ ಬಗ್ಗೆ ನೀವು ಕೇಳಲಿಲ್ಲ. ಈಗಲಾದರೂ ಅದನ್ನು ಪುನರ್ ಪರಿಶೀಲನೆ ಮಾಡಬೇಕು. ಅದರಿಂದ ಯಾವ ಪ್ರಯೋಜನ ಕೂಡ ಇಲ್ಲ. ಸಾಲದ ಭಾರ ಯಾವ ರೀತಿಯಾಗಿ ನೀವು ಪದೇ ಪದೇ ಹೇಳುತ್ತೀರಿ, ಒಂದು ಲಕ್ಷ ಕೋಟಿ ಅಷ್ಟು ಗೌರ್ನಮೆಂಟ್ ಆಫ್ ಇಂಡಿಯಾದವರು ಸಾಲ ಮಾಡಿ ಇಟ್ಟು ಹೋಗಿದ್ದಾರೆ. ಹಾಗೆಯೇ ಇವತ್ತು ನಿಮ್ಮೆಲ್ಲಾ ಪ್ರಾಜೆಕ್ಟ್ ನೋಡಿದರೆ, ಕೊಜೆಂಟ್ರಿಕ್ಸ್‌ದೇ ಇರಬಹುದು, ಎಕ್ಸ್‌ಪ್ರೆಸ್ ಹೈವೇನೇ ಇರಬಹುದು, ನಬಾರ್ಡ್ ಸಾಲನೇ ಇರಬಹುದು ಅಥವಾ ನಿಮ್ಮ ಬೇರೆ ರೋಡ್ ಅಂಡ್ ಬ್ರಿಡ್ಜಸ್ ಸಾಲವೇ ಇರಬಹುದು, ಅದನ್ನೆಲ್ಲಾ ನೋಡಿದರೆ ನೀವು ಲಕ್ಷಗಟ್ಟಲೆ, ಕೋಟಿಗಟ್ಟಲೆ ಸಾಲವನ್ನು ಮಾಡಿಟ್ಟೇ ಹೋಗುತ್ತಿದ್ದೀರಿ. ಅದಕ್ಕೆ ಮಾಡುವವರು ಯಾರೂ ಹೇಳುವುದಿಲ್ಲ. ಮಾಡುವವರು ನಾನು ತಪ್ಪು ಮಾಡುತ್ತಿದ್ದೇನೆ ಎಂದು ಏಕೆ ನಿಮ್ಮ ಗಮನಕ್ಕೆ ಬರುವುದಿಲ್ಲ, ಅಥವಾ ಅದರ ಬಗ್ಗೆ ಏಕೆ ಚಿಂತನೆ ಇಲ್ಲ, ಅದರ ಬಗ್ಗೆ ಏಕೆ ಚಿಂತನೆ ಮಾಡುತ್ತಿಲ್ಲ. ಎಲ್ಲಿ ಅವಶ್ಯಕತೆ ಇದೆಯೋ, ಎಲ್ಲಿ ಅದರಿಂದ ಪ್ರೊಡಕ್ಟಿವಿಟಿ ಆಗುತ್ತದೆ ಅಥವಾ ಅದರಿಂದ ವೆಲ್ತ್ ಕ್ರಿಯೇಟ್ ಆಗುತ್ತದೆ. ಆದರೆ ಯಾವುದು ಡೆಡ್ ಇನ್‌ವೆಸ್ಟ್‌ಮೆಂಟ್ ಎಂದು ಬರುತ್ತದೋ, ಅಥವಾ ಅದರ ಪ್ರಯೋಜನ ಬಹಳ ಕಡಿಮೆ ಆಗುತ್ತದೋ ಯಾವುದಕ್ಕೂ ನಾವು ಸ್ವಲ್ಪ ಕಾಯಬೇಕು. ಸ್ವಲ್ಪ ನಿಲ್ಲಬಹುದು, ಸ್ವಲ್ಪ ತಾಳಬಹುದು ಅಂತಹದಕ್ಕೆ ನೀವು ನಿಲ್ಲಿಸಿ. ಆದರೆ ಯಾವುದರಿಂದ ಪ್ರಯೋಜನ ಆಗುತ್ತದೆ ಕೆರೆಯಾಗಲಿ, ಇರಿಗೇಷನ್ ಆಗಲಿ, ಇಂತಹದಕ್ಕೆ ನಾವು ಹೆಚ್ಚಿನ ಗಮನವನ್ನು ಕೊಡತಕ್ಕಂತಹದ್ದು ಅವಶ್ಯಕತೆ ಇತ್ತು. ಆದಕಾರಣ ಸರ್ಕಾರ ಈ ಕಡೆ ಹೆಚ್ಚಿನ ಗಮನವನ್ನು ಕೊಡಬೇಕೆಂದು, ನಾನು ಇದಕ್ಕೆ ಪ್ರೋತ್ಸಾಹ ಕೊಡುತ್ತೇನೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಅದು ಆದಮೇಲೆ ಪ್ಯಾರ ನಂ. 18ರಲ್ಲಿ ಕೃಷ್ಣ ಬೇಸಿನ್

ಪ್ರಾಜೆಕ್ಟ್ ಬಗ್ಗೆ ಹೇಳಿದಿರಿ, ಏನೆಂದರೆ ಎರಡು ಸಾವಿರ ಇಸವಿಯೊಳಗಾಗಿ ನಾವು ಇದನ್ನು ಆದಷ್ಟು ಪ್ರಯತ್ನ ಮಾಡಿ ನಾವು ಅಚೀವ್ ಮಾಡುತ್ತೇವೆ ಎನ್ನುವ ಮಾತನ್ನು ತಾವು ಹೇಳಿದಿರಿ. ಏಕೆಂದರೆ ನಮಗೆ ಅಲೋಕೇಶನ್ ಆದಂತಹದ್ದು ಸುಮಾರು 740 ಟಿಎಂಸಿ ನೀರನ್ನು ಉಪಯೋಗ ಮಾಡಬೇಕು ಎಂದು. ಅಂದರೆ ನಾವು ಈ ಬೇಸಿನ್‌ನಲ್ಲಿ ಸಾಕಷ್ಟು ಪ್ರಯತ್ನ ಪಡಬೇಕಾಗುತ್ತದೆ ಮತ್ತು ಅದಕ್ಕೆ ಹೆಚ್ಚಿನ ಹಣ ಸಂಗ್ರಹಣೆ ಕೂಡ ಮಾಡಬೇಕಾಗುತ್ತದೆ. ಆದರೆ ನಾನು ಒಂದು ಮಾತನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ, ಈ ಸದನದಲ್ಲಿ ಅನೇಕ ಸಾರಿ ನಾನು ಅಂಕಿ ಅಂಶಗಳನ್ನು ಕೊಟ್ಟಾಗ ತಾವು ಹಿಂದಿನದೇ ಕಂಪೇರ್ ಮಾಡಿಕೊಂಡು ಬಂದಿರುವಿರಿ, ಆದರೆ ಇಲ್ಲಿ ಹಿಂದಿನದು ಕಂಪೇರ್ ಮಾಡತಕ್ಕಂತಹ ಅವಶ್ಯಕತೆ ಈ ಕಾಲದಲ್ಲಿ ಇಲ್ಲ. ಏಕೆಂದರೆ ಹಿಂದೆ ಒಂದು ವಸ್ತುವಿನ ಬೆಲೆ ಒಂದು ರೂಪಾಯಿ ಇದ್ದರೆ, ಇವತ್ತು ಅದು ಇಪ್ಪತ್ತು ರೂಪಾಯಿಗಳಾಗಿದೆ, ಅಥವಾ ಒಂದು ಕಾಲದಲ್ಲಿ ಅದರ ಬೆಲೆ ಎರಡು ರೂಪಾಯಿ ಇದ್ದರೆ ಇವತ್ತು ಅದರ ಬೆಲೆ 20 ರೂಪಾಯಿಗಳಾಗಿದೆ. ಅದಕ್ಕಾಗಿ ಪರ್ಸೆಂಟೇಜ್ ವೇರಿಯಸ್ ಆಗುತ್ತದೆ, ಮತ್ತು ಹಣದುಬ್ಬರ, ಮನಿ ವ್ಯಾಲ್ಯೂ ಕಡಿಮೆ ಆದಹಾಗೆ ನೀವು ಬಜೆಟ್ ಅಲಾಟ್‌ಮೆಂಟ್‌ನಲ್ಲಿ ಕೂಡ ಹೆಚ್ಚಿನ ಹಣ ಇಟ್ಟುಕೊಂಡು ಕೆಲಸ ಮಾಡಿದ್ದರೆ ಅದಕ್ಕೆ ನಾವು ಶಹಬಾಸ್‌ಗಿರಿ ಕೊಡತಕ್ಕಂತಹದ್ದು ಅವಶ್ಯಕತೆ ಇಲ್ಲ. ಆದರೆ ನಾವು ಎಷ್ಟರ ಮಟ್ಟಿಗೆ ಭೌತಿಕ ಸಾಧನೆ ಮಾಡಿದ್ದೇವೆ, ಅಥವಾ ಫಿಸಿಕಲ್ ಟಾರ್ಗೆಟ್ ಅಚೀವ್ ಮಾಡಿದ್ದೇವೆ ಎನ್ನುವುದು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಈಗ ಉದಾ: 1995-96ರಲ್ಲಿ ತಮ್ಮ ಆಲೋಕೇಶನ್ ಯುಕೆಪಿಯಲ್ಲಿ 515 ಕೋಟಿ ರೂಪಾಯಿ ಇತ್ತು. ಸರ್ಕಾರ ಖರ್ಚು ಮಾಡಿದ್ದು ಆ ವರ್ಷದಲ್ಲಿ 388 ಕೋಟಿ ರೂಪಾಯಿ ಮಾತ್ರ. ಆಮೇಲೆ 1996-97ರಲ್ಲಿ 801 ಕೋಟಿ ಅಲೋಕೇಶನ್, ಖರ್ಚು ಮಾಡಿದ್ದು ಎಷ್ಟು ಎಂದರೆ 560 ಕೋಟಿ ಅಂದರೆ 220 ಕೋಟಿ ರೂಪಾಯಿ ಡೆಫಿಸಿಟ್. ಹೋದ ಸಲ ಕೂಡ 1995-96ರಲ್ಲಿ ಸುಮಾರು 150-60 ಕೋಟಿ ರೂಪಾಯಿ ಈ ವರ್ಷ ಸುಮಾರು ಸಾವಿರದ ಒಂದುನೂರ ನಲವತ್ತೊಂಭತ್ತು ಕೋಟಿ ರೂಪಾಯಿ ತಮ್ಮ ಅಲೋಕೇಶನ್. ಆದರೆ ಅದು ಕೃಷ್ಣ ಬೇಸಿನ್ ಮೇಲೆ ಇಲ್ಲಿಯವರೆಗೂ ಖರ್ಚು ಮಾಡಿದ್ದು 1,249 ಕೋಟಿ ರೂಪಾಯಿ ಅದರಲ್ಲಿ ರಿಲೀಸ್ ಆಗಿದ್ದು 488 ಕೋಟಿ ರೂಪಾಯಿ ಆನಂತರ ಖರ್ಚಾಗಿದ್ದು 543.76, ಅಂದರೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಮ್ಮ ಅಲೋಕೇಶನ್ ಇರತಕ್ಕಂತಹದ್ದು ಹೆಚ್ಚಿಗೆ, ರಿಲೀಸ್ ಮಾಡಿದ ಹಣ ಕಡಿಮೆ, ಕೆಲವು ಸಲ ಖರ್ಚು ಹೆಚ್ಚಾಗಿದೆ; ಅಂದಾಗ ನಿಮ್ಮ ಖರ್ಚಿಗೆ, ನಿಮ್ಮ ರಿಲೀಸ್‌ಗೆ ನಿಮ್ಮ ಅಲೋಕೇಶನ್‌ಗೆ ನೀವು ಬಜೆಟ್‌ನಲ್ಲಿ ಹೇಳಿರುವುದಕ್ಕೂ ಇಲ್ಲಿ ಇರುವುದಕ್ಕೂ ಎಷ್ಟು ವ್ಯತ್ಯಾಸ ಇದೆ ಎನ್ನುವುದಕ್ಕೆ ಈ ಫಿಗರ್ಸ್ ಸಾಕ್ಷಿ. ಇದೆಲ್ಲಾ ನೀವು ಕೊಟ್ಟಿದ್ದು. ಇದನ್ನು ನಾವು ಅನೇಕ ಸಾರಿ ಹೇಳಿದಾಗ ತಾವು ಇದನ್ನು ಬೇರೆ ಬೇರೆ ರೀತಿಯಿಂದ ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ. ಇದು ನನಗೆ ಸಿಕ್ಕಿದ್ದು statement showing the details of allotment, release and expenditure ಇದನ್ನು ನಾನು

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಿಂದಲೇ ತೆಗೆದುಕೊಂಡಿದ್ದು. ಅದರಲ್ಲಿ ಇರಿಗೇಶನ್ ಪ್ರಾಜೆಕ್ಟ್‌ಗಳಿಗೆ ನೀವು ಎಷ್ಟು ಅಲೋಕೇಟ್ ಮಾಡಿದಿರಿ, ಎಷ್ಟು ಹಣವನ್ನು ರಿಲೀಸ್ ಮಾಡಿದಿರಿ, ಖರ್ಚು ಎಷ್ಟಾಗಿದೆ ಎಂಬ ವಿವರಗಳು ಇವೆ. ಖರ್ಚಾಗಿರುವ ಹಣವನ್ನು ನೀವು ಕೊಡಬೇಕು. ಆ ಹಣ ಕೊಡದೆ ಇದ್ದ ಕಾರಣ ಇವತ್ತಿನ ದಿವಸ ಯುಕೆಪಿ ಯಲ್ಲಿ ಎಲ್ಲಾ ಕೆಲಸಗಳು ನಿಂತು ಹೋಗಿವೆ. ಬೇಕಾದರೆ ನೀವು ಹೋಗಿ ನೋಡಬಹುದು. ನಾಲ್ಕು-ಐದು ತಿಂಗಳ ಹಿಂದೆ ಯಾವ ಸ್ಪೀಡ್‌ನಲ್ಲಿ ಇತ್ತು, ಇವತ್ತು ಅದೇ ಸ್ಪೀಡ್‌ನಲ್ಲಿ ಅಷ್ಟೇ ಹಣವನ್ನು ನೀವು ಪ್ರತಿ ತಿಂಗಳು ರಿಲೀಸ್ ಮಾಡುತ್ತೇವೆ ಅಂದರೆ ನೀವು ಹೇಳಿದ್ದು ನಾನು ಕೇಳುತ್ತೇನೆ. ಇಲ್ಲದಿದ್ದರೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ, ಪ್ಲಾನಿಂಗ್ ಡಿಪಾರ್ಟ್‌ಮೆಂಟನಲ್ಲಿ, ಪಬ್ಲಿಕ್ ಅಕೌಂಟ್ಸ್‌ನಲ್ಲಿ ಕೊಟ್ಟಿರುವ ಅಂಕಿಅಂಶ ತಪ್ಪು ಎಂದು ತಾವು ಹೇಳಬೇಕಾಗುತ್ತದೆ.

ಶ್ರೀ ಕೆ.ಎನ್.ನಾಗೇಗೌಡ: ನಮ್ಮ ಅಲೋಕೇಶನ್‌ಗೂ, ನಮ್ಮ ಎಕ್ಸ್‌ಪೆಂಡಿಚರ್‌ಗೂ, ಫಿಸಿಕಲ್ ಟಾರ್ಗೆಟ್‌ಗೂ ಡಿಫರೆನ್ಸ್ ಹೇಳುತ್ತಿದ್ದಾರೆ. ಬಹುಶಃ ಅವರು ಒಂದು ಅಂಶವನ್ನು ಗಮನಿಸಬೇಕು. ಈ ವರ್ಷ ನಾವು ಬಾಗಲಕೋಟೆಗೆ ರೀಹ್ಯಾಬಿಲಿಟೇಶನ್‌ಗೋಸ್ಕರ 100 ಕೋಟಿ ರೂಪಾಯಿಗಳಷ್ಟು ಹಣವನ್ನು ಇಟ್ಟಿದ್ದೆವು. ಅಲ್ಲಿ ಸಮಸ್ಯ ಆರ್ ಅಂಡ್ ಆರ್ ವರ್ಕ್ಸ್ ಕೇವಲ 10 ಕೋಟಿ ರೂಪಾಯಿ ಮಾತ್ರ ಬಾಗಲಕೋಟೆಯಲ್ಲಿ ಖರ್ಚು ಮಾಡಲು ಸಾಧ್ಯವಾಯಿತು. 450 ಕೋಟಿ ರೂಪಾಯಿಗಳನ್ನು ಅಲಮಟ್ಟಿ ಡ್ಯಾಂನ ಹಳ್ಳಿಗಳ ಪುನರ್‌ವಸತಿಗೋಸ್ಕರ ಇಟ್ಟಿದ್ದೇವೆ. ಅಲ್ಲಿ ಸ್ವಲ್ಪ ಜಮೀನಿನ ವ್ಯಾಜ್ಯಗಳು, ತಕರಾರು ಇದ್ದಿದ್ದರಿಂದ ನಾವು ಬರೀ 180 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ. ಪ್ರೈಸ್ ಫಿಕ್ಸೇಶನ್ ಗೋಸ್ಕರ ಮಾರ್ಚಿ 13ನೇ ತಾರೀಖು ಮೀಟಿಂಗ್ ಇಟ್ಟುಕೊಂಡಿದ್ದೇವೆ. ಅಂದರೆ, ಡ್ರೈ ಲ್ಯಾಂಡ್‌ಗೆ ಎಷ್ಟು ಹಣ ಇಡಬೇಕು ವೆಟ್ ಲ್ಯಾಂಡ್‌ಗೆ ಎಷ್ಟು ಹಣ ಇಡಬೇಕು, ಇರಿಗೇಷನ್ ಲ್ಯಾಂಡ್‌ಗೆ ಎಷ್ಟು ಹಣ ಇಡಬೇಕು ಹಾಗೂ ಶುಗರ್‌ಕೇನ್ ಲ್ಯಾಂಡ್‌ಗೆ ಎಷ್ಟು ಹಣ ಇಡಬೇಕು ಎನ್ನುವ ಬಗ್ಗೆ ಕನ್‌ಫ್ಯೂಶನ್ ಇದ್ದುದ್ದರಿಂದ 550 ಕೋಟಿ ರೂಪಾಯಿ ಮಾತ್ರ ಆಗಿದೆ. ಸಿವಿಲ್ ವರ್ಕ್ಸ್‌ಗೆ ಸಂಬಂಧಪಟ್ಟಂತೆ ಈ ತಿಂಗಳಿಗೆ ಸಂಬಂಧಿಸಿದಂತೆ ಇವತ್ತು ಬೆಳಿಗ್ಗೆ ರಿವ್ಯೂ ಮಾಡಿದಂತಹ ಸಂದರ್ಭದಲ್ಲಿ ಸದರಿ ಕೆಲಸಕ್ಕೆ 380 ಕೋಟಿ ರೂಪಾಯಿ ಖರ್ಚುಮಾಡಬೇಕಾಗಿತ್ತು. ಅಂದರೆ, ಜೇವರ್ಗಿ ಬ್ರಾಂಚ್‌ಗೆ, ನಾರಾಯಣಪುರ ಬ್ರಾಂಚ್‌ಗೆ, ಇಂಡಿ ಬ್ರಾಂಚ್‌ಗೆ, ಡ್ಯಾಮ್ ವರ್ಕ್ಸ್‌ಗಳಿಗೆ 380 ಕೋಟಿ ರೂಪಾಯಿಗಳಲ್ಲಿ 310 ಕೋಟಿ ರೂಪಾಯಿಗಳನ್ನು ಇವೊತ್ತಿನವರೆಗೆ ಖರ್ಚು ಮಾಡಿದ್ದೇವೆ. ಮತ್ತು ನಾವು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು, ಅದರ ಪ್ರಕಾರ ಮಾಡಿದ್ದೇವೆ. ಎಷ್ಟು ಕಾರ್ಯಕ್ರಮಗಳಿವೆ, ಸಾಧನೆ ಎಷ್ಟು, ಗುರಿ ಎಷ್ಟಿತ್ತು, ಭೌತಿಕ ಸಾಧನೆ ಎಷ್ಟು ಸಾಧಿಸಿದ್ದೇವೆ, ಸಿ.ಡಿ. ವರ್ಕ್ಸ್ ಎಷ್ಟು ಮುಂತಾದ ವಿವರಗಳನ್ನು ಬೇಕಾದರೆ ನಾನು ಉತ್ತರಿಸುವಾಗ ಕೊಡುತ್ತೇನೆ, ತಾವು ಮಾಹಿತಿಯನ್ನು ಸರಿಪಡಿಸಿಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಪರ್‌ಫಾರ್ಮೆನ್ಸ್ ಪುಸ್ತಕದಲ್ಲಿರುವುದನ್ನೇ ನಾವು ಫೋಟೋಸ್ಟ್ಯಾಟ್ ಕಾಪಿ ಮಾಡಿಸಿದ್ದೇವೆ. ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಅಲೋಕೇಷನ್ ಮಾಡಿದ್ದೇವೆಂದು, ಖರ್ಚು ಮಾಡಿದ್ದೇವೆಂದು ತೋರಿಸುವುದು. ಆದರೆ, ವಾಸ್ತವಾಂಶ ನೋಡಿದಾಗ ಪ್ರತಿ ವರ್ಷವೂ 100 ಕೋಟಿ, 150 ಕೋಟಿ, 200 ಕೋಟಿ ರೂಪಾಯಿಗಳಷ್ಟು ಕೊರತೆಯಿರುತ್ತದೆ. ಆನಂತರ ಎಕ್ಸ್‌ಪೆಂಡಿಚರ್ ಮತ್ತು ರಿಲೀಸ್‌ಗೂ ವ್ಯತ್ಯಾಸವಿದೆ. ನಿಮ್ಮ ರಿಪೋರ್ಟ್ ಪ್ರಕಾರ ಇವೊತ್ತು ತಾವು ಇಡೀ ಇರಿಗೇಶನ್ ಪ್ರಾಜೆಕ್ಟ್‌ಗಳಿಗೆ ಇಟ್ಟಿದ್ದ ಹಣ 1,249 ಕೋಟಿ ರೂಪಾಯಿಗಳಾಗಿದ್ದು, ಇದರಲ್ಲಿ ರಿಲೀಸ್ ಆಗಿದ್ದು 488 ಕೋಟಿ ರೂಪಾಯಿಗಳು. ಆನಂತರ, ಎಕ್ಸ್‌ಪೆಂಡಿಚರ್ ಎಷ್ಟೆಂದರೆ 543 ಕೋಟಿ ರೂಪಾಯಿಗಳು. ಆನಂತರ, ಹೆಚ್ಚು ಕಡಿಮೆ ಸುಮಾರು.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ನೀರಾವರಿ ಇಲಾಖೆಯಲ್ಲಿ ಎಲ್ಲಾ ವಿಧದ ಕೆಲಸಗಳಿಗೆ ಇನ್ನೂ ಬಾಕಿ ಕೊಡಬೇಕಾಗಿದೆ. ಅಂದರೆ, ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಬಾಕಿ ಇಟ್ಟುಕೊಂಡು ಯಾರು ಕೆಲಸ ಮಾಡುತ್ತಾರೆ? ಎಲ್ಲಿ ಕೆಲಸ ಮಾಡುತ್ತಾರೆ? ಹಣ ಬಾಕಿ ಬರಬೇಕಾಗಿದ್ದುದರಿಂದ ಎಲ್ಲರೂ ಕೆಲಸವನ್ನು ನಿಲ್ಲಿಸಿದ್ದಾರೆ. ಮೊದಲು ಅವರಿಗೆ ಎಷ್ಟೆಷ್ಟು ದುಡ್ಡು ಬರಬೇಕೆಂಬುದನ್ನು ಲೆಕ್ಕ ಹಾಕಬೇಕು. ಹೆಚ್ಚು-ಕಡಿಮೆ ಹಣವನ್ನು ತೆಗೆದುಕೊಂಡು ಬಿಡುವುದು, ಕೆಲಸವನ್ನು ನಿಲ್ಲಿಸಿಬಿಡುವುದು. ಕೇಳಿದರೆ, ದುಡ್ಡಿಲ್ಲ, ಬಿಲ್ ಕೊಟ್ಟಿಲ್ಲ ಅದಕ್ಕೆ ಕೆಲಸ ನಿಲ್ಲಿಸಿದ್ದೇವೆಂದು ಹೇಳುತ್ತಾರೆ. ಆಗ ಪುನಃ ಇಲ್ಲಿಂದ ಇಂಜನಿಯರ್ಸ್ ಹೋಗಬೇಕು ಅಥವಾ ನೀವು ರಿವ್ಯೂ ಮಾಡಿದಾಗ, ಕೆಲಸ ಏಕೆ ಹೀಗೆ ನಡೆದಿದೆ? ಎಂದು ಅಥವಾ ಯಾರಾದರೂ ಪ್ರೊಸೆಷನ್ ಮಾಡಿ ಗಲಾಟೆ ಮಾಡಿದಾಗ ನೀವೇ ಅಲ್ಲಿಗೆ ಹೋದಾಗ ಮಾಡಬೇಕು. ಈ ಅಂಕಿ-ಅಂಶವನ್ನು ನಾವು ತಪ್ಪೆಂದು ಹೇಳುವುದಲ್ಲ. ನಾವು ಯಾವಾಗಲೂ ಕೂಡ ಇದರ ಬಗ್ಗೆ ಹೇಳಿದಾಗ ಅನೇಕ ಸಾರಿ ನೀವು ಗಮನದಲ್ಲೇ ತೆಗೆದುಕೊಳ್ಳುವುದಿಲ್ಲ ರೂ. 1,249 ಕೋಟಿಗಳಲ್ಲಿ ಇವೊತ್ತಿನವರೆಗೆ ಬಿಡುಗಡೆ ಮಾಡಿದ್ದು 488 ಕೋಟಿ ರೂಪಾಯಿಗಳು ಮಾತ್ರ. ಮತ್ತೆ ಇನ್ನೂ 800 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಬೇಕು. ಆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಈ ಹಣ ಎಲ್ಲಿಗೆ ಹೋಗುತ್ತದೆ? ಯಾರಿಗೆ ಸಿಗುತ್ತದೆ? ಯಾರು ಈ ಬಿಲ್ಲನ್ನು ತೆಗೆದುಕೊಳ್ಳುತ್ತಾರೆ ಎಂಬುದನ್ನು ನಾವು ನೋಡಬೇಕಲ್ಲ. ಇಲ್ಲದಿದ್ದರೆ ನೀವ್ಯಾಕೆ ಇದನ್ನು ಇಡುತ್ತೀರಿ? ಇಷ್ಟೊಂದು ಹಣವನ್ನು ಇಟ್ಟಿದ್ದೇವೆಂದು ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳುವುದು, ಬಜೆಟ್‌ನಲ್ಲಿ ತೋರಿಸುವುದು, ಜನರಿಗೆ ತೋರಿಸುವುದು, ಇದರ ಬಗ್ಗೆ ಪಬ್ಲಿಸಿಟಿ ಕೊಡುವುದು. ಆನಂತರ, ಖರ್ಚು ಮಾಡುವಾಗ ಹಣ ಮಾತ್ರ ಬಿಡುಗಡೆ ಮಾಡುವುದಿಲ್ಲ. ಹೀಗೆ ದ್ವಂದ್ವ ನೀತಿಯನ್ನು ಅನುಸರಿಸುತ್ತಾ ಇನ್ನೊಂದೆಡೆ

ಅದನ್ನು ಸಮರ್ಥಿಸಿಕೊಳ್ಳುವುದು. ಒಂದು ಸುಳ್ಳನ್ನು ಮೂರು ಬಾರಿ ಹೇಳಿದರೆ ಅದು ಸತ್ಯವಾಗುತ್ತದೆ ಎನ್ನುವಂತೆ ಅನೇಕ ಸಾರಿ ಹೇಳಿದ್ದೇ ಹೇಳಿದ್ದು, ಅದು ಪುನರಾವರ್ತನೆಯಾಗಿ ಪತ್ರಿಕೆಗಳಲ್ಲಿ ಬರುವುದು. ನಾವು ಒಂದು ಹೇಳುವುದು, ಅವರು ಮತ್ತೊಂದು ಹೇಳುವುದು. ಅನೇಕ ಸಾರಿ ಏನಾಗುತ್ತದೆಂದರೆ, ಮಂತ್ರಿಗಳು ಪತ್ರಿಕೆಗೆ ಹೇಳಿಕೆ ಕೊಡುತ್ತಾರೆಂದರೆ, ಸಹಜವಾಗಿ ಅವರ ಹೇಳಿಕೆಯನ್ನು ಹೈಲೈಟ್ ಮಾಡಿ ಹಾಕುವುದು. ಇಲ್ಲ, ಇದು ಸರಿಯಿಲ್ಲ, ಅಂಕಿ-ಅಂಶ ಅವರದೇ ಎಂದಾಗ ನಾವು ಹೇಳಿದ್ದು ತಪ್ಪು ಎಂದು ಇನ್ನೊಂದು ಸಲ ಹೇಳುವುದು. ಆದರೆ, ಸರಿಯೋ ತಪ್ಪೋ ಎನ್ನುವುದಕ್ಕಿಂತಲೂ ವಾಸ್ತವಿಕವಾಗಿ ಇವೊತ್ತು ಹಣ ಬಿಡುಗಡೆಯಾಗಿದ್ದು ಎಷ್ಟು? ಖರ್ಚಾಗಿದ್ದು ಎಷ್ಟು? ಕೊಡತಕ್ಕಂಥ ಬಾಕಿ ಎಷ್ಟು? ಭೌತಿಕ ಸಾಧನೆ ಎಷ್ಟು? 800 ಕೋಟಿ ರೂಪಾಯಿಗಳು ಇನ್ನೂ ಏಕೆ ಬಿಡುಗಡೆಯಾಗಲಿಲ್ಲ? ಈ ಹಣ ಬಿಡುಗಡೆಯಾಗಿಲ್ಲವೆಂದರೆ ನೀವು ಅಷ್ಟು ರಿಸೋರ್ಸ್ ಅನ್ನು ಮೊಬಿಲೈಸ್ ಮಾಡಿಲ್ಲವೆಂದಾಗುತ್ತದೆ. ಅಥವಾ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಆ ಹಣವನ್ನು ಇರಿಗೇಶನ್ ಡಿಪಾರ್ಟ್‌ಮೆಂಟ್‌ಗೆ ಕೊಡುವುದಕ್ಕೆ ತಯಾರಿಲ್ಲ, ನೀವು ನಿಮ್ಮದೇ ಆದಂಥ ಮುದ್ರೆಯೊತ್ತಿಕೊಂಡು ಸೇರಿಸಿಕೊಂಡು ಬಿಟ್ಟಿದ್ದೀರಿ ಎನ್ನುವಂತಾದ್ದಾಗುತ್ತದೆ. ಆನಂತರ, ಎರಡನೆಯದಾಗಿ, ಇವೊತ್ತು ಕೃಷ್ಣಾ ಬೇಸಿನ್‌ನಲ್ಲಿರುವ ಎಲ್ಲಾ ಕಾಮಗಾರಿಗಳಿಗೂ ಒಟ್ಟಾರೆ ಅಲೋಕೇಶನ್ ಮಾಡಿರುವುದರಲ್ಲಿ ಖರ್ಚು ಉಳಿದು ನಿಮ್ಮ ಆಕ್ಸಿಲರೇಟೆಡ್ ಪ್ರೋಗ್ರಾಂ ಎಂದು ಕೊಟ್ಟಿದ್ದೀರಲ್ಲಾ, ಮೊನ್ನೆ ವಾದ-ವಿವಾದ ನಡೆಯಿತು. ನೀವೆಲ್ಲಾ ಹೇಳಿದಿರಿ. 1997-98ನೇ ಸಾಲಿನಲ್ಲಿ ಎ.ಐ.ಡಿ.ಪಿ. ಪ್ರೋಗ್ರಾಂನಲ್ಲಿ ಬಹುಶಃ ನೀವು ಗಮನಹರಿಸಿದರೆ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1, ಫೇಸ್-3ಕ್ಕೆ ಮಂಜೂರಾದ ಹಣ ನೂರು ಕೋಟಿ ರೂಪಾಯಿಗಳು, ಬಿಡುಗಡೆಯಾದ ಹಣ 50 ಕೋಟಿ ರೂಪಾಯಿಗಳು. ಆನಂತರ, ಆರ್ಥಿಕ ಕಾರ್ಯಕ್ರಮಕ್ಕೆ 161 ಕೋಟಿ ರೂಪಾಯಿಗಳು ಇವೊತ್ತು ಖರ್ಚಾಗಿದ್ದು ಕೇವಲ 74 ಕೋಟಿ ರೂಪಾಯಿಗಳು. ಅದೇ ರೀತಿ ಮಲಪ್ರಭಾ ಯೋಜನೆಗೆ ಮಂಜೂರಾದ ಹಣ 24 ಕೋಟಿ ರೂಪಾಯಿಗಳು ಬಿಡುಗಡೆಯಾದದ್ದು 12 ಕೋಟಿ ರೂಪಾಯಿಗಳು. ನಾವು ಇನ್ನೂ ಮಾರ್ಚ್ ತಿಂಗಳಿನಲ್ಲಿದ್ದೇವೆ. ಉಪಾಧ್ಯಕ್ಷರೆ, ಇದು ನಿಮ್ಮ ಕ್ಷೇತ್ರಕ್ಕೂ ಅನ್ವಯಿಸುವುದರಿಂದ ನಿಮಗೂ ಸಿಟ್ಟು ಬರುವುದಿಲ್ಲವಲ್ಲ. ಹಿರೇಹಳ್ಳಕ್ಕೆ 6 ಕೋಟಿ ರೂಪಾಯಿಗಳು ಮಂಜೂರಾದರೆ ಬಿಡುಗಡೆಯಾಗಿದ್ದು 3 ಕೋಟಿ ರೂಪಾಯಿ ಮಾತ್ರ. ಘಟಪ್ರಭಾಕ್ಕೆ 30 ಕೋಟಿ ರೂಪಾಯಿಗಳು ಮಂಜೂರಾದರೆ ಬಿಡುಗಡೆಯಾದದ್ದು 15 ಕೋಟಿ ರೂಪಾಯಿಗಳು. ಮತ್ತು ಕಾರಂಜಾ ಯೋಜನೆಗೆ 15 ಕೋಟಿ ರೂಪಾಯಿಗಳು ಮಂಜೂರಾತಿಯಾಗಿದ್ದರೆ ಇಲ್ಲಿಯವರೆಗೆ ಬಿಡುಗಡೆಯಾದದ್ದು 7 ಕೋಟಿ ರೂಪಾಯಿಗಳು ಮಾತ್ರ. ಅಂದರೆ, ಮಾರ್ಚ್ ಅಂತ್ಯದ ಉಳಿದ ಇಪ್ಪತ್ತು ದಿವಸಗಳಲ್ಲಿ ಶೇಕಡಾ 50ರಷ್ಟು ಹಣ ಎಂದರೆ ಒಂದು ವರ್ಷದಲ್ಲಿ 11 ತಿಂಗಳು 15 ದಿವಸಗಳಲ್ಲಿ ಶೇಕಡಾ 50ರಷ್ಟು ಹಣ ಬಿಡುಗಡೆ, ಇನ್ನುಳಿದ 15 ದಿವಸಗಳಲ್ಲಿ ಶೇಕಡಾ 50ರಷ್ಟು ಹಣ ಬಿಡುಗಡೆ, ಮತ್ತು ಖರ್ಚು

ಮಾಡಿರುವುದನ್ನು ನೋಡಿದರೆ ಕೆಲವು ಕಡೆ ಶೇಕಡ 50ರಷ್ಟಾದರೆ, ಮತ್ತೆ ಕೆಲವು ಕಡೆ ಶೇಕಡ 25ರಷ್ಟು, 35ರಷ್ಟಾಗಿದೆ. ಹೀಗೆ ನಿಮ್ಮ ಸಾಧನೆ ಇದ್ದಾಗ ಜನರು ಹೇಗೆ ನಿಮ್ಮನ್ನು ನಂಬಬೇಕು? ನಾವು ಅಷ್ಟು ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆಂದು ನೀವು ಹೇಳಿಕೊಳ್ಳಬಹುದು. ಆದರೆ, ಇಲ್ಲೇನಿದೆ? ಈ ಫಿಗರ್ಸ್ ಅನ್ನು ನೀವೇ ಕೊಟ್ಟಿದ್ದು, ಈ ಸದನದಲ್ಲಿ ಸಿಕ್ಕಂಥ ಅಂಕಿ-ಅಂಶಗಳು, ಇದರ ಆಧಾರದ ಮೇಲೆ ನಾವು ನೋಡಿದಾಗ ಖಂಡಿತವಾಗಿ ಇದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇಲ್ಲ. ಏಕೆಂದರೆ, ಮಂತ್ರಿಗಳು ರಿವ್ಯೂ ಮಾಡುತ್ತಾರೆ, ಆದರೂ ಕೂಡ ನಿಮ್ಮ ಇಲಾಖೆ ಇಷ್ಟು ಹಿಂದೆ ಬಿದ್ದಿರುವುದಕ್ಕೆ ನನಗೇನೂ ಕಾರಣವೆಂದು ಗೊತ್ತಾಗುತ್ತಿಲ್ಲ. ನೀರಾವರಿಗೆ ಇಷ್ಟೊಂದು ಆಲೋಕೇಶನ್ ಇದ್ದು ಕಡಿಮೆ ಹಣ ಬಿಡುಗಡೆಯಾಗುತ್ತದೆಂದರೆ, ಆನೆ ಹಲ್ಲು ತೋರಿಸುವುದಕ್ಕೋಸ್ಕರ ತಿನ್ನುವುದಕ್ಕೊಂದು ಎನ್ನುವ ರೀತಿಯಲ್ಲಿ ಮಾಡುತ್ತೀರೋ? ಬಜೆಟ್‌ನಲ್ಲಿ ಹೆಚ್ಚು ಹಣ ತೋರಿಸುವುದು, ಬಿಡುಗಡೆ ಮಾಡಿದ್ದು ಖರ್ಚು ಮಾಡುವುದು ಮಾತ್ರ ಕಡಿಮೆ. ಹೀಗಾದರೆ, ಯಾವ ರಾಜ್ಯ ತಾನೇ ಮುಂದೆ ಬರುತ್ತದೆ? ಯಾವ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸುವುದಕ್ಕಾಗುತ್ತದೆ? ಮತ್ತು ಕ್ರಿ.ಶ.2000 ಇಸವಿಯೊಳಗೆ ಕೃಷ್ಣಾ ಬೇಸಿನ್‌ನಲ್ಲಿರತಕ್ಕಂಥ ಯಾವ ಯೋಜನೆಗಳನ್ನು ಪೂರ್ತಿಗೊಳಿಸುವುದಕ್ಕಾಗುತ್ತದೆ? ಇದನ್ನು ತಾವು ಹೇಳಬೇಕು. ಹಿಂದೆ ನೀವು 25 ವರ್ಷಗಳಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಇವೊತ್ತು ನಾವು ಒಂದೇ ವರ್ಷದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದರಿಂದ ನಾವು ಮೇಲೋ ನೀವು ಮೇಲೋ ಎನ್ನುವುದಕ್ಕಾಗುದತ್ತದೆಯೇ? ಆಲಮಟ್ಟಿ ಅಣೆಕಟ್ಟನ್ನು ಇವೊತ್ತು ಒಂದೇ ದಿವಸದಲ್ಲಿ ಕಟ್ಟಿಸಿದಿರಾ? ಅದೇ ರೀತಿ ನಾರಾಯಣಪುರ ಡ್ಯಾಮ್, ಹೇಮಾವತಿ ಮತ್ತು ಹಾರಂಗಿ ಯೋಜನೆ ಬಗ್ಗೆ ನೀವು ಹೇಳಿಕೊಳ್ಳಬಹುದು. ನೀವು ತಿಳಿಸಿರುವ ಪ್ರಕಾರ ನಡೆದುಕೊಂಡಿದ್ದೀರಾ? ಎನ್ನುವುದಕ್ಕೆ ಉತ್ತರ ಬೇಕು. ನೀವು ಏನು ವಾಗ್ದಾನ ಮಾಡಿದ್ದೀರಿ? ನೀವು ಬಜೆಟ್‌ನಲ್ಲಿ ಏನು ಪ್ರಾಮಿಸ್ ಮಾಡಿದ್ದೀರಿ, ಅದನ್ನು ಫುಲ್‌ಫಿಲ್ ಮಾಡಿಲ್ಲವೆಂಬುದೇ ಇಲ್ಲಿನ ವಾದ. ಹಿಂದೇನಾಯಿತು? ಮುಂದೇನಾಯಿತು? ಅದು ಬೇರೆ ವಿಷಯ. ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದು ಮತ್ತು ನಿಮ್ಮ ಬಜೆಟ್‌ನಲ್ಲಿ ಹೇಳಿದಂಥ ಮಾತಿಗೆ ತಾವು ಎಷ್ಟರಮಟ್ಟಿಗೆ ನಡೆದುಕೊಂಡಿದ್ದೀರಿ? ಎಷ್ಟು ಆಚರಣೆಗೆ ತಂದಿದ್ದೀರಿ? ಎನ್ನುವುದನ್ನು ತಾವು ಇಲ್ಲಿ ಹೇಳಬೇಕಾಗುತ್ತದೆ. ಈ ಕೆಲಸಗಳನ್ನು ಮಾಡದಿರುವ ಕಾರಣ ಜನರು ಇವೊತ್ತು ನಿಮ್ಮನ್ನು ಕೈಬಿಟ್ಟಿದ್ದಾರೆನ್ನುವ ಮಾತನ್ನು ಹೇಳಬೇಕಾಗುತ್ತದೆ ಮತ್ತು ಆ ಜನರಿಂದ ನೀವು ಇನ್ನೊಬ್ಬರ ಕೈಗೆ ಕೊಟ್ಟಿರಲ್ಲ, ಅದರ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನೊಂದು ವಿಚಾರವೇನೆಂದರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ ಎಂ.ಪಿ.ಪ್ರಕಾಶ್‌ರವರು ಈಗ ಸದನದಲ್ಲಿಲ್ಲ. ಅವರು ಅನೇಕ ಸಾರಿ ಭಾಷಣ ಮಾಡಿ ತಮ್ಮ ಇಲಾಖೆಗೆ ಕೊಟ್ಟಂಥ

ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ, statement showing the financial and physical figures under Nirmal Grama Yojana during 1997-98, Up to January, 1998 ನನ್ನ ಹತ್ತಿರ ಫಿಗರ್ಸ್ ಇದೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಅವರಿಗೆ ಹೇಳುವುದೇನೆಂದರೆ, ನಿರ್ಮಲ ಗ್ರಾಮ ಯೋಜನೆಗೆ 1997-98ರಲ್ಲಿ ಅಲೋಕೇಶನ್ ಕೊಟ್ಟಿದ್ದು 44 ಕೋಟಿ 31 ಲಕ್ಷ ರೂಪಾಯಿಗಳು, ಬಿಡುಗಡೆಯಾದದ್ದು 19 ಕೋಟಿ 10ಲಕ್ಷ ರೂಪಾಯಿಗಳು, ಇದು ಜನವರಿ ಅಂತ್ಯದವರೆಗೆ ಹೇಳುತ್ತಿದ್ದೇನೆ.

2.10 ಪಿ.ಎಂ

44 ಕೋಟಿ ರೂಪಾಯಿ ಪ್ರಾವಿಜನ್ ಮಾಡಿದಿರಿ, 19 ಕೋಟಿ ರೂಪಾಯಿ ರಿಲೀಸ್ ಮಾಡಿದಿರಿ. 9 ಕೋಟಿ ರೂಪಾಯಿ ಖರ್ಚು ಮಾಡಿದಿರಿ. 24.3 ಪರ್ಸೆಂಟ್, ಇದು ನಿಮ್ಮ ಅಚೀವ್‌ಮೆಂಟ್. ಇದು ಏಕೆ ಹೀಗೆ ಆಗುತ್ತದೆ. ಇದಕ್ಕೆ ನೀವು ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾಡಿದಿರಿ ಅಥವಾ ಮಂತ್ರಿಗಳ ಜವಾಬ್ದಾರಿ ಇದೆ. ಎಲ್ಲರೂ ಕೂಡಿ ಬಡವರಿಗೆ ಅನುಕೂಲ ಆಗತಕ್ಕ ಕಾರ್ಯಕ್ರಮದಲ್ಲಿ ಆಸಕ್ತಿ ವಹಿಸಿ ನೀವು ಕೆಲಸ ಮಾಡದೇ ಇದ್ದರೆ ಬಡವರು ನಿಮಗೆ ಸಹಾಯ ಮಾಡುತ್ತಾರಾ? ಬಡವರು ನಿಮ್ಮ ಜೊತೆಯಲ್ಲಿ ಇರುತ್ತಾರಾ? ಅಥವಾ ನಾವು ಪದೇ ಪದೇ ಬಡವರಿಗೆ ಸಹಾಯ ಮಾಡತಕ್ಕ ಕಾರ್ಯಕ್ರಮ ಕೊಟ್ಟಿದ್ದೇವೆ, ಏನೂ ಮಾಡಿಲ್ಲವೆಂದು ಹೇಳಬೇಡಿ ಎಂದು ಹೇಳಿದರೆ ಹೇಗೆ? ಇಲ್ಲಿರತಕ್ಕ ವಾಸ್ತವಾಂಶವೇ ಬೇರೆ. ನಿಮ್ಮ ಮಾತು ಬೇರೆ, ಹೇಳಿಕೊಳ್ಳುವುದು ಇನ್ನೊಂದು. ಇಂತಹ ಒಂದು ಪರಿಸ್ಥಿತಿಯಲ್ಲಿ ಈ ಸರ್ಕಾರ ಇದ್ದಾಗ ನಮ್ಮ ಅಚೀವ್‌ಮೆಂಟ್ ಭಾರಿ ಇದೆ ಎನ್ನತಕ್ಕ ಮಾತನ್ನು ನೀವು ಹೇಳಿಕೊಂಡು ಹೋದರೆ ಖಂಡಿತವಾಗಿ ಇದು ಯಾರಿಗೂ ಕೂಡ ಭೂಷಣ ತರತಕ್ಕ ಮಾತು ಅಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇವತ್ತು ಈ ಒಂದು ಅಂಕಿ ಅಂಶದ ಮುಖಾಂತರ ನಿಮ್ಮ ಮುಂದೆ ಈ ಎಲ್ಲಾ ಮಾತುಗಳನ್ನು ಇಡುತ್ತಿದ್ದೇನೆ. ಇನ್ನೊಂದು ವಿಷಯ. ಅಂಬೇಡ್ಕರ್ ಯೋಜನೆಯಲ್ಲಿ ಪ್ರತಿ ಒಂದು ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನವನ್ನು ಕಟ್ಟಿಸುತ್ತೇವೆಂದು ಹೇಳಿದಿರಿ. ಇದಕ್ಕೆ ಹತ್ತು ಕೋಟಿ ರೂಪಾಯಿ ಪ್ರಾವಿಜನ್ ಇದ್ದರೆ ಇಲ್ಲಿಯವರೆಗೆ ನೀವು ಖರ್ಚು ಮಾಡಿದ್ದು ಒಂದು ಕೋಟಿ ರೂಪಾಯಿಗಳು. ಅಂಬೇಡ್ಕರ್ ಭವನ ಎಂದು ಏನು ಮಾಡಿದಿರಿ, ಇದಕ್ಕೆ ಪ್ರಾವಿಜನ್ 10 ಕೋಟಿ ರೂಪಾಯಿ ಇದ್ದರೆ ಖರ್ಚು ಮಾಡಿರುವುದು ಒಂದು ಕೋಟಿ ರೂಪಾಯಿ. ನೀವು ಇದನ್ನು ನೋಡಿ. ನಿಮ್ಮ ಪರ್‌ಫಾರ್ಮೆನ್ಸ್ ಬುಕ್‌ನಲ್ಲಿ ಇದೆ, ಹೀಗೆ ಮತ್ತೆ ಮೊದಲಿನಂತೆ ಹೇಳುವುದು. ನಾವು ಹಾಗೆ ಮಾಡುತ್ತೇವೆ, ಹರಿಜನ ಗಿರಿಜನರಿಗೆ ಸಾಕಷ್ಟು ಹಣವನ್ನು ಇವತ್ತು ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಏನು ಮಾಡಿದ್ದೀರಿ? ಇಷ್ಟಂತಹ ಹಣವನ್ನು ಮಾಡತಕ್ಕ ಒಂದು ಶಕ್ತಿ ನಿಮಗೆ ಇಲ್ಲ. ಮನಸ್ಸು ಇಲ್ಲ. ಅಂದರೆ ನಾವು

ಯಾರಿಗೆ ಹೇಳಬೇಕು. ಪದೇ ಪದೇ ಇದಕ್ಕಾಗಿ ನಾವು ಅಜಿಟೇಷನ್ ಮಾಡುವುದಕ್ಕೆ ಆಗುತ್ತದಾ? ಧರಣ ಕೂಡುವುದಕ್ಕೆ ಆಗುತ್ತದಾ ಅಥವಾ ನಮ್ಮ ಕೆಲಸ ಎಂದು ನೀವು ತಿಳಿದುಕೊಂಡಿದ್ದೀರಾ? ನಿಮ್ಮ ಕೆಲಸ ಅಲ್ಲವೇ? ನಾವು ಹೈಲೈಟ್ ಮಾಡಿದಾಗ ನಾವು ಹೇಳಿದಾಗ ಮಾತ್ರ ಇದನ್ನು ಇಂಪ್ಲಿಮೆಂಟ್ ಮಾಡಬೇಕು. ಇಲ್ಲದಿದ್ದರೆ ಇಂಪ್ಲಿಮೆಂಟ್ ಮಾಡಬಾರದು ಎಂಬ ವಿಚಾರ ಇದೆಯೇ? ಇದು ನನಗೆ ಅರ್ಥ ಆಗುತ್ತಾ ಇಲ್ಲ. ಇನ್ನೊಂದು ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಆಶ್ರಯ ಯೋಜನೆಯಡಿಯಲ್ಲಿನ ಮನೆ ವಿಚಾರ. ಮಂತ್ರಿಗಳು ಇಲ್ಲೇ ಇದ್ದರು, ಅವರಿಗೆ ಪುರಸೊತ್ತು ಇಲ್ಲ ಎಂದು ಕಾಣುತ್ತದೆ, ಎಲ್ಲೋ ಹೋದರು. ರಾಜ್ಯಪಾಲರ ಭಾಷಣದ ಪ್ಯಾರಾ 35ರಲ್ಲಿ ಹೋದ ವರ್ಷ ನೀವು ಎಂಫಸೈಸ್ ಮಾಡಿದ್ದೀರಿ. ಈ ಸಲ ಕೂಡ ಅದನ್ನು ಪ್ರತಿಪಾದನೆ ಮಾಡಿದ್ದೀರಿ. ಇದರಲ್ಲಿ ಏನು ಅಚೀವ್‌ಮೆಂಟ್ ಇದೆ? ಇದರಲ್ಲಿ 1996-97ರ ನಿಮ್ಮ ಟಾರ್ಗೆಟ್ ಇಟ್ಟದ್ದು 40 ಸಾವಿರ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು. ಆಮೇಲೆ 1997-98ರಲ್ಲಿ 40,633. ಇದರ ಅಚೀವ್‌ಮೆಂಟ್ ಎಷ್ಟು? ಅಂದರೆ ಅದು ಕ್ಯುಮುಲೇಟೀವ್ ಅಚೀವ್‌ಮೆಂಟ್ 1996-97ರಲ್ಲಿ 16,788. 40 ಸಾವಿರ ಟಾರ್ಗೆಟ್‌ನಲ್ಲಿ ನಿಮ್ಮ ಅಚೀವ್‌ಮೆಂಟ್ 16,788. 1997-98ರಲ್ಲಿ ನಿಮ್ಮ ಟಾರ್ಗೆಟ್ 40 ಸಾವಿರ ಇದ್ದರೆ ನಿಮ್ಮ ಅಚೀವ್‌ಮೆಂಟ್ 988. ಆಮೇಲೆ ಇನ್ನೂ ಪ್ರಾರಂಭ ಆಗದೇ ಇರತಕ್ಕಂಥವು 1996-97ಕ್ಕೆ 12,211 1997-98ಕ್ಕಂತೂ 34,542 ಅಂದರೆ ಬಡವರಿಗೆ ಮನೆ ಕೊಡುತ್ತೇವೆಂದು ಹೇಳಿ ಘೋಷಣೆ ಮಾಡಿಕೊಂಡು ಪಬ್ಲಿಸಿಟಿ ಮಾಡಿಕೊಂಡು ಇವತ್ತು ನಿಮ್ಮ ಅಚೀವ್‌ಮೆಂಟ್ ನೋಡಿದರೆ ಫಿಸಿಕಲ್ ಪ್ರೋಗ್ರೆಸ್ ಕೂಡ 42 ಪರ್ಸೆಂಟ್ ಮಾತ್ರ ಇದೆ. 1997-98ಕ್ಕೆ 2 ಪರ್ಸೆಂಟ್ ಇದೆ. ಅಂದರೆ ಯಾವ ರೀತಿಯಾಗಿ ನೀವು ಕೆಲಸ ಮಾಡುತ್ತಿದ್ದೀರಿ? ಆಶ್ರಯ ಯೋಜನೆಯ ಕೆಳಗಡೆ ನಾವು ಅಷ್ಟು ಮಾಡುತ್ತೇವೆ, ಇಷ್ಟು ಮಾಡುತ್ತೇವೆಂದು ಹೇಳಿದಿರಿ. ಎರಡು ವರ್ಷದ ನಿಮ್ಮ ಅಚೀವ್‌ಮೆಂಟ್ ಈ ವರ್ಷದ ಅಚೀವ್‌ಮೆಂಟ್ 2 ಪರ್ಸೆಂಟ್. ಹೋದ ವರ್ಷದ್ದು 42 ಪರ್ಸೆಂಟ್. ನೀವು ಎಲ್ಲಿದ್ದೀರಿ? ಯಾವ ಲೋಕದಲ್ಲಿದ್ದೀರಿ? ಏನು ಕೆಲಸ ಮಾಡುತ್ತಿದ್ದೀರಿ? ಸುಮ್ಮನೇ ಸಿಟ್ಟಿಗೆ ಬಂದು ಹೇಳಿಕೊಂಡು ಹೋಗುವುದಲ್ಲ. ಆ ಕೆಲಸವನ್ನು ಮಾಡತಕ್ಕದ್ದು, ಫಿಸಿಕಲ್ ಅಚೀವ್‌ಮೆಂಟ್ ಮಾಡತಕ್ಕದ್ದು. ನಿಮಗೆ ಜನ ಇವತ್ತು ಏನು ಹಣವನ್ನು ಒದಗಿಸಿಕೊಟ್ಟಿದ್ದಾರೆ, ಸಿಕ್ಕಂತಹ ಬಜೆಟ್ ಅನ್ನು ಖರ್ಚು ಮಾಡತಕ್ಕದ್ದು ನಿಮಗೆ ಇಲ್ಲ ಎಂದರೆ ನಿಮಗೆ ಎಲ್ಲಿ ಪುರುಸೊತ್ತು ಇದೆ? ಯಾವ ಕಡೆಗೆ ನಿಮ್ಮ ಗಮನ ಇದೆ? ನಾನು ನಿಜವಾಗಿ ಹೇಳಬೇಕಾಗುತ್ತದೆ. ಮನೆ ಕಟ್ಟುವುದರಲ್ಲಿ ನಿಮಗೆ ಆಸಕ್ತಿ ಇಲ್ಲ. ಪವರ್ ಜನರೇಷನ್‌ನಲ್ಲಿ ಆಸಕ್ತಿ ಇಲ್ಲ. ಮತ್ತು ಇರಿಗೇಷನ್‌ನಲ್ಲಿ ಆಸಕ್ತಿ ಇಲ್ಲ. ನಿಮಗೆ ಯಾವುದರಲ್ಲಿ ಆಸಕ್ತಿ ಇದೆ ಎಂದು ಹೇಳಿದರೆ ಬರೀ ಜಗಳ ಆಡುವುದರಲ್ಲಿ, ಕುರ್ಚಿ ಹೇಗೆ ಉಳಿಸಿಕೊಳ್ಳಬೇಕು, ಎನ್ನುವುದು ಒಂದರಲ್ಲಿ ಆಸಕ್ತಿ ಬಿಟ್ಟರೆ ಬೇರೆ ಆಸಕ್ತಿ ಇಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟ ಮಾಡುತ್ತೇನೆ. ಈ ಅಂಕಿ ಅಂಶಗಳೇ ಇವತ್ತಿನ ದಿನ ಸಿದ್ಧ

ಮಾಡಿದೆ. ಇವತ್ತು ನಾವು ಏನನ್ನಾದರೂ ಹೇಳಿದರೆ ಎಲ್ಲವನ್ನೂ ರಾಜಕೀಯವಾಗಿ ನೋಡುತ್ತೀರಿ ಎಂದು ಹೇಳುತ್ತೀರಿ. ಆದರೆ ಇದು ನಾನಲ್ಲ ಹೇಳಿದ್ದು. ನೀವೇ ಸರ್ಕಾರದವರೇ, ಅಂಕಿಅಂಶಗಳನ್ನು ನೀಡಿದ್ದು, ಇಲಾಖೆಯಲ್ಲಿ ಪ್ರೊವೈಡ್ ಮಾಡಿದಂತಹ ಅಂಕಿಅಂಶಗಳು. ಇವತ್ತು ನಾವೇನಾದರೂ ಹುಟ್ಟಿಸಿಕೊಂಡು ಹೇಳುತ್ತಾ ಇಲ್ಲ. ಇದು ಈ ರೀತಿ ಆಗಿದೆ. ಇವತ್ತು 1996-97ಕ್ಕೆ ಹಣ ಖರ್ಚು ಮಾಡಿದ್ದು 39 ಕೋಟಿ ರೂಪಾಯಿಗಳು. 1997-98ಕ್ಕೆ ಬರೇ ಆರು ಕೋಟಿ ರೂಪಾಯಿಗಳು. ಆರು ಕೋಟಿ ರೂಪಾಯಿಯನ್ನು ಇಲ್ಲಿಯವರೆಗೆ ಖರ್ಚು ಮಾಡಿದ್ದೀರಿ. ಆಮೇಲೆ ಸೈಟ್‌ಗಳ ವಿಚಾರ. ಯಾರಿಗೆ ಸೈಟ್ ಇಲ್ಲ, ಸೈಟ್ ಕೊಡುತ್ತೇವೆ ಮತ್ತು ಬಡವರಿಗೆ ಅನುಕೂಲ ಮಾಡಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. 1997-98ರಲ್ಲಿ ರೂರಲ್ ಏರಿಯಾಕ್ಕೆ ನಿಮ್ಮ ಟಾರ್ಗೆಟ್ ಇರತಕ್ಕದ್ದು ಒಂದು ಲಕ್ಷ ನೀವು ಸಾಧನೆ ಮಾಡಿದ್ದು 50 ಸಾವಿರ. ಟಾರ್ಗೆಟ್ ಇರತಕ್ಕದ್ದು ಒಂದು ಲಕ್ಷ ನೀವು ಸಾಧನೆ ಮಾಡಿದ್ದು 22,241. ಅರ್ಬನ್ ಏರಿಯಾಗೆ ಸೈಟ್ ಕೊಡತಕ್ಕ ನಿಮ್ಮ ಟಾರ್ಗೆಟ್ ಇಟ್ಟುಕೊಂಡಿದ್ದು 50 ಸಾವಿರ. ನೀವು ಕೊಟ್ಟಿದ್ದು 3,398. ಅಂದರೆ ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ರೂರಲ್ ಏರಿಯಾದಲ್ಲಿ 22 ಪರ್ಸೆಂಟ್, ಅರ್ಬನ್ ಏರಿಯಾದಲ್ಲಿ 7 ಪರ್ಸೆಂಟ್ ಆಗುತ್ತದೆ. ಹೀಗೆ ಇವತ್ತಿನ ದಿನ ಇಷ್ಟೊಂದು ಮೋಸವನ್ನು ಬಡ ಜನರಿಗೆ ಮಾಡಿದರೆ ಜನ ನಿಮಗೆ ಶಾಪ ಕೊಡದೇ ಇರುತ್ತಾರೆಯೇ? ಇದು ಫ್ಯಾಕ್ಟ್ಸ್. ನೀವು ಹೇಳಿಕೊಳ್ಳುವುದೇ ಬೇರೆ, ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್‌ನ ಪುಸ್ತಕದಲ್ಲಿ ತರುವುದೇ ಬೇರೆ. ಪತ್ರಿಕೆಗಳಲ್ಲಿ ಹೇಳುವುದೇ ಬೇರೆ. ಆದರೆ ಈ ಅಂಕಿಅಂಶಗಳನ್ನು ಡಿನೈ ಮಾಡುವುದಕ್ಕೆ ಆಗುವುದಿಲ್ಲ. ನಾವೇನು ಕೊಟ್ಟಿದ್ದೇವೆ ಅದು ಪುಸ್ತಕದಲ್ಲಿದೆ ಎಂದು ಹೇಳಿದ್ದೀರಿ. ನೀವು ಪುಸ್ತಕದಲ್ಲಿ ಏನು ಇದೆ ಎಂದು ತಿಳಿದುಕೊಂಡು ಅಷ್ಟಾದರೂ ನಾವು ಸ್ವಲ್ಪ ಓದಿಕೊಂಡು ನೀವು ಪಬ್ಲಿಸಿಟಿ ಕೊಟ್ಟಿದ್ದರೆ ಜನ ನಂಬುತ್ತಿದ್ದರು. ಜನ ನಂಬಲಿಲ್ಲ. ಏಕೆಂದರೆ ನಿಮ್ಮ ಹೇಳಿಕೆಯೇ ಬೇರೆ, ನಿಮ್ಮ ಅಚೀವ್‌ಮೆಂಟೇ ಬೇರೆ. ಇವತ್ತು ಅರ್ಬನ್ ಏರಿಯಾದಲ್ಲಿ 7 ಪರ್ಸೆಂಟ್ ಅಂದರೆ ಎಷ್ಟರಮಟ್ಟಿಗೆ ನೀವು ಗಮನಹರಿಸಿದ್ದೀರಿ ಅಥವಾ ಹೌಸಿಂಗ್ ಮಿನಿಸ್ಟರ್ ಎಷ್ಟರಮಟ್ಟಿಗೆ ತಮ್ಮ ಗಮನ ಆ ಕಡೆಗೆ ಹರಿಸಿದ್ದಾರೆ ಎನ್ನತಕ್ಕದ್ದು ಒಂದು ಉದಾಹರಣೆ ಸಾಕು. ಹೀಗೆ ಒಂದಲ್ಲಾ ಒಂದು ರೀತಿ ಅನೇಕ ಇಲಾಖೆಗಳಲ್ಲಿ ಇವತ್ತಿನ ದಿವಸ ನಾವು ಹಿಂದೆ ಬಿದ್ದಿದ್ದೇವೆ. ಅದನ್ನು ನಾವು ಗಮನದಲ್ಲಿ ತೆಗೆದುಕೊಂಡಿಲ್ಲ. ಅದಕ್ಕೆ ನಾವು ಕೆಲವು ಉದಾಹರಣೆಗಳನ್ನು ನಿಮ್ಮ ಮುಂದೆ ಇಟ್ಟು, ಬಡವರಿಗೆ ಬೇಕಾದಂತಹ ಕೆಲಸ, ಅದು ಮನೆ ಕಟ್ಟುವ ಕಾರ್ಯಕ್ರಮ ಇರಲಿ, ಸೈಟ್ ಕೊಡತಕ್ಕದ್ದು ಇರಲಿ, ಇರಿಗೇಷನ್ ಇರಲಿ, ಎಲೆಕ್ಟ್ರಿಸಿಟಿ ಇರಲಿ ಈ ಮಾತನ್ನು ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಆದರೆ ಉಳಿದ ಇಲಾಖೆಗಳಲ್ಲಿ ಕೂಡ ಕೆಲವು ಇವೆ. ಆ ಇಲಾಖೆಗಳಲ್ಲಿ ಕೂಡ ಕೆಲವು ನ್ಯೂನತೆಗಳು ಇವೆ. ಅದನ್ನು ನಾನು ಪುನಃ ಹೇಳಿಕೊಂಡು ಹೋದರೆ ಸಾಕಷ್ಟು ಸಮಯ ಬೇಕಾಗುತ್ತದೆ. ಬಜೆಟ್ ಸೆಷನ್‌ನಲ್ಲಿ ಪ್ರಸ್ತಾಪ ಮಾಡುತ್ತೇನೆ. ಆದರೆ ಇವತ್ತು ನೀವು ಯಾವ ಧ್ಯೇಯ ಧೋರಣೆಗಳನ್ನು ಮತ್ತು ಯಾವ ಗುರಿಯನ್ನು

ರಾಜ್ಯಪಾಲರ ಭಾಷಣದಲ್ಲಿ ಮೂಡಿಸಿದ್ದೀರಿ; ಆ ಗುರಿಯನ್ನು ನೀವು ಮುಟ್ಟಲಿಲ್ಲ, ತಲುಪಲಿಲ್ಲ. ರಾಜಕೀಯವಾಗಿಯೂ ತಲುಪಲಿಲ್ಲ. ಮತ್ತು ಆರ್ಥಿಕ ಗುರಿಯನ್ನು ಇಟ್ಟುಕೊಂಡು ಸಾಮಾಜಿಕ ಸುಧಾರಣೆ ಮಾಡಬೇಕು ಎಂದು ಸಮಾಜದಲ್ಲಿರತಕ್ಕ ಬಡ ಜನರನ್ನು ಮೇಲಕ್ಕೆ ಎತ್ತಬೇಕು ಎನ್ನತಕ್ಕ ಗುರಿ ಏನು ಇತ್ತು. ಆ ಗುರಿಯನ್ನು ಮುಟ್ಟಲಿಲ್ಲ. ಆ ಗುರಿಯನ್ನು ಮುಟ್ಟಲಿಲ್ಲ ಎಂದರೆ ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕ ಪ್ರಗತಿಯಲ್ಲೂ ಕೂಡ ನೀವು ವಿಫಲರಾಗಿದ್ದೀರಿ. ಮತ್ತೆ ಯಾವುದರಲ್ಲಿ ನೀವು ಸಾಧನೆಯನ್ನು ಮಾಡಿದ್ದೀರಿ? ನೀವು ಮಾಡಿರುವ ಒಂದೇ ಒಂದು ಸಾಧನೆ ಎಂದರೆ ಹೆದರಿಸಿಕೊಂಡು ಕುರ್ಚಿಯನ್ನು ಮಾತ್ರ ಕಾಪಾಡಿಕೊಂಡಿದ್ದೀರಿ, ಅದರ ಪ್ರಯತ್ನ ನಡೆದಿದೆ. ಅಲ್ಲಿ ಸುಮಾರು ವರ್ಷಗಳಿಂದ ಬಿ.ಜೆ.ಪಿ.ಲೋಕಶಕ್ತಿಗೆ ಬೆಂಬಲವನ್ನು ಕೊಡುತ್ತಿದ್ದಾರೆ. ನಾಳೆ ಸರ್ಕಾರ ರಚನೆ ಆಗಬೇಕು ಎಂದು ಈ ಪ್ಲಾನ್ ನಡೆದಿದೆ. ಈಗ ಎರಡು ದಾರಿ ಇದೆ, ಒಂದು ಶ್ರೀಮಾನ್ ಜೆ.ಹೆಚ್.ಪಟೇಲ್‌ರವರು ಹೆಗ್ಗಡೆಯವರಿಗೆ ಹೊಂದಿಕೊಂಡರೆ ಅವರನ್ನು ಅಲ್ಲಿ ಕೆಲವು ದಿವಸ ಖಾಯಂ ಆಗಿ ಕೂರಿಸಿ ಮುಂದೆ ಏನು ಮಾಡಬೇಕು ಎನ್ನತಕ್ಕದ್ದು ಒಂದು ದಾರಿ. ಇನ್ನೊಂದು ಏನು ಎಂದರೆ, ಅವರನ್ನು ಕೂರಿಸುವುದನ್ನು ನಾವು ಒಪ್ಪುವುದಿಲ್ಲ, ಏಕೆಂದರೆ ನಮ್ಮ ಕಡೆಯಿಂದ ಪ್ರೀತಿವಿಶ್ವಾಸ ಬೆಳೆದ ಮೇಲೆ, ನಮ್ಮ ಜೊತೆ ನಿಮ್ಮ ಸಹವಾಸ ಆದ ಮೇಲೆ ಹೊಸದಾಗೇ ಯಾರಾದರೂ ಬರಬೇಕು, ಹಳಬರನ್ನೇ ಕೂರಿಸುವುದು ಬೇಡ ಎಂದು ಇವರ ನ್ಯಾಯ. ನಾವೇ ಮಾಡುತ್ತೇವೆ, ಎಂದು ಇವರ ವಾದ. ಆದರೆ, ಅದು ಆಗಬೇಕಾದರೆ ಸಂಖ್ಯಾಬಲ ಬೇಕು, ಆ ಸಂಖ್ಯಾಬಲ ಅವರಿಗೆ ಸಿಗುತ್ತಾ ಇಲ್ಲ. ಅದಕ್ಕಾಗಿ ಈಗ ಅವರು ಏನುಮಾಡುತ್ತಿದ್ದಾರೆ ಎಂದರೆ ರಾಮಕೃಷ್ಣ ಹೆಗ್ಗಡೆಯವರೇನಾದರೂ ಇಲ್ಲಿಗೆ ಬಂದರೆ ಸಂಖ್ಯಾಬಲ ಬರುತ್ತದೆ ಎಂದು ಅವರನ್ನು ಇಲ್ಲಿಗೆ ಕರೆತರುವ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ರಾಮಕೃಷ್ಣ ಹೆಗ್ಗಡೆಯವರು ಏನು ಹೇಳುತ್ತಿದ್ದಾರೆಂದರೆ, ನೀವು ಅವರ ಸ್ಟೇಟ್‌ಮೆಂಟ್‌ಗಳನ್ನು ನೋಡಿರಬಹುದು, ''ನನಗೆ ಸೆಂಟ್ರಲ್‌ನಲ್ಲಿ ಸೇರಲಿಕ್ಕೆ ಇಷ್ಟ ಇಲ್ಲ, ಅದರ ಅವಶ್ಯಕತೆ ನನಗಿಲ್ಲ, ಇಚ್ಛೆ ನನಗಿಲ್ಲ ಆದುದರಿಂದ ನಾನು ಸೆಂಟ್ರಲ್‌ಗೆ ಸೇರುವುದಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ ಅವರ ಕಣ್ಣು ಈಗ ಕರ್ನಾಟಕದ ಮೇಲೆ ಇದೆ. ಅವರ ಕಣ್ಣು ಕರ್ನಾಟಕದ ಮೇಲೆ ಇರಬೇಕು ಎಂದರೆ ಇಲ್ಲಿ ಲೋಕಶಕ್ತಿಗೆ 60-70 ಜನ ಸದಸ್ಯರನ್ನು ಜೋಡಿಸತಕ್ಕ ಕೆಲಸವನ್ನು ಇಲ್ಲಿ ದೇಶಪಾಂಡೆ ಮತ್ತು ಅವರ ಮಿತ್ರರು ಮಾಡಬೇಕಾಗುತ್ತದೆ. ಇದಕ್ಕೆ ಪ್ರೋತ್ಸಾಹ ನೀಡತಕ್ಕ ಕೆಲಸವನ್ನು ನಮ್ಮ ಯಡಿಯೂರಪ್ಪನವರು ಮಾಡುತ್ತಿದ್ದಾರೆ. ಅಂದರೆ ಅದಕ್ಕೆ ಎಷ್ಟು ನೀರು, ಗೊಬ್ಬರ ಮತ್ತು ಎಣ್ಣೆಯನ್ನು ಹಾಕಬೇಕೋ ಅದನ್ನು ಹಾಕುತ್ತಿದ್ದಾರೆ. ಆದರೂ ಕೂಡ ಅವರ ಸಂಖ್ಯಾಬಲ ಎಲ್ಲಿಗೆ ಮುಟ್ಟಬೇಕೋ ಅಲ್ಲಿಗೆ ಮುಟ್ಟುತ್ತಾ ಇಲ್ಲ. ಅಧಿಕಾರಕ್ಕೆ ನಾವು ಬರಬೇಕು ಎಂದು ಆಶೆ ಇವರಿಗಿದ್ದರೆ, ನೀವು ಹೇಗೆ ಬರುತ್ತೀರಾ ನಾವು ನೋಡುತ್ತೇವೆ ಎಂದು ಅವರು ಕುಳಿತಿದ್ದಾರೆ. ಹಾಗೆ ಇವರಿಬ್ಬರ ಜಗಳದಲ್ಲಿ ಇಡೀ ರಾಜ್ಯ ಹಾಳಾಗಿ ಹೋಯಿತು. ಒಂದು ಕೂಡ ಸಾಧನೆ ಮಾಡಲಿಕ್ಕೆ ಆಗಲಿಲ್ಲ. ಅದಕ್ಕೆ ನೀವು ಇಬ್ಬರೂ

ಸಹ ಕಾರಣಕರ್ತರು. ಮತ್ತು ನಿಮ್ಮ ಇಬ್ಬರ ಬೆಂಬಲದಿಂದ ಏನು ಕೆಲವು ಅಲ್ಪಸ್ವಲ್ಪ ಶಕ್ತಿಗಳು ಸ್ವಲ್ಪ ಉಸಿರಾಡುತ್ತಿದ್ದವು, ಎಂದರೆ ಯಾವ ಕೆಲವು ಪಕ್ಷಗಳು ಈ ದೇಶಕ್ಕೆ ಬೇಕಾಗಿರಲಿಲ್ಲವೋ, ಯಾವ ಪಕ್ಷಗಳು ಸಮಾಜಕ್ಕೆ ಬೇಕಾಗಿರಲಿಲ್ಲವೋ, ಅವರ ಹೆಸರು ಹೇಳಬೇಕಾ? ಅರೆ, ನಾನು ನಿಮ್ಮ ಹೆಸರನ್ನೇ ಹೇಳಲಿಲ್ಲ, ಅಥವಾ ನಿಮ್ಮ ಪಾರ್ಟಿ ಹೆಸರನ್ನು ಹೇಳಲಿಲ್ಲ, ಮಾತಿನ ಮಧ್ಯದಲ್ಲಿ ಕೋಮುವಾದಿ ಪಕ್ಷ ಎಂದರೆ ನೀವೇ ಎಂದು ನೀವು ಏಕೆ ತಿಳಿದುಕೊಳ್ಳಬೇಕು? ಏಕೆ ಮುಸ್ಲಿಂ ಲೀಗ್ ಆಗಲ್ಲವಾ? ಮತ್ತೊಂದು ಆಗುವುದಿಲ್ಲವಾ? ಅವರಿಗೆ ನಾವು ಶಬ್ದಗಳಲ್ಲಿ ಏನಾದರೂ ಹೇಳಿದರೆ ಅದು ನಮಗೆ ಅನ್ವಯಿಸುತ್ತದೆ ಎಂದು ಎದ್ದು ನಿಲ್ಲುತ್ತಾರೆ

ಶ್ರೀ ಕೆ.ಎಸ್.ಈಶ್ವರಪ್ಪ: ಆ ರೀತಿ ಅಲ್ಪಸ್ವಲ್ಪ ಶಕ್ತಿ ನಮಗಿಲ್ಲ. ನಾವೆಲ್ಲಾ ಒಂದಾಗಿದ್ದು ಅವರಿಗೆ ಒಂದು ತರಹ ಕುತ್ತಿಗೆ ಹಿಚುಕಿದ ಹಾಗೆ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ನಾನು ಹೇಳಿದ್ದು, ಇಲ್ಲಿ ಮೂರು ವರ್ಷ ಆಡಳಿತ ನಡೆಸಿ, ಭಾಷಣ ಮಾಡುವಾಗ ಕಾಂಗ್ರೆಸ್ ಪಕ್ಷ 50 ವರ್ಷಗಳಲ್ಲಿ ಏನು ಮಾಡಿದೆ ಎಂದು ನೀವು ಕೇಳುತ್ತೀರಲ್ಲಾ, ಈ 50 ವರ್ಷಗಳಲ್ಲಿ ನಮ್ಮ ಪಕ್ಷ ಏನು ಮಾಡಿದೆ ಎನ್ನತಕ್ಕ ಮಾತನ್ನು ಹೇಳಬೇಕಾದರೆ, ಅದಕ್ಕೆ ಮೊದಲು ಹೆಗ್ಗಡೆಯವರು 25 ವರ್ಷ ಕಾಂಗ್ರೆಸ್ಸಿನಲ್ಲಿ ಇದ್ದರಲ್ಲ, ಅವರನ್ನು ಕೇಳಿ, ಅವರು ಏನು ಮಾಡಿದ್ದಾರೆ ಎಂದು, 7 ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಇದ್ದರಲ್ಲಾ ಆಗ ಏನು ಮಾಡಿದ್ದಾರೆ ಎಂದು ಕೇಳಿ.

(ಗೊಂದಲ)

ಈಗ ಒಬ್ಬರಿಗೊಬ್ಬರು ಹೊಂದಾಣಿಕೆ ಮಾಡಿಕೊಂಡು ಪ್ರೀತಿವಿಶ್ವಾಸಗಳಿಂದ ಒಬ್ಬರನ್ನೊಬ್ಬರು ಹೊಗಳಿಕೊಂಡು ಅಡ್ಡಾಡುತ್ತಿದ್ದೀರಲ್ಲಾ ನಾಳೆ ನೀವು ಕೂಡ ಈ ದೇಶದ ಹಾಗೂ ರಾಜ್ಯದ ಜನತೆಗೆ ಎಕ್ಸ್‌ಪ್ಲನೇಷನ್ ಕೊಡಬೇಕಾಗುತ್ತದೆ.

ಶ್ರೀ ಕೆ.ಎಸ್.ಈಶ್ವಸರಪ್ಪ: ನಿಮ್ಮ ಪಕ್ಷದ ನಾಯಕರಾದ ಧರ್ಮಸಿಂಗ್‌ರವರೇ ಹೆಗ್ಗಡೆಯವರ ಜೊತೆ ಮಾತುಕತೆ ಮುಗಿದಿದೆ ಎಂದು ಹೇಳಿದರು.

(ಗೊಂದಲ)

ಅವರು ನಿಮ್ಮ ಕೈ ಏಕೆ ಬಿಟ್ಟರು, ಏನಾಯಿತು? ನಿಮ್ಮ ಸಹವಾಸವನ್ನು ಅವರು ಏಕೆ ಬಿಟ್ಟರು. ನಿಮಗೂ ಅವರಿಗೂ ಹೊಂದಾಣಿಕೆ ಇದ್ದಾಗ ಹೆಗ್ಗಡೆಯವರು ಬೇಕಾಗಿತ್ತು, ಈಗ ನಿಮಗೆ ಹಾಕಬೇಕಾದ ಹಾರವನ್ನು ನಮಗೆ ಹಾಕಿದರಲ್ಲಾ ಅದು ನಿಮಗೆ ಸಮಸ್ಯೆ ಆಯಿತು.

ಶ್ರೀ ಧರ್ಮಸಿಂಗ್: ನಿಮ್ಮ ಹೊಂದಾಣಿಕೆ ಏನು ಎಂದು ಕೆಲವು ದಿವಸ ಆದ ಮೇಲೆ ಗೊತ್ತಾಗುತ್ತದೆ.

(ಗೊಂದಲ)

ಮೊದಲನೆಯದಾಗಿ ಅವರು ನಮ್ಮ ಜೊತೆಯಲ್ಲಿ ಅವರು ಬಿ.ಜೆ.ಪಿ.ಗೆ ಹೋಗುತ್ತಾರಾ ಅಥವಾ ಕಾಂಗ್ರೆಸ್ಸಿಗೆ ಬರುತ್ತಾರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ರಾಜ್ಯದಲ್ಲಿ ಲೋಕಶಕ್ತಿ ಮತ್ತು ಬಿ.ಜೆ.ಪಿ. ಹೊಂದಾಣಿಕೆಗೆ ದೇವದುರ್ಲಭವಾದಂಥ ಒಂದು ಸ್ವಾಗತ ಸಿಕ್ಕಿದೆ. ಈ ಹೊಂದಾಣಿಕೆ ಬಹಳ ವರ್ಷಗಳ ಕಾಲ ಮುಂದುವರೆಯುವುದಿದೆ. ಮತ್ತು ಈ ಕಾಂಗ್ರೆಸ್ ಅನ್ನು ನೆಲಕಚ್ಚಿಸುವ ಒಂದು ಶಪಥ ಕೂಡ ಇದೆ. ಪಟೇಲರು ಮತ್ತು ಇನ್ನಿತರರು ನಮ್ಮೊಂದಿಗೆ ಹೋರಾಟ ಮಾಡಿದಂಥವರು, 50 ವರ್ಷಗಳಲ್ಲಿ ಈ ದೇಶವನ್ನು ಸರ್ವನಾಶ ಮಾಡಿ, ಬದುಕಲಿಕ್ಕೆ ಬೇಕಾದಂಥ ಕನಿಷ್ಟ ಸೌಲಭ್ಯಗಳು ಸಿಗದಂಥ ಈ ದೇಶವನ್ನು ಸಾಲಗಾರ ದೇಶವನ್ನಾಗಿ ಮಾಡಿದ ಈ ಕಾಂಗ್ರೆಸ್ಸನ್ನು ಬೇರುಸಹಿತ ಕಿತ್ತುಹಾಕುವಂಥ ಒಂದು ತೀರ್ಮಾನವನ್ನು ಇವತ್ತು ನಾವು, ನೀವು ಮಾಡಬೇಕಾಗಿದೆ. ಅದರಿಂದ ಜನಕ್ಕೂ ಕ್ಷೇಮ ಮತ್ತು ಈ ದೇಶಕ್ಕೂ ಕ್ಷೇಮ. ಆ ಕಾಲ ಬಹಳ ಹತ್ತಿರ ಬರುತ್ತಿದೆ. ಜನರ ತೀರ್ಮಾನಕ್ಕೆ ಶ್ರೀಮಾನ್ ಜೆ.ಹೆಚ್.ಪಟೇಲ್‌ರವರು ಈಗಲಾದರೂ ಸ್ಪಂಧಿಸಿ, ಸುಮ್ಮನೆ ರಾಜೀನಾಮೆಯನ್ನು ನೀಡಿ, ಒಂದು ಹೊಸದಾಗಿ ಜನರ ಮ್ಯಾನ್‌ಡೇಟ್ ಪಡೆದು ಒಂದು ಹೊಸ ಆಡಳಿತವನ್ನು ತರುವಂಥ ಕೆಲಸ ಮಾಡಿ. ಆಗ ಇವರನ್ನು ಪೂರ್ಣ ಮುಗಿಸಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಎಷ್ಟು ದಿವಸ ಹೇಳಿಕೊಳ್ಳುತ್ತಾರೋ ಹೇಳಿಕೊಳ್ಳಲಿ. ನಮಗೆ ಗೊತ್ತಿದೆ. ಇವರ ಪಕ್ಷ ಹಿಂದೆ ಪಾರ್ಲಿಮೆಂಟ್ ಚುನಾವಣೆಯಲ್ಲಿ 150-160 ಆರಿಸಿ ಬಂದಂಥ ಕಡೆ ಬರಿ ಎರಡೇ ಸೀಟು ಆರಿಸಿ ಬಂದಿದ್ದರು. ಹಿಂದೆ ನೂರಾರು ಆರಿಸಿ ಬಂದಂಥ ಕಡೆ ಇಬ್ಬರೂ ಆರಿಸಿ ಬಂದದ್ದು ಉಂಟು. ಆದರೆ ಅದನ್ನು ನೆನಪಿನಲ್ಲಿ ಇಟ್ಟುಕೊಳಲ್ಲಿ ಇವರು. ಆದರೆ ಕಾಂಗ್ರೆಸ್ ಪಕ್ಷವನ್ನು ನೆಲಕಚ್ಚಿಸುವ ಮೊದಲು ಅದರ ಇತಿಹಾಸ ಹೇಗೆ ಇದೆ ಎಂದು ನೋಡಿ. ನಾವು ಕೂಡ 3-4 ಚುನಾವಣೆಗಳಲ್ಲಿ 1994ರ ಚುನಾವಣೆಯನ್ನು ತೆಗೆದುಕೊಂಡು ಕೂಡ ನಾವು ಹೆಚ್ಚಿನ ಜನ ಬೆಂಬಲವನ್ನು ಪಡೆದುಕೊಂಡಿದ್ದೇವೆ. ಕಡಿಮೆ ಏನೂ ಇಲ್ಲ. ಇವರು ಇವತ್ತು ಆಕಸ್ಮಿಕವಾಗಿ ಹೆಚ್ಚಾಗಿ ಆರಿಸಿ ಬಂದು ಹೇಳಿಕೊಳ್ಳಬಹುದು, ಹೇಳಿಕೊಳ್ಳಲಿ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ನಾನು ಕೇಳುತ್ತಾ ಇದ್ದೆ. ಆದರೆ ಹೆಗ್ಗಡೆಯವರ ಹೆಸರನ್ನು ಇಲ್ಲಿ ಏಕೆ ಪ್ರಸ್ತಾಪ ಮಾಡಿದರು ಎಂದು ಗೊತ್ತಾಗುತ್ತಿಲ್ಲ? ಇಲ್ಲಿಯವರೆಗೆ ಹೆಗ್ಗಡೆಯವರು ನಮಗೆ ಬೆಂಬಲ ಕೊಡಿ, ನಾವು ಇಲ್ಲಿ ಬರುತ್ತೇವೆ ಎಂದು ಮಾತುಕತೆ ನಡೆಸಿಲ್ಲ, ನಮಗೂ ಸಹ ಏನೂ ಹೇಳಿಲ್ಲ. ಹಾಗೇನಾದರೂ ಇದ್ದರೆ ಅವರೇ ಹೇಳಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ನಮಗೆ ಆಗುತ್ತಿರುವ ನೋವು ಏನೆಂದರೆ ಒಬ್ಬ ವ್ಯಕ್ತಿ ತನ್ನ ಜೀವನದ 45 ವರ್ಷಗಳನ್ನು ರಾಜಕೀಯ ಜೀವನದಲ್ಲಿ ಸೆಕ್ಯೂಲರಿಸಮ್ ಬಗ್ಗೆ ಸಾಕಷ್ಟು ಪ್ರತಿಪಾದನೆ ಮಾಡಿ, ಒತ್ತಿ ಹೇಳಿ, ಅದರ ಬಗ್ಗೆ ಹೋರಾಟ ನಡೆಸಿ, ಅದೇ ತತ್ವದ ಮೇಲೆ ನಮಗೆ ನಂಬಿಕೆ ಇದೆ ಎಂದು ಹೇಳಿಕೊಂಡು ಒಮ್ಮಿಂದೊಮ್ಮೆಗೆ ಬದಲಾವಣೆ ಹೊಂದಿ ಬಿ.ಜೆ.ಪಿ. ಉಡಿಯೊಳಗೆ ಬಿದ್ದರಲ್ಲಾ ಅದೇ ನಮಗೆ ದುಃಖ. ಇಂಡಿವಿಜುಯಲ್ ಆಗಿ ಅವರವರ ಇಚ್ಛೆ ಪ್ರಕಾರ ನಡೆದುಕೊಳ್ಳಬಹುದು, ಆದರೆ ಅವರು ಇಲ್ಲಿವರೆಗೆ ನಡೆದುಕೊಂಡು ಬಂದಂತಹ ದಾರಿಯನ್ನು ಎಡವಿದರಲ್ಲಾ, ದಾರಿ ತಪ್ಪಿದರಲ್ಲಾ, ಬೇರೆ ಹೆಜ್ಜೆಯನ್ನು ಇಟ್ಟರಲ್ಲಾ ಎಂದು ನೋವು ನಮಗೆ. ಬಾಕಿ ನಿಮ್ಮ ಅಸ್ತಿತ್ವಕೋಸ್ಕರ ನೀವು ಏನಾದರೂ ಮಾಡಿ. ಬೇಕಾದಷ್ಟು ಅಲೆಯೆನ್ಸ್ ಮಾಡಿ, ಪಂಚಾಯತ್‌ಗಳನ್ನು ಲಾಂಚ್ ಮಾಡಿ, ನಾವು ಇವತ್ತು ಎದುರಿಸಲಿಕ್ಕೆ ನಿಂತಿದ್ದೇವೆ. ಈ ದೇಶಕ್ಕಾಗಿ ಹೋರಾಟ ಮಾಡಿದಂಥ ಜನ ನಮ್ಮಲ್ಲಿ ಇದ್ದಾರೆ. ನಮ್ಮಲ್ಲಿ ದೇಶಕ್ಕಾಗಿ ರಕ್ತ, ಜೀವ ಕೊಟ್ಟಂತಹ ಜನ ನಮ್ಮಲ್ಲಿದ್ದಾರೆ. ಇವತ್ತು ದೇಶಕ್ಕಾಗಿ ಹೋರಾಟ ಮಾಡದೆ, ಜೀವ ಕೊಡದೆ ರಕ್ತ ಸುರಿಸದೇ ಇರುವವರೇ ಇವತ್ತು ಅಧಿಕಾರ ನಡೆಸುತ್ತೇವೆ ಎಂದು ಹೋದರೆ ಅವರಿಗೆ ಇಷ್ಟು ಆಶೆ ಇರಬೇಕಾದರೆ ದೇಶಕ್ಕಾಗಿ ಹೋರಾಡಿದಂಥ ನಮಗೆ ದೇಶ ಉಳಿಸಬೇಕು ಎನ್ನುವ ಆಶೆ ಇಲ್ಲವೇ? ಯಾರು ಈ ಸಂವಿಧಾನವನ್ನು ತಯಾರು ಮಾಡಿದ್ದಾರೆ, ತಯಾರು ಮಾಡಲಿಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ, ಅವರಿಗೆ ಅದನ್ನು ಉಳಿಸಬೇಕೆನ್ನುವ ಆಸೆ ಇಲ್ಲವೇ? ನಮಗೂ ಇದೆ. ಆದರೆ ಅಂತಹ ಮನುಷ್ಯ ಕೆಟ್ಟು ಹೋದರಲ್ಲಾ ಎಂದು ವ್ಯಥೆಯೇ ಹೊರತು ಮತ್ತೇನು ಇಲ್ಲ. ಅವರವರ ಸರ್‌ವೈವಲ್‌ಗೋಸ್ಕರ ಏನು ಬೇಕಾದರೂ ಮಾಡಿಕೊಳ್ಳಲಿ, ಇದು ಅವರಿಗೆ ಬಿಟ್ಟಿದ್ದು, ಅದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ರಾಮಕೃಷ್ಣ ಹೆಗಡೆಯವರು ಬಿ.ಜೆ.ಪಿ. ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದುದು ನಿಜ. ಅವರು ಕಾಂಗ್ರೆಸ್ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಆದರೆ ಖರ್ಗೆಯವರು ಅದನ್ನು ಮರೆತಿದ್ದಾರೆ. ಬಿ.ಜೆ.ಪಿ. ಅಸ್ಪೃಶ್ಯವಲ್ಲ. ನೀವು ಮುಸ್ಲಿಂ ಲೀಗ್ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಸಂಸಾರ ಮಾಡಲು ಪ್ರಾರಂಭ ಮಾಡಿದ್ದೀರಿ, ನಾವು ಬಿ.ಜೆ.ಪಿ. ಜೊತೆ ಸಂಸಾರ ಮಾಡಲು ಏನು ತೊಂದರೆ ಇದೆ? ಅವರ ರಾಷ್ಟ್ರಭಕ್ತಿ ಕಡಿಮೆಯೇನೂ ಇಲ್ಲ. ಇಲ್ಲಿ ಕುಳಿತಿರುವ ಬಿ.ಜೆ.ಪಿ. ಸದಸ್ಯರ

ರಾಷ್ಟ್ರ ಭಕ್ತಿ, ರಾಷ್ಟ್ರಾಭಿಮಾನ ಇಲ್ಲಿರುವ ಬೇರೆ ಯಾವ ಸದಸ್ಯರಿಗಿಂತ ಕಡಿಮೆ ಏನೂ ಇಲ್ಲ. ಅವರು ರಾಷ್ಟ್ರದ್ರೋಹಿಗಳೇನಲ್ಲ. ಹಾಗಾಗಿ ಇವತ್ತು ರಾಷ್ಟ್ರದ ಹಿತದೃಷ್ಟಿಯಿಂದ ರಾಮಕೃಷ್ಣ ಹೆಗಡೆಯವರು ಹೋಗಿದ್ದಾರೆ. ಅವರು ಅಧಿಕಾರದ ಆಸೆಯಿಂದ ಹೋಗಿಲ್ಲ. ನಮಗೆ ಅಧಿಕಾರ ಸಿಗಬೇಕು ಎಂದು ಹೋಗಿಲ್ಲ. ಹಾಗಾಗಿ ಇವತ್ತು ರಾಮಕೃಷ್ಣಹೆಗಡೆಯವರು ಅಲ್ಲಿಗೆ ಹೋಗಿದ್ದರೂ ಸಹ ಅವರು ರಾಷ್ಟ್ರದ ಹಿತದೃಷ್ಟಿಯಿಂದ ಹೋಗಿದ್ದಾರೆಯೇ ವಿನಃ ಬೇರೆ ಯಾವುದಕ್ಕೂ ಅಲ್ಲ. ಖರ್ಗೆ ಸಾಹೇಬರು ಕಾಂಗ್ರೆಸ್ ಸಂಸ್ಥೆಯ ಬಗ್ಗೆ ಹೇಳಿದರು. ನಾನೂ ಒಂದು ಕಾಲದಲ್ಲಿ ಕಾಂಗ್ರೆಸ್‌ನಲ್ಲಿದ್ದೆ. ಆ ಕಾಂಗ್ರೆಸ್ ಇವತ್ತು ಉಳಿದಿದೆಯೇನು? ಈ ಪ್ರಶ್ನೆಗೆ ಅವರು ಉತ್ತರ ಕೊಡಬೇಕು. ಕೇಸರಿಯವರು ಕಾಂಗ್ರೆಸ್‌ಗಾಗಿ ರಾತ್ರಿ ಹಗಲು ದುಡಿದರು. ಅವರನ್ನು ಈಗ ಮನೆಗೆ ಕಳುಹಿಸುತ್ತಿದ್ದೀರಿ. ಅವರನ್ನು ಮನೆಗೆ ಕಳುಹಿಸಲು ಪ್ರಯತ್ನ ಮಾಡಿದರು.

ಶ್ರೀ ಧರ್ಮಸಿಂಗ್: ಕಳೆದ ಚುನಾವಣೆಯಲ್ಲಿ ಏನು ಭಾಷಣ ಮಾಡಿದ್ದಿರಿ ಎನ್ನುವುದು ಎಲ್ಲರಿಗೂ ಗೊತ್ತಿದೆ. ಬಿ.ಜೆ.ಪಿ. ಬಗ್ಗೆ ನೀವು ನಮ್ಮ ಕ್ಷೇತ್ರದಲ್ಲಿ ಏನು ಹೇಳಿದಿರಿ, ಬಿ.ಜೆ.ಪಿ. ಬಗ್ಗೆ ರಾಮಕೃಷ್ಣ ಹೆಗಡೆಯವರು ಮತ್ತು ನೀವು ಏನು ಭಾಷಣ ಮಾಡಿದಿರಿ ಅದು ನಮಗೆ ಗೊತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಏನಾದರೂ ಮಾಡಿಕೊಳ್ಳಲಿ, ಅದು ಅವರವರ ಇಚ್ಛೆ.

ಉಪಾಧ್ಯಕ್ಷರು: ಈ ಸದನದಲ್ಲಿ ಯಾರು ಇಲ್ಲ, ಅವರ ಬಗ್ಗೆ ಮಾತನಾಡುವುದು ಬೇಡ. ಸದನದಲ್ಲಿ ಇಲ್ಲದವರ ಸುದ್ದಿಯನ್ನು ಪ್ರಸ್ತಾಪ ಮಾಡುವುದು ದಯಮಾಡಿ ಬೇಡ. ಕೇಸರಿಯವರ ವಿಚಾರವೂ ಬೇಡ, ರಾಮಕೃಷ್ಣ ಹೆಗಡೆಯವರ ವಿಚಾರವೂ ಬೇಡ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಖರ್ಗೆಯವರು ಸಲಹೆ ಮಾಡಿದರು, ಅದರಂತೆ ಜೆ.ಹೆಚ್.ಪಟೇಲರು ಬೇಕಾದರೆ ಲೋಕಶಕ್ತಿಗೆ ಬರಲಿ, ನಾವು ಅದಕ್ಕೆ ವಿರೋಧ ಮಾಡುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇನ್ನೂ ಲೋಕಶಕ್ತಿಗೆ ಹೋಗಿಲ್ಲವಲ್ಲ, ಯಾವುದೋ ಒಂದು ವೇದಿಕೆಯಲ್ಲಿದ್ದೀರಿ. ನೀವು ಲೋಕಶಕ್ತಿಯಲ್ಲಿ ಎಲ್ಲಿದ್ದೀರಿ?

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಉಪಾಧ್ಯಕ್ಷರೇ, ಇವತ್ತು ರಾಜ್ಯಪಾಲರ ಭಾಷಣದ ಮೇಲೆ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಪಕ್ಷಗಳ, ಅವರ ತತ್ವಗಳ, ಸರ್ಕಾರದ ರೀತಿ ನೀತಿಗಳ ಬಗ್ಗೆ ಯಾರನ್ನಾದರೂ ತಾವು ಕೇಳಬಹುದು. ಆದರೆ, ಈ ಸದನದಲ್ಲಿ

ಸದಸ್ಯರಲ್ಲದೇ ಇರತಕ್ಕಂಥ ವೈಯಕ್ತಿಕ ರಾಜಕಾರಣವನ್ನು ನಾವೂ ಮಾತನಾಡಬಾರದು, ನೀವೂ ಮಾತನಾಡಬಾರದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆದರೆ ಮಾತು ಬಂತಲ್ಲ, ಅದಕ್ಕೇ ಹೇಳಿದೆ. ಹೊಂದಾಣಿಕೆ ಮಾಡಿಕೊಂಡಿದ್ದೇವೆ, ಅದಕ್ಕೇ ನಮ್ಮ ಪಕ್ಷಕ್ಕೆ ಹೀಗೆ ಆಗಿದೆ ಎಂದು ಇವರು ಹೇಳಿದರು, ಅದಕ್ಕಾಗಿ ಈ ಮಾತು ಪ್ರಸ್ತಾಪ ಮಾಡಬೇಕಾಯಿತು. ದುರ್ದೈವವೆಂದರೆ ಅವರು ಆ ಪಕ್ಷದಲ್ಲೇ ಅಧ್ಯಕ್ಷರಾಗಿದ್ದಾರೆ. ಯಡಿಯೂರಪ್ಪನವರು ಹೇಳುವುದು ಗೊತ್ತಿಲ್ಲ ಸಮಾಧಿ ಮಾಡುತ್ತೇವೆ ಎಂದು. ಏನೂ ಮಾಡಲಿಲ್ಲ. ಅದಕ್ಕಾಗಿ ನಮ್ಮ ಸಗೀರ್‌ರವರು ಹೇಳಿದ ಹಾಗೆ ಈಗ ಮಹಾರಾಷ್ಟ್ರದಲ್ಲೇ ಸಮಾಧಿಯಾಗಿದೆ. ಇವರು ಎಲ್ಲಿ ಇದ್ದರು, ಅಲ್ಲೇ ಜನ ಕೂಡಿಸಿದ್ದಾರೆ. ಅದಕ್ಕಾಗಿ ಪುನಃ ನಾವು ಚರ್ಚೆ ಮಾಡುವುದು ಬೇಕಾಗಿಲ್ಲ. ನಾನು ಹೇಳುವುದು ಇಷ್ಟೇ, ಈ ಎಲ್ಲಾ ಕಾರ್ಯಕ್ರಮಗಳು ಏನಿವೆ, ತಾವು ರಾಜ್ಯಾಪಾಲರ ಭಾಷಣದಲ್ಲಿ ಅಳವಡಿಸಿಕೊಂಡು ಹೋದವರ್ಷವೂ ಕೂಡ ಹೇಳಿದ್ದೀರಿ, ಈ ವರ್ಷವೂ ಕೂಡ ಕೆಲವನ್ನು ಪ್ರಸ್ತಾಪ ಮಾಡಿದ್ದೀರಿ, ಆದರೆ ಪ್ರಸ್ತಾಪ ಮಾಡಿದ ಹಾಗೆ ನಡೆದಿಲ್ಲ. ಅದನ್ನು ತಾವು ಆಡಳಿತದಲ್ಲಿ ಅನುಷ್ಠಾನಕ್ಕೆ ತಂದಿಲ್ಲ. ಅದಕ್ಕಾಗಿ ಇವತ್ತು ಎಲ್ಲಾ ಇಲಾಖೆಗಳಲ್ಲಿ ಡಿಫಿಷಿಯೆನ್ಸಿ ಇದೆ. ಉದಾಹರಣೆಗಾಗಿ ನಾನು ಆಶ್ರಯ ಯೋಜನೆಯದನ್ನು ಹೇಳಿದೆ, ನೀರಾವರಿಯದನ್ನು ಹೇಳಿದೆ, ವಿದ್ಯುತ್ ಉತ್ಪಾದನೆಯನ್ನು ಹೇಳಿದೆ, ಬೇರೆ ಬೇರೆ ಕೆಲವು ವಿಷಯಗಳನ್ನು ಇವತ್ತು ಪ್ರಸ್ತಾಪ ಮಾಡಿದ್ದೇನೆ. ಅದಕ್ಕಿಂತಲೂ ವಿಶೇಷವಾಗಿ ನಾನು ಹೇಳುವುದೇನೆಂದರೆ, ಸಂವಿಧಾನದ ತತ್ವಗಳನ್ನು ನಾವು ನೀವು ಒಪ್ಪಿಕೊಂಡಿದ್ದೇವೆ. ಆ ತತ್ವಗಳನ್ನು ರಕ್ಷಣೆ ಮಾಡತಕ್ಕಂಥ ವಿಶೇಷವಾದಂಥ ಜವಾಬ್ದಾರಿ ತಮ್ಮ ಮೇಲೆ ಇದೆ. ಆ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಈ ಸರ್ಕಾರ ವಿಫಲವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿಯೇ ನಾನು ಇವತ್ತು ಪ್ರಸ್ತಾಪ ಮಾಡಿದೆ. ನಾನು ಪ್ರಸ್ತಾಪ ಮಾಡುವಾಗ ನೀವು ಹೇಳದೇ ಇರತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿಲ್ಲ. ಫೆಬ್ರವರಿ 1997ರ ತಮ್ಮ ರಾಜ್ಯಪಾಲರ ಭಾಷಣದಲ್ಲಿ ತಾವು ಇದನ್ನು ಸ್ಪಷ್ಟಪಡಿಸಿದಿರಿ. ನಾನು ಇಂಥಿಂಥ ತತ್ವಗಳ ರಕ್ಷಣೆ ಮಾಡುತ್ತೇನೆ, ಇಂಥ ತತ್ವದ ಮೇಲೆ ನನಗೆ ನಂಬಿಕೆ ಇದೆ, ನನ್ನ ಸರ್ಕಾರ ಇದೇ ರೀತಿಯಾಗಿ ಹೋಗುತ್ತದೆ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದಕ್ಕಾಗಿ ಈ ಮಾತನ್ನು ಇವತ್ತು ನಾನು ಪ್ರಸ್ತಾಪ ಮಾಡಿದ್ದೇನೆ. ಆ ತತ್ವಗಳ ರಕ್ಷಣೆ ಮಾಡುವುದರಲ್ಲಿ ತಾವು ವಿಫಲರಾಗಿದ್ದೀರಿ, ಒಳ್ಳೆಯ ಆಡಳಿತ ಕೊಡುವುದರಲ್ಲಿ ವಿಫಲರಾಗಿದ್ದೀರಿ ಮತ್ತು ತಾವು ಏನು ಗುರಿಯನ್ನು ಸಾಧನೆ ಮಾಡಬೇಕು ಎಂದು ಹೇಳಿದ್ದಿರಿ, ಅದು ಎಕನಾಮಿಕಲ್ ಇರಬಹುದು, ಎಜುಕೇಷನಲ್ ಇರಬಹುದು, ಆ ಎಲ್ಲ ಗುರಿ ಸಾಧನೆಯಲ್ಲಿ ತಾವು ಇವತ್ತು ಸ್ಪಷ್ಟವಾಗಿ ವಿಫಲರಾಗಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿ, ಇವತ್ತು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು, ಈ ರಾಜ್ಯದ ವಿಧಾನ ಮಂಡಲದಲ್ಲಿ ಮಾಡಿದಂಥ ಭಾಷಣದ ಬಗೆಗಿನ ಈ ವಂದನಾ ನಿರ್ಣಯದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತಾ, ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದ ಪ್ರಜ್ಞಾವಂತ ಮತದಾರ ನಮಗೆ ಮತ್ತು ಲೋಕಶಕ್ತಿಯ ಜೊತೆ ಹೊಂದಾಣಿಕೆ ಮಾಡಿಕೊಂಡ ಮೈತ್ರಿಕೂಟಕ್ಕೆ ಅಭೂತಪೂರ್ವವಾದಂಥ ಬೆಂಬಲವನ್ನು ಕೊಟ್ಟು 28 ಲೋಕಸಭಾ ಕ್ಷೇತ್ರಗಳ ಪೈಕಿ 16 ಲೋಕಸಭಾ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಟ್ಟು, ಜನತಾ ದಳವನ್ನು ತಿರಸ್ಕರಿಸಿ, ಕಾಂಗ್ರೆಸ್ಸನ್ನು ದೂರ ಮಾಡಿ ಭಾರತೀಯ ಜನತಾ ಪಕ್ಷ ಮತ್ತು ಲೋಕಶಕ್ತಿಗೆ ಬೆಂಬಲವನ್ನು ಸೂಚಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಪ್ರಾರಂಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬೀದರ್ ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆಯ ಸರಣಿಯ ಹಿನ್ನೆಲೆಯಲ್ಲಿ ಇವತ್ತು ರಾಜ್ಯಪಾಲರ ಭಾಷಣ ಪ್ರಾರಂಭವಾಗಿದೆ. ನಾಡಿನ ಬೆನ್ನೆಲುಬಾದಂಥ ರೈತ ಆತ್ಮಹತ್ಯೆ ಮಾಡಿಕೊಳ್ಳುವಂಥ ಒಂದು ಪರಿಸ್ಥಿತಿ ಬಂದರೂ ಸಹ ಕಲ್ಲುಬಂಡೆಯಂತೆ ಯಾವುದೇ ರೀತಿ ಸ್ಪಂದಿಸದೆ, ಇಲ್ಲಿ ಸರ್ಕಾರ ಜೀವಂತವಾಗಿಲ್ಲ, ಬದುಕಿಲ್ಲ ಎನ್ನುವ ರೀತಿ ತಾವು ವರ್ತನೆಯನ್ನು ಮಾಡುತ್ತಿದ್ದೀರಿ. ಒಂದು ರೀತಿಯಲ್ಲಿ, ಈ ರಾಜ್ಯದ ಪಾಳೆಗಾರರಂತೆ ಅಹಂಕಾರದಿಂದ ವರ್ತಿಸಿರುವಂಥ ಒಂದು ಆಡಳಿತ ಪಕ್ಷ ಇಲ್ಲಿ ಇದೆ. ನಮಗೆ ಜನರ ಬೆಂಬಲ ಇತ್ತು ಎಂದು ಇದುವರೆಗೂ ತಾವು ಹೇಳುತ್ತಿದ್ದೀರಿ. ಲೋಕಸಭಾ ಚುನಾವಣೆಯಲ್ಲಿ ತಮ್ಮ ನೈತಿಕ ಹೊಣೆಯನ್ನೇ ಪಣವಾಗಿ ಇಟ್ಟಂಥ ಮುಖ್ಯಮಂತ್ರಿಗಳು ಈಗ ಏನು ಹೇಳುತ್ತಾರೆ? ಎಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ರಾಜ್ಯಪಾಲರ ಭಾಷಣದ ಬಗ್ಗೆ ನಾನು ವಿವರವಾಗಿ ಮಾತನಾಡುವುದಕ್ಕೆ, ಸ್ಪಂದಿಸುವುದಕ್ಕೆ ಹೋಗುವುದಿಲ್ಲ. ಕಾರಣ ಏನೆಂದು ನಿಮಗೂ ಗೊತ್ತಿದೆ. ಈಗಾಗಲೇ ನಿಮ್ಮ ನಾಯಕತ್ವದ ಬಗ್ಗೆ ನಿಮ್ಮ ಶಾಸಕರೇ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಅನೇಕ ಮಂತ್ರಿಗಳು ಮತ್ತು ಶಾಸಕರು ಚುನಾವಣೆಗೆ ಮುನ್ನ ನಿಮ್ಮ ಪಕ್ಷವನ್ನು ಬಿಟ್ಟು ಹೋಗಿದ್ದಾರೆ. ಭಾರತೀಯ ಜನತಾ ಪಾರ್ಟಿ-ಲೋಕಶಕ್ತಿ ಮುಂದೆ ಯಾವ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಎನ್ನುವುದನ್ನು ಕಾತುರತೆಯಿಂದ ಕಾಯುತ್ತಾ ನಮ್ಮ ಕಡೆ ನೋಡುತ್ತಿದ್ದಾರೆ. ನಾವು ಏನು ನಿರ್ಧಾರ ತೆಗೆದುಕೊಳ್ಳುತ್ತೇವೆ, ಅದರ ಆಧಾರದ ಮೇಲೆ, ನಿಮ್ಮ ನಾಯಕತ್ವದಲ್ಲಿ ನಾವು ಮತ್ತೊಮ್ಮೆ ವಿಧಾನಸಭೆಗೆ ಆಯ್ಕೆಯಾಗಿ ಬರುವುದು ಸಾಧ್ಯವಿಲ್ಲ ಎಂದು ಮನವರಿಕೆಯಾಗಿರುವುದರಿಂದ, ಬಹಳ ಬೇಗ ನಿಮ್ಮ ಸರ್ಕಾರ ನೆಲ ಕಚ್ಚುತ್ತದೆ. ಅದಕ್ಕಾಗಿ ನಾನು ಮುಖ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ, ದಯಮಾಡಿ ಈ ಜನಾದೇಶಕ್ಕೆ ಮನ್ನಣೆಯನ್ನು ಕೊಟ್ಟು ವಿಧಾನಸಭೆಯನ್ನು ವಿಸರ್ಜನೆ ಮಾಡಿ ಹೊಸದಾಗಿ ಜನಾದೇಶಕ್ಕೆ ತಾವು ಮುಂದೆ ಬರಬೇಕು. ಆ ರೀತಿ ನೀವು ತೀರ್ಮಾನವನ್ನು ಕೈಗೊಳ್ಳದಿದ್ದರೆ, ಭಾರತೀಯ ಜನತಾಪಕ್ಷ-ಲೋಕಶಕ್ತಿ ಮುಂದಿನ ಕೆಲವೇ ದಿನಗಳಲ್ಲಿ ತೆಗೆದುಕೊಳ್ಳುವಂಥ ತೀರ್ಮಾನಕ್ಕೆ ನಿಮ್ಮಲ್ಲಿರುವಂಥ ಅನೇಕ ಜನ ಶಾಸಕರು ಬದ್ಧರಾಗಿ ನಮ್ಮಲ್ಲಿಗೆ

ಬರುತ್ತಿದ್ದಾರೆ. ಅವರು ಈಗಾಗಲೇ ನಮ್ಮನ್ನು ಸಂಪರ್ಕ ಮಾಡುತ್ತಿದ್ದಾರೆ. ಪ್ರತಿನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಭೇಟಿ ಮಾಡುತ್ತಿದ್ದಾರೆ. ನಮ್ಮನ್ನು ಮತ್ತು ಲೋಕಶಕ್ತಿಯವರನ್ನು ಭೇಟಿ ಮಾಡುತ್ತಿದ್ದಾರೆ. ಸನ್ಮಾನ್ಯ ಜೆ.ಹೆಚ್.ಪಟೇಲರು ಗೃಹಖಾತೆಯನ್ನೂ ಇಟ್ಟುಕೊಂಡಿರುವುದರಿಂದ ಬಹುಶಃ ನನಗಿಂತ ಚೆನ್ನಾಗಿ ಯಾರುಯಾರು ನಮ್ಮನ್ನು ಭೇಟಿ ಮಾಡುತ್ತಿದ್ದಾರೆ, ಏನು ಆಗುತ್ತಿದೆ ಎನ್ನುವುದು ಬಹಳ ಸ್ಪಷ್ಟವಾಗಿ ಗೊತ್ತಿದೆ. ಆ ನಿರ್ಧಾರಕ್ಕೆ ನೈತಿಕ ಹೊಣೆಯನ್ನು ತಾವು ತೆಗೆದುಕೊಳ್ಳುತ್ತೀರಿ ಎಂದು ನಾನು ಸಾರ್ವಜನಿಕ ಸಭೆಯಲ್ಲಿ ಹೇಳಿದ್ದೆ. ನಮ್ಮ ಪಟೇಲರು ಬೇರೆ ಪಟೇಲರಂತೆ ಅಲ್ಲ, ಅವರು ಸಮಾಜವಾದಿಗಳಾಗಿದ್ದಾರೆ, ಯಾವುದೋ ಒಂದು ಕಾರಣಕ್ಕಾಗಿ ಏನು ಆಗುತ್ತದೆಯೋ ನೋಡೋಣ ಎಂದು ಕಾದು ನೋಡುತ್ತಿದ್ದಾರೆ ಎಂದು ಹೇಳಿದ್ದೆ. ನಿಶ್ಚಿತವಾಗಿ ರಾಜ್ಯದಲ್ಲಿ ಗೊಂದಲಕ್ಕೆ ಅವಕಾಶ ಮಾಡಿಕೊಡದೆ ತಾವು ವಿಧಾನಸಭೆ ವಿಸರ್ಜನೆಗೆ ಮುಂದೆ ಬನ್ನಿ, ಹೊಸದಾಗಿ ಜನಾದೇಶಕ್ಕೆ ಹೋಗೋಣ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮಾಲೀಕರು ಕೊಡುವಂಥ ತೀರ್ಪಿಗೆ ತಲೆಬಾಗಬೇಕಾಗಿರುವಂಥಾದ್ದು ನಮ್ಮ ಆದ್ಯ ಕರ್ತವ್ಯ ಎಂದು ನಾನಾದರೂ ಭಾವಿಸಿದ್ದೇವೆ. ಮೂರು ವಿಧಾನಸಭಾ ಕ್ಷೇತ್ರಗಳ ಬೈ-ಎಲೆಕ್ಷನ್ ಆಯಿತು. ಯಡಿಯೂರಪ್ಪನವರೇ, ಅದು ಬಿ.ಜೆಪಿ.ಮತ್ತು ಕಾಂಗ್ರೆಸ್‌ದು ಎಂದು ತಾವು ಹೇಳಬಹುದು. ಅಲ್ಲಿ ನಿಮ್ಮ ಸ್ಥಿತಿ ಏನು ಎನ್ನುವುದು ನಿಮಗೇ ಗೊತ್ತಿದೆ. ಮೂರು ಲೋಕಸಭಾ ಕ್ಷೇತ್ರದಲ್ಲಿ ನೀವು ಗದ್ದಿದ್ದೀರಿ. ಚಾಮರಾಜನಗರದಲ್ಲಿ ಅವರದೇ ಆದಂಥ ಬೇರೆ ಕಾರಣದಿಂದ ನಿಮ್ಮ ಅಭ್ಯರ್ಥಿ ಅಲ್ಲಿ ಗದ್ದರು ಎಂದು ನಿಮಗೆ ಗೊತ್ತಿದೆ. ಮಂಡ್ಯದಲ್ಲಿ ಚಲನಚಿತ್ರ ನಟ ಎನ್ನುವ ಕಾರಣದಿಂದ ಅಭ್ಯರ್ಥಿಯನ್ನು ಗೆಲ್ಲಿಸಿದರೇ ಹೊರತು, ಅದು ಜನತಾದಳಕ್ಕೆ ಕೊಟ್ಟಂಥ ಮತವಲ್ಲ ಎನ್ನುವುದು ನಿಮಗೇ ಗೊತ್ತಿದೆ. ಹೀಗೆ ಹಾಸನದಲ್ಲೂ ಸಹ ಗೂಂಡಾಗಿರಿ ನಡೆಸದಿದ್ದರೆ, ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳದಿದ್ದರೆ ನಿಶ್ಚಿತವಾಗಿ ಹಾಸನದಲ್ಲೂ ತಾವು ಸೋಲುತ್ತಿದ್ದಿರಿ ಎಂದು ನಿಮಗೇ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಲೋಕಸಭಾ ಚುನಾವಣೆಯಲ್ಲಿ ಆಗಿರತಕ್ಕಂಥಾದ್ದರ ಬಗ್ಗೆ ಹೇಳಬೇಕಾದರೆ ಚುನಾವಣಾ ಆಯೋಗ ಇದೆ. ನೀವು ಹೋಗಿ ಚುನಾವಣಾ ಆಯೋಗಕ್ಕೆ ಅದನ್ನು ಹೇಳಬೇಕು. ಇಲ್ಲಿ ಬಂದು ಬೂತ್ ಕ್ಯಾಪ್ಚರ್ ಮಾಡಿದರು, ಗೂಂಡಾಗಿರಿ ಮಾಡಿದರು ಎಂದು ಹೇಳಿದರೆ ಚುನಾವಣಾ ಆಯೋಗ ಇರುವುದು ಏಕೆ? Infact you must congratulate the Chief Minister and also this Government for having conducted the election in a fair manner. Election Commission has not taken any objection. You file that if you want to do it.

ಶ್ರೀ ಎಸ್.ಸುರೇಶ್ ಕುಮಾರ್: ಮಾಜಿ ಪ್ರಧಾನ ಮಂತ್ರಿಗಳ ಕ್ಷೇತ್ರದಲ್ಲಿ

ರೀಪೋಲಿಂಗ್ ಆಗುತ್ತದೆ, ಬ್ಯಾಲಟ್ ಬಾಕ್ಸ್‌ಗಳನ್ನು ತೆಗೆದುಕೊಂಡು ಹೋಗಿ ಬಾವಿಗೆ ಹಾಕುತ್ತಾರೆ ಎಂದರೆ ಅದು ಯಾವ ರೀತಿ ಶಾಂತ ರೀತಿಯ ಚುನಾವಣೆ ಎಂದು ಎಲ್ಲರಿಗೂ ಗೊತ್ತಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಿಂಧ್ಯಾರವರು ಹೇಳಬೇಕು, ತಮಗೆ ಹೊಡೆದರು ಎಂದು ಹೇಳುತ್ತಾರಲ್ಲ, ಅದರ ಬಗ್ಗೆ ಎಲೆಕ್ಷನ್ ಕಮೀಷನ್‌ಗೆ ತಾವು ಏನಾದರೂ ದೂರು ಕೊಟ್ಟಿದ್ದೀರೇನು?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ನೀವು ಏಕೆ ಹೇಳುತ್ತೀರಿ? ಯಾರು ಹೊಡೆಸಿದ್ದಾರೋ ನೀವು ಏಕೆ ಹೇಳುತ್ತೀರಿ? ಹೊಡೆಸಿರುವವರು ಹೇಳಬೇಡಿ, ಹೊಡೆತ ತಿಂದವರು ಹೇಳಲಿ.

ಒಬ್ಬ ಸದಸ್ಯರು: ಸದನದಲ್ಲಿ ಬೇಕೆಂದೇ ಈ ಪ್ರಶ್ನೆಯನ್ನು ಎತ್ತುತ್ತಿದ್ದಾರೆ. ನಮ್ಮ ಮಂತ್ರಿಗಳಿದ್ದಾರೆ, ನಾವಿದ್ದೇವೆ, ನಮ್ಮ ಪಕ್ಷ ಇದೆ, ದಯಮಾಡಿ ಬೇರೆಯವರು ಅದನ್ನು ಪ್ರಶ್ನೆ ಮಾಡುವಂಥಾದ್ದು ಉಚಿತವಲ್ಲ.

2.40 ಪಿ.ಎಂ

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಹೊಸಕೋಟೆಯಿಂದ ಕೆಂಪು ಕೋಟೆಗೆ ವಿಜಯ ಯಾತ್ರೆ ಪ್ರಾರಂಭ ಮಾಡಿದಿರಿ. ಆರಂಭದ ದಿನ ಅಪಶಕುನವಾಯಿತು. ಹೊಸಕೋಟೆಯಲ್ಲಿ ಜನತಾದಳ ಎರಡನೇ ಸ್ಥಾನಕ್ಕೆ ಬಂದಿದೆ ಎಂದು ಸಿಂಧ್ಯರವರಿಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. 20 ಜನರಿಗೆ ಕೊಟ್ಟರೆ ಕರ್ನಾಟಕಕ್ಕೆ ಮತ್ತೆ ಪ್ರಧಾನಿ ಪಟ್ಟ ಕೊಡಿಸುತ್ತೇವೆ ಎಂದು ಮಾಜಿ ಪ್ರಧಾನಿಯವರು ಅಪ್ಪಣೆ ಕೊಟ್ಟಿದ್ದರು. ತಮ್ಮ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಎಲ್ಲಾ ಕಡೆ ಒಂದ ರೀತಿ ದ್ವೇಷ, ಅಸೂಯೆ, ಜಾತಿಯ ವಿಷ ಬೀಜ ಬಿತ್ತಿ ಏನು ಹೇಳಬಾರದು, ಏನು ಹೇಳಬೇಕು, ಇದು ಯಾವುದೂ ಅರಿವು ಇಲ್ಲದೆ ಚುನಾವಣಾ ಪ್ರಚಾರ ನಡೆದು, ಆ ಸಂದರ್ಭದಲ್ಲಿ ಶ್ರೀ ಸಿ.ಎಮ್. ಇಬ್ರಾಹಿಂರವರು ಏನೇನು ಭಾಷಣ ಮಾಡಿದರು ಅದನ್ನು ಸಹ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಒಂದು ಮಾತನ್ನು ಸ್ಪಷ್ಟ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಒಬ್ಬ ಮಾಜಿ ಪ್ರಧಾನಿಯವರು ಚುನಾವಣೆಗೆ ನಿಂತಂತಹ ಸ್ಥಳದಲ್ಲಿ ಬೂತ್ ಆಕ್ರಮಣ ಮಾಡುವುದು, ಬೋಗಸ್ ಮತದಾನ ಮಾಡುವುದು ಇದು ಯಾರಿಗೂ ಶೋಭೆ ತರುವಂತಹ ಸಂಗತಿ ಅಲ್ಲವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯ ಮಾಜಿ ಪ್ರಧಾನಿಗಳು ಒಂದು ಮಾತನ್ನು ಹೇಳಿದರು, ಗುಜ್ರಾಲ್‌ರವರಿಗೆ ವಿರೋಧ ಪಕ್ಷದ ಯಾವುದೇ ಅಭ್ಯರ್ಥಿಗಳನ್ನು ಹಾಕಲಿಲ್ಲ, ಇಲ್ಲಿ ನನ್ನನ್ನು ವಿರೋಧ ಮಾಡುವುದಕ್ಕೋಸ್ಕರ ಈ ತರಹ ಮಾಡುತ್ತಿದ್ದಾರೆ,

ಎಂದು ಹೇಳಿ ಮುಂದುವರಿದು ಕನ್ನಡ ನಾಡಿನ ಜನತೆಯ ಅಭಿಮಾನ ಶೂನ್ಯತೆ ಬಗ್ಗೆ ಪ್ರಸ್ತಾಪ ಮಾಡಿದರು, ನಾನು ಕೇಳುತ್ತೇನೆ, ಏತಕ್ಕಾಗಿ ನಿಮ್ಮನ್ನು ಇಲ್ಲಿ ಯಾವುದೇ ಅಭ್ಯರ್ಥಿಯನ್ನು ನಿಲ್ಲಿಸದೆ ಆಯ್ಕೆ ಮಾಡಿ ಕಳುಹಿಸಬೇಕಾಗಿತ್ತು?

ಶ್ರೀ ಪಿ.ಜಿ.ಆರ್.ಸಿಂಧ್ಯಾ: Why are you debating on a person who is not a Member of this House. ಮಾಜಿ ಪ್ರಧಾನಿ ದೇವೇಗೌಡರು ಎರಡೂ ಒಂದೇ. Why are you debating about it? ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ, ರಾಷ್ಟ್ರವನ್ನು ಆಳುವುದಕ್ಕೇ ಹೊರಟಿರುವುದು ನೀವು ಯೋಚನೆ ಮಾಡಿ. Why are you discussing about Sri Devegowda here, what he has said about and all those things? Why do you want to discuss about all those matters? That is not relevant. Gracefully people have given you the mandate. We gracefully aacept it. We appreciate it and we accept it.

(ಗೊಂದಲ)

ನಿಮಗೆ ಜನ ಓಟು ಕೊಟ್ಟಿದ್ದಾರೆ, ಪಾರ್ಲಿಮೆಂಟಿನಲ್ಲಿ ಆಳುವುದಕ್ಕೆ, ಅವರು ಹಾಗೆ ಮಾಡಿದರು, ಹೀಗೆ ಮಾಡಿದರು ಅಂದರೆ ಹೇಗೆ.

ಶ್ರೀ ಕೆ.ಎಸ್.ಈಶ್ವರಪ್ಪ: ಯಾವ ಯಾವ ರೀತಿ ಹೀನಾಯವಾದ ಸೋಲಿನ ಕಾರಣಗಳನ್ನು ತೋರಿಸಿದರು ಇದಕ್ಕೆ ಅವರು ಒಬ್ಬರು ಮಾಜಿ ಪ್ರಧಾನಿಗಳು ಕಾರಣವೆಂದು ಸ್ಪಷ್ಟಪಡಿಸಿದರು.

ಶ್ರೀಮತಿ ಪ್ರಮೀಳಾ ನೇಸರ್ಗಿ: ರಾಜ್ಯಪಾಲರ ಭಾಷಣದಲ್ಲಿ ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡಬೇಕೇ ಹೊರತು, ಈ ಚುನಾವಣೆಯಲ್ಲಿ ಏನು ಆರ್ಡರ್ ಇತ್ತು, ಆ ಚುನಾವಣೆಯಲ್ಲಿ ಏನು ಆರ್ಡರ್ ಇತ್ತು, ಮಾಜಿ ಪ್ರಧಾನಿ ಕ್ಷೇತ್ರದಲ್ಲಿ ಏನಾಯಿತು ಎಂದು ಹೇಳಬೇಕಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಎಲೆಕ್ಷನ್ ಕಮಿಷನ್ ಇರುವುದು ಏತಕ್ಕೆ?

ಉಪಾಧ್ಯಕ್ಷರು: ಯಡಿಯೂರಪ್ಪನವರೇ, ಈಗಾಗಲೇ ಸದನದಲ್ಲಿ ಉಪಸ್ಥಿತರಿಲ್ಲದೆ ಇರುವವರ ಬಗ್ಗೆ ಮಾತನಾಡಬಾರದು ಎಂದು ಹೇಳಿ ಆಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಒಂದು ಕರೆಯನ್ನು ಕೊಟ್ಟಿದ್ದರು, ಬೇರೆ ಪಕ್ಷಗಳನ್ನು ಕುರಿತು ಒಂದು ಮಾತನ್ನು ಹೇಳಿದರು. ಜಲಂಧರ್‌ನಲ್ಲಿ ಯಾವ ರೀತಿ

ಧಾರಾಳತನದಿಂದ ಬೇರೆ ಯಾವುದೇ ಅಭ್ಯರ್ಥಿಯನ್ನು ಹಾಕಲಿಲ್ಲ, ಇಲ್ಲಿ ನಾನು ಕನ್ನಡಿಗ ನನಗೆ ಔದಾರ್ಯ ಸಿಗಬೇಕಾಗಿತ್ತು, ಆ ಧಾರಾಳತನದಿಂದ ಈ ಪಕ್ಷಗಳು ವರ್ತನೆ ಮಾಡಬೇಕಾಗಿತ್ತು. ಬಹುಶಃ ಸಿಂಧ್ಯರವರಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಗೊತ್ತಿರಬಹುದು, ಸನ್ಮಾನ್ಯ ದೇವೇಗೌಡರು ಇಲ್ಲಿ ರಾಜ್ಯಸಭೆಗೆ ಚುನಾವಣೆಗೆ ನಿಂತಂತಹ ಸಂದರ್ಭದಲ್ಲಿ ಒಂದು ಕಿಂಚಿತ್ತೂ ಯೋಚನೆ ಮಾಡದೆ 40 ಜನ ಬಿ.ಜೆ.ಪಿ. ಶಾಸಕರು ಇದ್ದಂತಹ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನ ತೆಗೆದುಕೊಂಡು ಮೊದಲು ಒಬ್ಬ ರಾಜ್ಯದ ಪ್ರಧಾನಿಯಾಗಿ ರಾಜ್ಯಸಭೆಗೆ ನಿಲ್ಲುತ್ತಿದ್ದಾರೆ, ಅವಿರೋಧವಾಗಿ ಆಯ್ಕೆ ಮಾಡಿ ಕಳುಹಿಸಬೇಕೆಂದು ಕಳುಹಿಸಿದ್ದೆವು. ಅದಕ್ಕೆ ನೀವು ಕೃತಜ್ಞರಾಗಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ನಂಬಿ ನಿಮ್ಮನ್ನು ರಾಜ್ಯಸಭೆಗೆ ಕಳುಹಿಸಿಕೊಟ್ಟೋ, ಅವಿರೋಧವಾಗಿ ಈ ದೇಶದ ಪ್ರಧಾನಿ ಆಗುವಂತಹ ಸೌಭಾಗ್ಯ ಸಿಕ್ಕಿತು. ಅಲ್ಲಿ ನಿಮ್ಮವರೇ ಪ್ರಧಾನಿ, ಇಲ್ಲಿ ಅದೇ ಪಕ್ಷದ ಮುಖ್ಯಮಂತ್ರಿ ಸನ್ಮಾನ್ಯ ಜೆ.ಹೆಚ್.ಪಟೇಲರು ಇದ್ದಾರೆ. ಆದರೆ ರಾಜ್ಯದ ಜನತೆಗೆ ತಾವು ದ್ರೋಹ ಮಾಡಿದಿರಿ. ರಾಜ್ಯದ ಯಾವುದೇ ಜ್ವಲಂತ ಸಮಸ್ಯೆಗೆ ಸ್ಪಂದಿಸಲಿಲ್ಲ. ಇದಕ್ಕಾಗಿ ನಾನು ಹೇಳುತ್ತಿದ್ದೇನೆ,

ಶ್ರೀ ಪಿ.ಜಿ.ಆರ್.ಸಿಂಧ್ಯ: ಯಡಿಯೂರಪ್ಪನವರೇ, 13 ಜನ ನಿಮ್ಮ ಪಾರ್ಟಿಯವರು, ಮೂರು ಜನ ಇವರ ಪಾರ್ಟಿಯವರು ಗೆದ್ದಿದ್ದಾರೆ, 16 ಜನ ಇದ್ದಾರೆ. ಅವರಿಗೆ ಹೇಳಿ ಲೋಕಸಭೆಯಲ್ಲಿ ಭಾಷಣ ಮಾಡುತ್ತಾರೆ. ಇದಕ್ಕೆ ಪಟೇಲರು ಉತ್ತರ ಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ಕೊಡಬಹುದು. ಏತಕೆ ಹೇಳುತ್ತಿದ್ದೇನೆಂದರೆ, ಇದು ಜಂಟಿ ಜವಾಬ್ದಾರಿ ಇದೆ. ಸನ್ಮಾನ್ಯ ಮಾಜಿ ಪ್ರಧಾನಿಯವರಾದ ದೇವೇಗೌಡರು ಪ್ರಧಾನಿಯಾಗಿ ಮೊದಲು ಲೋಕಸಭೆಯಲ್ಲಿ ಭಾಷಣ ಮಾಡಿದ್ದು, ಕನ್ನಡ ನಾಡಿನಿಂದ ಬಂದಿದ್ದೇನೆ, ರೈತನ ಮಗನಾಗಿ ಬಂದಿದ್ದೇನೆ, ಮಣ್ಣಿನ ಮಗನಾಗಿ ಬಂದಿದ್ದೇನೆ, ಅಲ್ಲಿ ಏನು ಸಾಧನೆ ಮಾಡಿದ್ದೇನೆ, ಇಡೀ ದೇಶಕ್ಕೆ ಅದನ್ನು ವಿಸ್ತರಣೆ ಮಾಡುತ್ತೇನೆಂದು ಮೊದಲು ಭಾಷಣ ಪ್ರಾರಂಭವಾಯಿತು. ಆದರೆ 11 ತಿಂಗಳ ನಂತರ ಕನ್ನಡ ನಾಡಿನ ಜನತೆಗೆ ಮಾಡಬೇಕಾದ ಯಾವುದೇ ಕೆಲಸ ಆಗಲಿಲ್ಲ. ಜನತೆಗೆ ದ್ರೋಹವಾಯಿತು. ಬಹುಶಃ ದೇಶದ ಇತಿಹಾಸದಲ್ಲಿ ಮೊದಲು ನಮ್ಮವರೇ ಅಲ್ಲಿ ಒಬ್ಬರು ಪ್ರಧಾನಿ ಆದರು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಪಿ.ಜಿ.ಆರ್.ಸಿಂಧ್ಯ: ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆಯಾಗುತ್ತಿದೆ, ಶ್ರೀಮಾನ್ ಯಡಿಯೂರಪ್ಪನವರು ಮಾತನಾಡುತ್ತಿದ್ದಾರೆ, ಈ ಸಂದರ್ಭದಲ್ಲಿ ದೇವೇಗೌಡರು ಈ ದೇಶಕ್ಕೆ ದ್ರೋಹ ಮಾಡಿದ್ದಾರೆ, ಈ ರಾಜ್ಯಕ್ಕೆ ದ್ರೋಹ ಮಾಡಿದ್ದಾರೆ, ಅವರು ಚುನಾವಣೆಯಲ್ಲಿ ರಿಟ್ ಮಾಡಿದರು, ಇವೆಲ್ಲದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬಹುದೇ ಎನ್ನುವುದನ್ನು ದಯಮಾಡಿ ತಾವು ತಿಳಿಸಬೇಕು.

ಶ್ರೀ ಬಿ.ಎಸ್.ಯಡಿಯೂಪ್ಪ: ಏತಕ್ಕೆಂದರೆ ತಾವು ರಾಜ್ಯಪಾಲರ ಭಾಷಣದ ಮೊದಲನೇ ಸಾಲಿನಲ್ಲಿ ಏನು ಹೇಳಿದ್ದೀರೆಂದರೆ,

ಪ್ರಸಕ್ತ ಚುನಾವಣೆಯಲ್ಲಿ ಹಾಲಿ ಆಡಳಿತದಲ್ಲಿರುವ ಸರ್ಕಾರಗಳ ವಿರುದ್ಧ ಅಭಿಮತ ವ್ಯಕ್ತವಾಗಿರುವುದು ಭಾರತಾದ್ಯಂತ ಕಂಡು ಬಂದಿರುವ ಪ್ರಕ್ರಿಯೆಯಾಗಿದ್ದರೂ, ಜನತೆಯ ಆಶೋತ್ತರ ಮೇಲ್ಮಟ್ಟಕ್ಕೇರುತ್ತಿದ್ದು ಸರ್ಕಾರ ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಎಂದು ಜನ ನಿರ್ಣಯದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ನನ್ನ ಸರ್ಕಾರ ತುಂಬ ಗೌರವದಿಂದ ಸ್ವೀಕರಿಸಿದೆ.''

ಅದರ ಅರ್ಥ ಏನೆಂದರೆ, ಜನತೆ ಇವತ್ತು ಅಧಿಕಾರದಲ್ಲಿರುವಂತಹ ಎಲ್ಲಾ ಪಕ್ಷಗಳನ್ನು ಒಂದಲ್ಲ ಒಂದು ಕಾರಣದಿಂದ ರಿಜೆಕ್ಟ್ ಮಾಡತಕ್ಕಂತಹ ಪರಿಸ್ಥಿತಿಗೆ ಬಂದಿದೆ. ಆ ಕಾರಣ ಏನು ಹೇಳುತ್ತಿದ್ದಾರೆ, ಇದು ಎಲ್ಲರಿಗೂ ಅನ್ವಯವಾಗುತ್ತದೆ. ದೊಡ್ಡ ಪಾಠ ಕಲಿಸಿದ್ದಾರೆ. ಆಡಳಿತದಲ್ಲಿ ಇದ್ದ ಸಂದರ್ಭದಲ್ಲಿ ಜನ ಹಿತ ಮರೆತು ಸರ್ವಾಧಿಕಾರಗಳಿಂದ, ನಮ್ಮ ಮಾಲೀಕರು ರಾಜ್ಯದ ಜನ ಎನ್ನುವ ಅರಿವು ಇಲ್ಲದೆ ಒಂದು ಠೇಂಕಾರದಿಂದ ಈಗ ಯಾವ ರೀತಿ ಆಡಳಿತ ನಡೆಸುತ್ತಿದ್ದಾರೆ, ಆ ರೀತಿ ನಡೆಸಿದರೆ ಜನ ಯಾವ ರೀತಿ ಪಾಠ ಕಲಿಸಬಹುದು ಎಂದು ಕಲಿಸಿದ್ದಾರೆ, ಇನ್ನಾದರೂ ಎಚ್ಚರಿಕೆ ವಹಿಸಿ ಪಾಠ ಕಲಿಯಿರಿ ಅನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಈ ರಾಜ್ಯದ ಇತಿಹಾಸದಲ್ಲಿ ನಿಮ್ಮಂತಹ ಒಬ್ಬ ಮುತ್ಸದ್ದಿ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ನಿಮ್ಮವರೇ ಅಲ್ಲಿ ಪ್ರಧಾನಿ ಆಗಿದ್ದ ಕಾಲದಲ್ಲಿ ನಮ್ಮ ರಾಜ್ಯ ಜ್ವಲಂತ ಸಮಸ್ಯೆಗೆ ಪರಿಹಾರ ಹುಡುಕುವಂತಹ ಯಾವುದೇ ಪ್ರಯತ್ನ ಮಾಡದೇ ಮೋಜು ಮಾಡಿಕೊಂಡು ಕಾಲಹರಣ ಮಾಡಿ ಬಿಟ್ಟರು ಅನ್ನುವುದು ನಾವು ತರುವಂತಹ ಸಂಗತಿ. ಏಕೆಂದರೆ, ಈ ಕಾವೇರಿ ಜಲ ವಿವಾದದ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಾದರೂ ಪ್ರಾಮಾಣಿಕ ಪ್ರಯತ್ನ ಮಾಡಿದಿರಾ? ಅದನ್ನೂ ಇನ್ನು ಜಟಿಲ ಮಾಡಿದಿರಿ.

ಶ್ರೀ ಆರ್.ಕೃಷ್ಣಪ್ಪ: ಬಹುಶಃ ಮಹಾರಾಷ್ಟ್ರದಲ್ಲಿ, ರಾಜಸ್ಥಾನದಲ್ಲಿ ತಮ್ಮವರು ಮೋಜು ಮಾಡುತ್ತಿದ್ದಾರೆಂದು ಕಾಣುತ್ತದೆ, ಯಾವ ತರಹ ಮೋಜು ಮಾಡುತ್ತಾರೆಂದು ನಮಗೆ ಸ್ವಲ್ಪ ಹೇಳಿದರೆ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ದೇಶದಲ್ಲಿ ನಿಮ್ಮ ಜನತಾದಳ ಎಲ್ಲಿ ಇದೆ ಹೇಳಿ?

ಶ್ರೀ ಎನ್.ರಾಜಣ್ಣ: ರಾಜಸ್ಥಾನದಲ್ಲಿ ಮತ್ತು ಮುಂಬೈನಲ್ಲಿ ಏನಾಗಿದೆ ಎಂದು ಇಡೀ ದೇಶದ ಜನತೆಗೆ ಗೊತ್ತಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: 44ರಲ್ಲಿ ಆರು, ಅದರಲ್ಲೂ ಸನ್ಮಾನ್ಯ

ಐ.ಕೆ.ಗುಜ್ರಾಲ್‌ರವರು ಮತ್ತು ಪಾಸ್ವಾನ್‌ರವರು ನಮ್ಮ ಬೆಂಬಲದಿಂದ ಗೆದ್ದಿರುವುದು ಎಂದು ಅವರಿಗೆ ಕಲ್ಪನೆ ಇಲ್ಲ.

ಶ್ರೀ ಜೆ.ಹೆಚ್.ಪಟೇಲ್: ಗವರ್ನರ್ ಆಡ್ರಸ್ ಮೇಲೆ ಪೊಲಿಟಿಕಲ್ಲಾಗಿ ಅವರ ವಿಚಾರಗಳನ್ನು ಪಕ್ಷಗಳ ಬಗ್ಗೆ, ಸರ್ಕಾರಗಳ ಬಗ್ಗೆ ಹೇಳುವುದಕ್ಕೆ ಅವಕಾಶ ಇದೆ ಹೇಳಲಿ, ಆದರೆ ಜನತಾದಳ ಎಲ್ಲಿದೆ ಎಂದು ಹೇಳಿದಿರಿ, ದೇವರು ಎಲ್ಲಿದ್ದಾನೆ ತೋರಿಸಿ, ತಾವು ದೇವರಲ್ಲಿ ನಂಬಿಕೆ ಇರುವವರು, ಎಲ್ಲಿದ್ದಾನೆ ತೋರಿಸಿ. ಹಾಗೆ ಜನತಾದಳ ಇದೆ.

ಶ್ರೀ ಕೆ.ಜಯಪ್ರಕಾಶ್‌ಹೆಗಡೆ: ಒಂದು ವೇಳೆ ಬಿ.ಜೆ.ಪಿಯವರು ಸರ್ಕಾರ ರಚಿಸಿದರೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಬರುತ್ತಾರೆಂದು ಹಿಂದೆ ಅಭಿಪ್ರಾಯವಿತ್ತು, ಈಗ ಅವರು ಉಪ ಮುಖ್ಯಮಂತ್ರಿಗಳಾಗಿ ಬರುತ್ತಾರೋ, ಮುಖ್ಯ ಮಂತ್ರಿಗಳಾಗಿ ಬರುತ್ತಾರೋ, ಇದು ಒಂದು ಸಮಸ್ಯೆ ಕಾಡುತ್ತಿದೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯರು, ಅತ್ತಕಡೆಯವರು ಪ್ರತಿ ಸಾರಿ ಹೇಳುತ್ತಿದ್ದರು ನಿಮ್ಮ ಜೀವನದಲ್ಲಿ, ನಿಮ್ಮ ಹಣೆಬರಹದಲ್ಲಿ ಎಂದು ಇತ್ತಕಡೆ ಬರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು, ಈಗ ಉಪಮುಖ್ಯಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ಆಗಿ ಯಡಿಯೂರಪ್ಪನವರು ಬರುತ್ತಾರೆ ಎನ್ನುವುದನ್ನು ಒಪ್ಪಿಕೊಂಡಿರಲ್ಲ ಅದೇ ಸಂತೋಷದ ವಿಷಯ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಒಂದು ವೇಳೆ ಬಂದರೆ ಎಂದು ಹೇಳಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಅಂಕಿ-ಅಂಶಗಳನ್ನು ಸರಿಯಾಗಿ ನೋಡಿಕೊಳ್ಳಿ, 18 ಲೋಕಸಭಾ ಕ್ಷೇತ್ರಗಳಲ್ಲಿ ನಾವು ಸ್ಪರ್ಧೆ ಮಾಡಿ ಅದರಲ್ಲಿ 13 ಸ್ಥಾನಗಳನ್ನು ಗೆದ್ದಿದ್ದೇವೆ, ಅದರಲ್ಲಿ 110 ವಿಧಾನಸಭಾ ಕ್ಷೇತ್ರದಲ್ಲಿ ಬಿ.ಜೆ.ಪಿ.ಹತ್ತಾರು ಸಾವಿರ ಅಂತರದಲ್ಲಿ ವಿಧಾನಸಭೆಯಲ್ಲಿ ಮುಂದೆ ಇದ್ದೇವೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನೀವು ರಾತ್ರಿಯೆಲ್ಲಾ ನಿದ್ದೆಗೆಡಬಾರದು ಎಂದು. 16ನೇ ತಾರೀಖು ಚುನಾವಣೆ ನಡೆದಾಗ 10 ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. 10 ಸ್ಥಾನಗಳನ್ನು ಗೆದ್ದಿದೆ, ಲೋಕಶಕ್ತಿ 3 ಸ್ಥಾನಗಳನ್ನು ಗೆದ್ದಿದೆ, ಕಾಂಗ್ರೆಸ್ 3 ಸ್ಥಾನಗಳನ್ನು ಗೆದ್ದಿದೆ, ಜೆಡಿ 3 ಸ್ಥಾನಗಳನ್ನು ಗೆದ್ದಿದೆ, ಇಲ್ಲಿ ನನಗೆ ದುಃಖದ ಸಂಗತಿ ಎಂದರೆ ಇಲ್ಲಿ ದೇಶದ ಜನ ಕಾಂಗ್ರೆಸ್ ಸರ್ಕಾರವನ್ನು ನೆಲಸಮ ಮಾಡಬೇಕು ಎಂದು ಅದನ್ನು ತಿರಸ್ಕಾರ ಮಾಡಿದರು, ಬಿ.ಜೆ.ಪಿ.ಯ 16ನೇ ತಾರೀಖಿನ ಫರಪಾರ್ಮೆನ್ಸ್ ನೋಡಿಕೊಂಡು ನಿಮ್ಮ ಗುಪ್ತ ದಳದ ಮುಖಾಂತರ ವರದಿಯನ್ನು ತರಿಸಿಕೊಂಡು ನಿಮ್ಮ ಮಾಜಿ ಪ್ರಧಾನ ಮಂತ್ರಿಗಳು ಸಾರ್ವಜನಿಕ ಸಭೆಯನ್ನು ನಡೆಸಿ, 22ರಂದು ನಡೆದ ಚುನಾವಣೆಯಲ್ಲಿ ಬಿ.ಜೆ.ಪಿ. 3 ಸ್ಥಾನ, ಜನತಾದಳ ಏನು ಇಲ್ಲ, ಕಾಂಗ್ರೆಸ್ 6 ಸ್ಥಾನಗಳನ್ನು ಗೆಲ್ಲುವ ಹಾಗೆ ಮಾಡಿದ್ದಿರಲ್ಲಾ ಇದನ್ನು ದೇವರು ಮೆಚ್ಚುತ್ತಾನೆಯೇ? ಎಂದು ಕೇಳಿದ್ದಾರೆ.

ಒಬ್ಬ ಸದಸ್ಯರು: ನಿಮ್ಮ ದುಃಖಕ್ಕೆ ಅದು ಕಾರಣವಲ್ಲ, ಎಲ್ಲಿ ನಮ್ಮ ಶ್ರೀ ರಾಮಕೃಷ್ಣ ಹೆಗಡೆಯವರು ಬಂದು ನಿಮಗೆ ತೊಂದರೆ ಕೊಟ್ಟರಲ್ಲಾ ಎಂದು ನಿಮ್ಮ ದುಃಖವಾಗಿದೆ ಅಷ್ಟೆ.

ಅಧ್ಯಕ್ಷರು: ಗುಪ್ತದಳದ ಆಧಾರದ ಮೇಲೆ ಹೋದವರು ಯಾರು, ಎಲ್ಲಿಯೂ ಬದುಕಿಲ್ಲ ಅದು ದೆಹಲಿಯಲ್ಲಿ ಆಗಲಿ ಇಲ್ಲಿ ಆಗಲಿ, ಮುಂದೆ ನಿಮಗೆ ಅವಕಾಶ ಸಿಕ್ಕರೆ ಆ ಒಂದು ದಳದ ಬಗ್ಗೆ ನಿಮಗೆ ಎಚ್ಚರಿಗೆ ಇರಲಿ. ಪಾಪ ಅವರು ಆ ಡ್ಯೂಟಿ ಮಾಡಬೇಕಾಗುತ್ತದೆ ಮಾಡುತ್ತಾರೆ. ಅವರು ಕೊಡುವ ಇನ್‌ಫರ್‌ಮೇಷನ್‌ಗೂ, ಇರುವ ಸಂಗತಿಗೆ ಏನು ಸಂಬಂಧ ಇರುವುದಿಲ್ಲ. 1972ರಲ್ಲಿ ಶ್ರೀಮತಿ ದಿ: ಇಂದಿರಾ ಗಾಂಧಿಯವರು ಸೋಲುತ್ತಾರೆ ಎಂದು ಅವರು ಹೇಳಿದ್ದರಾ? ಅದನ್ನೆಲ್ಲಾ ನಂಬಬಾರದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನೀವು ನಮಗೆ ಒಂದು ಮಹತ್ವವಾದ ವಿಷಯದ ಬಗ್ಗೆ ಜಾಗ್ರತೆ ಮಾಡಿದ್ದೀರಿ, ಸ್ವಾತಂತ್ರ್ಯ ಬಂದು 50 ವರ್ಷಗಳಾದ ನಂತರ ದೇಶದ ಮತದಾರರು ಜಾಗ್ರತರಾಗಿದ್ದಾರೆ. ಅವನು ಹೊಟ್ಟೆ ಪಾಡಿಗಾಗಿ ತನ್ನ ಕಾಯಕದಲ್ಲಿ ತೊಡಗಿದ್ದವನು ಇನ್ನು ಮುಂದೆ ನಾನು ಕಣ್ಣು ಬಿಟ್ಟು ನೋಡದಿದ್ದರೆ ನನ್ನ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ಭ್ರಷ್ಟ ವ್ಯವಸ್ಥೆ ವಿರುದ್ಧ ನಾನು ಜಾಗ್ರತನಾಗದಿದ್ದರೆ ಬದುಕಲು ಸಾಧ್ಯವಿಲ್ಲ ಎನ್ನುವ ಅರಿವು ಅವನಲ್ಲಿ ಬಂದಿದೆ. 18-25 ವರ್ಷದ ಯುವಕರು ಸ್ವಾತಂತ್ರ್ಯ ಪೂರ್ವದ ಹೋರಾಟದಲ್ಲಿ ಮಹಾತ್ಮಾ ಗಾಂಧೀಜಿಯವರ ಜೊತೆ ಹೇಗೆ ಹೋರಾಟ ಮಾಡಿದ್ದರು, ಅದೇ ರೀತಿ ಇಂದು ಬಿಜೆಪಿ ಜೊತೆ ಅಟಲ್ ಬಿಹಾರಿ ವಾಜಪೇಯವರ ಜೊತೆ ನಿಂತುಕೊಂಡು ಹೋರಾಟ ಮಾಡಿದ್ದಾರೆ. ಇದರ ಪರಿಣಾಮ ಸ್ವಾತಂತ್ರ್ಯ ಬಂದ 50 ವರ್ಷದಲ್ಲಿ ಟಿಕೇಟ್ ಬಂದ ತಕ್ಷಣ ಅವರೆ ಎಂಎಲ್ಎ, ಎಂಪಿ ಎಂದು ಖಾಯಂ ಆದಂತಹ ಕಾಂಗ್ರೆಸಿಗರು ಇಂದು ಒಂದು ರೀತಿ ನಾಯಕನಿಲ್ಲದೆ ತಬ್ಬಲಿಯಂತೆ ಅಲೆಯುವಂತಹ ಸ್ಥಿತಿ, ಯಾರನ್ನೊ ಕರೆದುಕೊಂಡು ಬಂದು ಕೈ ತೋರಿಸಿ ಓಟು ತೆಗೆದುಕೊಳ್ಳುವಂತಹ ಸ್ಥಿತಿ, ಮಾಡಿದಮೇಲೂ ಕೂಡ ಜನರು ನಿಮ್ಮನ್ನು ರಿಜೆಕ್ಟ್ ಮಾಡಿದ್ದಾರೆ. ನನಗೆ ದುಃಖ ಏನು ಎಂದರೆ ಏನೇ ಟೀಕೆ-ಟಿಪ್ಪಣಿ ಮಾಡಿದ್ದರೂ ನಮ್ಮ ರಾಜಕೀಯ ಪಕ್ಷಗಳ ತಪ್ಪಿನಿಂದ ಇದು ಆಗಿದೆ ಮತದಾರರ ತಪ್ಪಲ್ಲ. ಅವನು ಸೂಕ್ತವಾದ ಸಮಯದಲ್ಲಿ ಸೂಕ್ತ ನಿರ್ಣಯ ತೆಗೆದುಕೊಂಡಿದ್ದಾನೆ. ನೀವು ದ್ರೋಹ ಮಾಡಿ ಜನರ ಹಿತ ಮರೆತು ಒಂದು ರೀತಿ ಕೈಗಾರಿಕೆಗಳ ಏಜೆಂಟರಾಗಿ ವರ್ತನೆ ಮಾಡಿ ಅವನ ಬದುಕಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಕೊಡದೆ ಇರುವುದರಿಂದ ಕಾಂಗ್ರೆಸ್ಸಿಗೆ ಈ ದುಸ್ಥಿತಿ ಬಂದಿದೆ. ಅದೇ ದಾರಿಯನ್ನು ಹಿಡಿದ ಜನತಾದಳ ಇಂದು ನೆಲಕಚ್ಚಿದೆ ಎನ್ನುವುದು ನಿಮಗೆ ಇನ್ನು ಜ್ಞಾನೋದಯವಾಗಿಲ್ಲ ಎನ್ನುವ ಸಂಗತಿಯನ್ನು ಅರಿತು ನನಗೆ ದುಃಖವಾಗುತ್ತದೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್‌ನವರನ್ನು ಜನರು ರಿಜೆಕ್ಟ್ ಮಾಡಿದ್ದಾರೆ ಎಂದು ಹೇಳಿದ್ದಿರಲ್ಲ, ಅದು ಸುಳ್ಳು, ಜನ ಈ ರಾಜ್ಯದಲ್ಲಿಯು ರಿಜೆಕ್ಟ್ ಮಾಡಿಲ್ಲ, ಈ ರಾಷ್ಟ್ರದಲ್ಲಿಯು ರಿಜೆಕ್ಟ್ ಮಾಡಿಲ್ಲ. ಹಿಂದಿನ ಚುನಾವಣೆಯಲ್ಲಿ ನಾವು ಎಷ್ಟು ಸೀಟು ಗೆದ್ದಿದ್ದೆವು ಅವಕ್ಕಿಂತ ಹೆಚ್ಚು ಈಗ ಈ ರಾಜ್ಯದಲ್ಲಿ ಈ ರಾಷ್ಟ್ರದಲ್ಲಿ ಗೆದ್ದಿದ್ದೇವೆ. ಇನ್ನು ಈ 16 ಅಂಕಿ ಮತ್ತು 3 ಅಂಕಿಗೆ ಬಹಳ ಸಂಬಂಧವಿದೆ, ಹೋದ ಸಾರಿ 16 ಸ್ಥಾನಗಳಲ್ಲಿ ಏನು ಜೆಡಿಯವರು ಬಂದಿದ್ದರು, ಈಗ 3 ಸ್ಥಾನಗಳಲ್ಲಿ ಬಂದಿದ್ದಾರೆ. ಈಗ ನೀವು ಮತ್ತು ಮೈತ್ರಿಕೊಟ್ಟದವರು ಸೇರಿ ಏನು 16 ಸ್ಥಾನಗಳಲ್ಲಿ ಬಂದಿದ್ದೀರಿ, ಮುಂದಿನ ಸಾರಿ ನೀವು 3 ಸ್ಥಾನಕ್ಕೆ ಇಳಿಯುತ್ತೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಜನರ ತೀರ್ಪಿನಲ್ಲಿ 3 ಸ್ಥಾನಗಳಾದರೂ ಸರಿ, ಒಂದಾದರೂ ಸರಿ. ದುಃಖ ತರುವಂತಹ ಒಂದು ಮಾತನ್ನು ಹೇಳುತ್ತೇನೆ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆಡಳಿತ ಪಕ್ಷವಾಗಲಿ, ವಿರೋಧ ಪಕ್ಷವಾಗಲಿ ಒಂದು ದೇಹದ ಎರಡು ಕಣ್ಣುಗಳು ಇದ್ದಹಾಗೆ, ಇಲ್ಲಿ ನಮ್ಮ ಮೇಲೆ ಬಹಳ ಜವಾಬ್ದಾರಿ ಇದೆ. ಅವನ ತೀರ್ಪಿಗೆ ಮನ್ನಣೆ ಕೊಟ್ಟು ಇಷ್ಟು ವರ್ಷ ವಿರೋಧ ಪಕ್ಷದಲ್ಲಿದ್ದೆವು. ಮಾನ್ಯ ಖರ್ಗೆಯವರು ಮಾತನಾಡುವಾಗ ಏನು ಉತ್ತರ ಕೊಡಲಿಲ್ಲ ಏಕೆ ಸನ್ಮಾನ್ಯ ದೇವೇಗೌಡರ ಬೆಂಬಲವನ್ನು ವಾಪಸ್ಸು ತೆಗೆದುಕೊಂಡರು ಎಂದು ಹೇಳಲಿಲ್ಲ. ಏಕೆ ಐ.ಕೆ.ಗುಜ್ರಾಲ್‌ರ ಬೆಂಬಲ ವಾಪಸ್ಸು ತೆಗೆದುಕೊಂಡಿರಿ, ಒಂದೂವರೆ ವರ್ಷದಲ್ಲಿ ಮೂರು ಜನ ಪ್ರಧಾನಿಗಳನ್ನು ನೋಡುವ ಹಾಗೆ ಮಾಡಿ ಸಾವರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಚುನಾವಣೆ ತರಲು ಏನು ಕಾರಣ? ನಿಮ್ಮ ಸ್ವಾರ್ಥಕ್ಕೆ ಯಾವುದೊ ಒಂದು ಜೈನ್ ಆಯೋಗದ ವರದಿಯನ್ನು ನೆಪಮಾಡಿಕೊಂಡು ಈ ಚುನಾವಣೆ ಬರುವ ಹಾಗೆ ಮಾಡಿದ್ದಿರಿ, ಮತ್ತೆ ಆಶ್ಚರ್ಯ ಎಂದರೆ ತಮ್ಮ ಅಜೆಂಡಾದಿಂದ ಬಿಜೆಪಿಯನ್ನು ದೂರವಿಡುವುದು. ಈಗ ಜನತಾದಳ ಮತ್ತು ಕಾಂಗ್ರೆಸ್‌ನವರು ಸಂಬಂಧ ಮಾಡಲು ಹೊರಟ್ಟಿದ್ದೀರಿ. ನೀವು ಇದರಿಂದ ಪ್ರಜಾ ತಂತ್ರ ವ್ಯವಸ್ಥೆಗೆ ಮಾಡುವ ದ್ರೋಹದ ಬಗ್ಗೆ ಅರಿವು ಇದೆಯಾ ನಿಮಗೆ. ಬಿಜೆಪಿ ಏನು ಅನ್ಯಾಯ ಮಾಡಿದೆ ಸ್ವಾತಂತ್ರ್ಯ ಬಂದ 50 ವರ್ಷದಿಂದ ನಮ್ಮ ಮೇಲೆ ಏನೆಲ್ಲಾ ಅಪಪ್ರಚಾರ ಮಾಡಿದ್ದೀರಿ. ಈ ಎಲ್ಲ ಅಪಪ್ರಚಾರಕ್ಕೆ ಉತ್ತರವಾಗಿ ಭಾರತ ಜನತಾ ಪಕ್ಷದ ನಾಯಕರಾದ ಶ್ರೀ ಅಟಲ್ ಬಿಹಾರಿ ವಾಜಪೇಯವರು 15ನೇ ತಾರೀಖಿನಂದು ಪ್ರಧಾನಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಮೇಲೆ, ನೀವು ಇದೇ ಮನೆಯಲ್ಲಿ ನಿಂತು ಹೇಳಬೇಕು. ಪ್ರಧಾನಿ ಎಂದರೆ ಅಟಲ್ ಬಿಹಾರಿ ವಾಜಪೇಯಿಯವರ ಹಾಗೆ ಇರಬೇಕು ಎಂದು. ಈ ಮಾತನ್ನು ಕಾಂಗ್ರೆಸ್‌ನವರ ಬಾಯಿಯಿಂದ ಬರುವ ಹಾಗೆ ಆಡಳಿತ ನಡೆಸುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಿಮಗೆ ಜನರು 16 ಸ್ಥಾನಗಳನ್ನು ಕೊಟ್ಟಿದ್ದಾರೆ. ಈಗ ಸಂತೋಷದಲ್ಲಿ ಇದ್ದೀರಿ. ನಿಮಗೆ ಮಾತನಾಡಲು ಅವಕಾಶ ಇದೆ, ನೀವು ಈ ರೀತಿ ಮಾತನಾಡುವುದು ಸ್ವಾಭಾವಿಕವೇ, ಮಾತನಾಡಿ, ಆದರೆ

ಮಾತನಾಡುವಾಗ ಒಂದು ವಿಚಾರವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ನೀವು 18 ಪಾರ್ಟಿಗಳ ಜೊತೆ ಅಲೆಯೆನ್ಸ್ ಮಾಡಿಕೊಂಡಿದ್ದೀರಿ, ಅವರ ಬಗ್ಗೆ ಏನೇನು ಇದೆ, ಅವರ ಮೇಲೆ ಯಾವ ಆಪಾದನೆಗಳು ಇದ್ದವು; ಅವರ ಗತಿ ಏನು, ಎನ್ನುವುದನ್ನು ಮೊದಲನೆಯದಾಗಿ ಗಮನದಲ್ಲಿ ಇಟ್ಟುಕೊಳ್ಳಬೇಕು. ಎರಡನೆಯದಾಗಿ ಭಾರತ ಜನತಾ ಪಕ್ಷ ಮತ್ತು ಅದರ ಹಿಂದೆ ಇರತಕ್ಕಂತಹ ಸಂಸ್ಥೆಗಳು ಯಾವ ವಿಚಾರಗಳನ್ನು ಇಟ್ಟುಕೊಂಡು ಬಂದಿದ್ದೀರಿ, ಅವುಗಳನ್ನು ಈಡೇರಿಸತಕ್ಕ ಸ್ಥಿತಿಯಲ್ಲಿ ನೀವು ಇದ್ದೀರಾ. ಅದು ವಾಸ್ತವಿಕವಾಗಿ ಆಗುವುದಿಲ್ಲ. ಸ್ವಾತಂತ್ರ್ಯ ಬಂದ 50ನೇ ವರ್ಷದಲ್ಲಿ ಜನ ಒಂದು ತೀರ್ಮಾನ ಕೊಟ್ಟಿದ್ದಾರೆ, ನಮ್ಮದು ತಪ್ಪು ಇರಬಹುದು, ಅವರದು ತಪ್ಪು ಇರಬಹುದು ಅದನ್ನು ಮರೆತು ಈ ದೇಶವನ್ನು ಕಟ್ಟುವುದು ಹೇಗೆ ಎನ್ನುವುದನ್ನು ಯೋಚನೆ ಮಾಡುವುದನ್ನು ಬಿಟ್ಟು ಈ ರೀತಿ ನೀವು ಮಾತನಾಡಿದರೆ ಇನ್ನು ಆರು ತಿಂಗಳು ಆದಮೇಲೆ ನೀವು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೀರಿ ಎಂದು ನಾನು ನಿಮ್ಮ ಸ್ನೇಹಿತನಾಗಿ ಹೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಈ ಚುನಾವಣೆಯಲ್ಲಿ ಬಿಜೆಪಿಗೆ ಜನ ಬಹುಮತ ಕೊಟ್ಟಿದ್ದಾರೆ ಅದನ್ನು ಒಪ್ಪುತ್ತೇವೆ. ಆದರೆ ಇವರು ಚುನಾವಣೆ ಪ್ರಚಾರಕ್ಕೆ ಹೋದಾಗ ಜನರಿಗೆ ಕೇಳಿದ್ದು ಏನು ಎಂದರೆ ಈ ಒಂದು ಸಾರಿ ವಾಜ್‌ಪೇಯಿಯವರಿಗೆ ಅವಕಾಶ ಕೊಡಿ ಎಂದು ಕೇಳಿದ್ದಾರೆ. ಈ ಒಂದು ಸಾರಿ ಕೊಟ್ಟಿದ್ದಾರೆ, ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ನೀವು ಎಷ್ಟು ದಿವಸ ಉಳಿಯುತ್ತೀರಿ, ಅಧಿಕಾರ ಮಾಡುತ್ತೀರಿ ಎಂದು ನೋಡಬೇಕಾಗುತ್ತದೆ. ಈ ಒಂದು ಸಾರಿ ಕೊಟ್ಟಿದ್ದಾರೆ ಮುಂದೆ ಇಲ್ಲ.

ಶ್ರೀ ಎನ್.ರಾಜಣ್ಣ: ಒಂದು ಬಾರಿ, ಈ ಬಾರಿ, ಮತ್ತು ಇದು ಕೊನೇ ಬಾರಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದು ಒಂದು ಬಾರಿ, ಇದು ಕೊನೆ ಬಾರಿ, ನೀವು ಆಡಳಿತ ಉಳಿಸಿಕೊಳ್ಳಲು ಏನೇನು ಮಾಡಿದ್ದೀರಿ ಅದನ್ನು ಮಾಡದೆ, ಮತ್ತೆ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುತ್ತೇವೆ.

ಶ್ರೀ ಎಮ್.ಆರ್.ಶಿವರಾಮೇಗೌಡ: ಈಗ ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿ ಏನು ಮಾಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವರು ಯಾರು ಅಡ್ರೆಸ್ ಇಲ್ಲದೆ ಇರುವವರು ಏತಕ್ಕೆ ರಾಜಸ್ಥಾನದ ಬಗ್ಗೆ ಮಾತನಾಡುತ್ತಿದ್ದಾರೆ? ಅವರು ಎಲ್ಲೋ ಇದ್ದುಕೊಂಡು ಯಾರದ್ದೋ ಕೈ-ಕಾಲು ಹಿಡಿದುಕೊಂಡು ಬದುಕುವವರು ಅವರು, ಅವರ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ಎಲ್.ಆರ್.ಶಿವರಾಮೇಗೌಡ: ಈ ಸಭೆಯಲ್ಲಿ ನಾನು ಒಬ್ಬ ಗೌರವಾನ್ವಿತ ಸದಸ್ಯ.

ಅಧ್ಯಕ್ಷರು: ಅವರು ನಿಮಗೆ ಹೇಳುತ್ತಾ ಇಲ್ಲ.

ಶ್ರೀ ಎಸ್.ಸುರೇಶ್‌ಕುಮಾರಲ್: ಶಿವರಾಮೇಗೌಡರು ಈ ಸಭೆಯಲ್ಲಿ ಗೌರವಾನ್ವಿತ ಸದಸ್ಯರು ಎಂದು ಒಪ್ಪಿಕೊಳ್ಳುತ್ತಾ ಅದಕ್ಕಿಂತ ಹೆಚ್ಚಾಗಿ ದತ್ತು ಮಗ ಎನ್ನುವುದನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರು ಹೇಳಿದ್ದು ಮಹತ್ವದ ಮುಂದಾಲೋಚನೆಯ ಮಾತು, ಅವರು ಸ್ವಲ್ಪ ಮುಂದಾಲೋಚನೆ ಮಾಡುವುದು ಜಾಸ್ತಿ.

ಶ್ರೀ ಶಿವಾನಂದಪಾಟೀಲ್: ಇದುವರೆಗೆ ನಾವು ಜನತಾದಳದವರು ಕಾಂಗ್ರೆಸ್‌ನವರಿಗೆ ಸಪೋರ್ಟ್ ಮಾಡಿದ್ದಾರೆ ಎಂದು ಶ್ರೀ ಬಿ.ಎಸ್.ಯಡಿಯೂರಪ್ಪನವರು ಹೇಳಿದರು. ಆದರೆ ಬಿಜಾಪುರದಲ್ಲಿ ಏನು ಮಾಡಿದ್ದಾರೆಂದು ಸ್ವಲ್ಪ ಆತ್ಮಾವಲೋಕನೆ ಮಾಡಿಕೊಳ್ಳಲಿ. ಅಲ್ಲಿ ನೀವು ಯಾರಿಗೆ ಸಪೋರ್ಟ್ ಮಾಡಿದ್ದೀರಿ ಎಂದು ಹೇಳಿ ನೋಡೋಣ.

ಶ್ರೀ ಬಿ.ಎಸ್.ಯಡಿಯರೂರಪ್ಪ: ಈ ದೇಶದಲ್ಲಿ ಹಿರಿಯ ಸಚಿವರಾದ ಸನ್ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಹೇಳಿದಂತೆ ಅಜೀರ್ಣವಾಗುವಂಥ ಬಹುಮತವನ್ನು ಜನ ಕೊಟ್ಟರು. ಅಧಿಕಾರದಲ್ಲೂ ಸ್ಥಿರ ಸರ್ಕಾರ ಎಂದು ಹೇಳಿ ಕಾಂಗ್ರೆಸ್ಸಿನವರು ಪೂರ್ಣವಾಗಿ ಐದು ವರ್ಷಗಳ ಅವಧಿಯನ್ನು ಪ್ರಾರಂಭದಿಂದ ಅಂದರೆ 40-42ವರ್ಷದಿಂದ ಆಡಳಿತವನ್ನು ನಡೆಸಿದರು. ಸ್ಥಿರವಾಗಿ ಕಾಂಗ್ರೆಸ್ ಇದೆ ಹೊರತು ಜನರ ಹಿತ ಸಾಧನೆಯಾಗಲಿಲ್ಲ. ಜನರು ನೆಮ್ಮದಿಯಿಂದ ಬದುಕುವ ಕಡೆಗೆ ಚಿಂತನೆ ಮಾಡಲಿಲ್ಲ. ಇದರ ಪರಿಣಾಮವಾಗಿ ಸ್ವಾತಂತ್ರ್ಯ ಬಂದು 50 ವರ್ಷಗಳ ನಂತರ ಜನ ಈ ಕಾಂಗ್ರೆಸ್ಸಿನ, ಜನತಾ ದಳದ, ಯು.ಎಫ್.ಆಡಳಿತ ವೈಖರಿಯಿಂದ ಬೇಸತ್ತು ಬದಲಾವಣೆಗೆ ಮುಂದೆ ಬಂದಿದ್ದಾರೆ. ಈ ಸಮಯದಲ್ಲಿ ನೀವು ಹೇಳಿದ ಹಾಗೆ ನಮ್ಮ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ, ಬಹಳ ದೊಡ್ಡ ಭಾರ ಇದೆ. ನಮಗೇನಾದರೂ ಪೂರ್ಣ ಬಹುಮತ ಬಂದಿದ್ದರೆ ನಾವು ನಿಶ್ಚಿಂತತೆಯಿಂದ ಚುನಾವಣಾ ಸಮಯದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನ್ನೆಲ್ಲಾ ಕಾರ್ಯರೂಪಕ್ಕೆ ತರುತ್ತಿದ್ದವು. ನಂತರ ಜನ ನಮ್ಮನ್ನು ಆಯ್ಕೆ ಮಾಡುತ್ತಿದ್ದರೋ ಬಿಡುತ್ತಿದ್ದರೋ ಒಂದು ಬಾರಿ ಬಿ.ಜೆ.ಪಿ.ಯವರಿಗೆ, ಒಂದು ಬಾರಿ ಅಟಲ್ ಬಿಹಾರಿ ವಾಜಪೇಯಿಯವರಿಗೆ ಎಂದು ಹೇಳಿದ್ದರ ಬಗ್ಗೆ ದೇಶದ 95ಕೋಟಿ ಜನರಿಗೆ ತೀರ್ಮಾನವನ್ನು ಬಿಡುತ್ತಿದ್ದವು. ತೀರ್ಮಾನ ಜನತೆಗೆ ಬಿಟ್ಟದ್ದು, ಅದರಲ್ಲಿ ನಮ್ಮದೇನು ಅಭ್ಯಂತರ ಇಲ್ಲ. ಆದರೆ ನೀವು ಹೇಳಿದಂತೆ ಬಹುಮತ ನಮಗೆ ಇಲ್ಲ. ಚುನಾವಣೆ ಪೂರ್ವ ಹೊಂದಾಣಿಕೆ ಮಾಡಿಕೊಂಡಿದ್ದರೂ ಸಹಿತ ಮತ್ತೆ ಸ್ವಲ್ಪ ಬಹುಮತ ಕಡಿಮೆ ಇರುವುದರಿಂದ ಮತ್ತೆ ಚುನಾವಣೆಗೆ ಹೋಗುವಂಥ ದುಸ್ಥಿತಿಗೆ ಬಂದಿದೆ. ನಾನು ಕೂಡ ದೆಹಲಿಗೆ ಹೋಗಿದ್ದೆ. ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರು, ಅದ್ವಾನಿಯವರು ಮತ್ತು ಇನ್ನು ಅನೇಕ ಹಿರಿಯ ನಾಯಕರು ಇವೊತ್ತು ಬೇಸರ ಮಾಡಿಕೊಂಡು ನಾವು ಆಡಳಿತ ನಡೆಸಬೇಕೋ ಅಥವಾ ಗೌರವದಿಂದ

ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳಬೇಕೋ ಎಂದು ಯೋಚನೆ ಮಾಡುತ್ತಿದ್ದರು. ಆದರೆ ಬೇರೆ ಯಾರು ಇಂದು ನಾವು ಸರ್ಕಾರ ಮಾಡುತ್ತೇವೆ ಎಂದು ಮುಂದೆ ಬರದೇ ಇರುವಂಥ ಪರಿಸ್ಥಿತಿ ಬಂದಿರುವುದರಿಂದ ಇಂತಹ ಸಮಯದಲ್ಲಿ ನಾವು ಅನಿವಾರ್ಯವಾಗಿ ದೇಶದ ಮತದಾರ ಏನು ಮ್ಯಾಂಡೇಟ್ ಕೊಟ್ಟಿದ್ದಾರೆ, ಅದಕ್ಕೆ ತಲೆ ಬಾಗಬೇಕು ಹಾಗೂ ಗೌರವದಿಂದ ಆಡಳಿತ ನಡೆಸಬೇಕು ಎಂದು ಮುಂದೆ ಹೋಗಿದ್ದೇವೆ. ನೀವು ಹೇಳಬಹುದು ಆರ್ಟಿಕಲ್ 370ನ್ನು ರದ್ದು ಮಾಡುವುದಕ್ಕೆ ಆಗುವುದಿಲ್ಲ. ನಾನು ಒಪ್ಪುತ್ತೇನೆ. ಅದು ಅಷ್ಟೇ ಅಲ್ಲ ಇನ್ನೂ ಅನೇಕ ಪ್ರಮುಖವಾದ ಅಂಶಗಳನ್ನು ನಾವು ಕಾರ್ಯರೂಪಕ್ಕೆ ತರುವುದಕ್ಕೆ ಆಗುವುದಿಲ್ಲ. ಕೆಲವರು ರಾಮ ಮಂದಿರವನ್ನು ಕಟ್ಟುತ್ತೀರಾ ಎಂದು ಕೇಳುತ್ತಾರೆ, ರಾಮ ಮಂದಿರ ಕಟ್ಟಿ ಆಗಿದೆ, ಅಲ್ಲಿ ಒಂದು ಭವ್ಯವಾದ ಮಂದಿರ ನಿರ್ಮಾಣ ಆಗಬೇಕಾಗಿದೆ ಅಷ್ಟೇನೇ. ನಿಧಾನವಾಗಿ ಆಗಲಿ ಬಿಡಿ. ಅರ್ಜೆಂಟ್ ಏನು? ಆದರೆ ನಮ್ಮ ಮುಖ್ಯವಾದ ದೃಷ್ಟಿ ಏನು ಎಂದರೆ ನಮ್ಮ ದೇಶದ ರೈತ, ನಮಗೆ ಅನ್ನ ನೀಡುವಂಥ ರೈತ ಏನು ಇದ್ದಾನೆ ಅವರ ಕೈಗೆ ಕೆಲಸ, ಅವನ ಹೊಲಕ್ಕೆ ನೀರು, ಅವನಿಗೆ ಬಿತ್ತನೆಗೆ ಬೇಕಾದಂಥ ಉತ್ತಮವಾದ ಬೀಜ, ಅವನಿಗೆ ಸರಿಯಾದಂಥ ಶಿಕ್ಷಣ ಇವುಗಳೆಲ್ಲ ದೊರಕುವಂಥ ಕೆಲಸ ಆಗಬೇಕು. ಬಹುಶಃ ನೀವು ನಮ್ಮ ಚುನಾವಣಾ ಪ್ರಣಾಳಿಕೆಯನ್ನು ನೋಡಿಲ್ಲ ಅನಿಸುತ್ತೆ, ಇದೊಂದು ಭಗವದ್ಗೀತೆ ಇದ್ದ ಹಾಗೆ ಇದೆ. ಸಿಂಧ್ಯರವರೇ ಇದನ್ನು ಸ್ವಲ್ಪ ಅಭ್ಯಾಸ ಮಾಡಿ. ಅದನ್ನೆಲ್ಲ ನಾವು ಕಾರ್ಯರೂಪಕ್ಕೆ ತರುತ್ತೇವೆ. ನಾನು ಅಟಲ್ ಬಿಹಾರಿ ವಾಜಪೇಯಿಯವರ ಹತ್ತಿರ ಮಾತನಾಡಿದ್ದೇನೆ. ಇವೊತ್ತು ನಮಗೆ ಬಹುಮತ ಇಲ್ಲದೇ ಇರುವಂಥ ಕಾಲದಲ್ಲಿ, ನಮ್ಮ ತೀರ್ಮಾನಗಳು ಏನು ಇವೆ, ಪ್ರಮುಖವಾದಂಥ ತೀರ್ಮಾನಗಳ ಫೈಲಗಳು ಪ್ರತಿಪಕ್ಷದ ಮುಖಂಡರುಗಳಿಗೆ ನಾವು ಎಲ್ಲ ಫೈಲ್‌ಗಳನ್ನು ತೋರಿಸುವುದಕ್ಕೆ ಸಿದ್ಧ ಇದ್ದೇವೆ. ನಮ್ಮಲ್ಲಿ ಪಾರದರ್ಶಕತೆ ಇದೆ. ಯಾವುದೇ ಒಬ್ಬ ಕೋಟ್ಯಾಧಿಪತಿಯ ಪರವಾಗಿ ನಾವು ಆಡಳಿತ ನಡೆಸುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು: ನೀವು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ನೀವು ಪ್ರತಿಜ್ಞಾ ವಿಧಿ ಸ್ವೀಕಾರ ಮಾಡುವಾಗ ಅಫಿಶಿಯಲ್ಸ್ ಸೀಕ್ರೆಟ್ ಆ್ಯಕ್ಟ್ ಕೆಳಗೆ ನಾನು ನನ್ನ ಗಮನಕ್ಕೆ ಬಂದಂಥ ಯಾವುದನ್ನೂ ಹೊರಗಡೆ ಇಡುವುದಿಲ್ಲ ಎಂದು ಹೇಳಿರುತ್ತೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಅಲ್ಲಿ ಕುಳಿತುಕೊಂಡಾಗ ತಮ್ಮ ಸಲಹೆ ಕೇಳಲಿಕ್ಕೆ ಬರುತ್ತೇನೆ.

ಅಧ್ಯಕ್ಷರು: ಅಂದರೆ ಆಗಲೂ ನಾನು ಇಲ್ಲೇ ಕುಳಿತಿರಬೇಕೇ?

ಶ್ರೀ ಬಿ.ಎಸ್‌ಯಡಿಯೂರಪ್ಪ: ನಿಶ್ಚಿತವಾಗಿ ಅದರಲ್ಲಿ ಏನೂ ಅನುಮಾನವಿಲ್ಲ. ನೀವು ಎಲ್ಲಿದ್ದರೂ ನಾವು ನಿಮ್ಮನ್ನು ಕರೆದುಕೊಂಡು ಬಂದು ಅಲ್ಲಿ ಕೂಡಿಸುತ್ತೇವೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಅಧ್ಯಕ್ಷರೆ, ನೀವು ಮನಸ್ಸು ಮಾಡಿದರೆ ಒಂದು ಬದಲಾವಣೆ ಆಗಬಹುದು. ನೀವು ಅವರ ಪಕ್ಕದಲ್ಲಿ ಕುಳಿತುಕೊಳ್ಳಬಹುದು.

ಅಧ್ಯಕ್ಷರು: ಇಲ್ಲ, ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಹೇಳಿದ ಹಾಗೆ ನಮ್ಮ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ನಮ್ಮ ನಾಯಕರು ಅಲ್ಲಿ ರಾತ್ರಿ ಹಗಲು ನಿದ್ದೆ ಮಾಡುತ್ತಿಲ್ಲ. ಒಂದು ವಿಚಿತ್ರವಾದ ಪರಿಸ್ಥಿತಿ ಇದೆ. ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲದೇ ಇರುವಂಥ ಒಂದು ಪರಿಸ್ಥಿತಿ ಇದೆ. ಆದರೆ ನಾವು ಮಾಡಬೇಕಾಗಿರುವುದು ದೇಶ ಸೇವೆ. ಅದನ್ನು ಮಾಡುತ್ತೇವೆ. ನನಗೆ ಆಶ್ಚರ್ಯ ಎಂದರೆ ನಮ್ಮ ಕಾಂಗ್ರೆಸ್ ಸ್ನೇಹಿತರು ಮಾನ್ಯ ದೇವೇಗೌಡರು ಪ್ರಧಾನಿಯಾದಾಗ ಸರ್ಕಾರ ನಡೆಸಲು ಬಿಡಲಿಲ್ಲ, ಮಾನ್ಯ ಐ.ಕೆ.ಗುಜ್ರಾಲ್‌ರವರು ಪ್ರಧಾನಿಯಾದಾಗ ಸರ್ಕಾರ ಮಾಡಲು ಬಿಡಲಿಲ್ಲ. ಒಂದು ಸಾರಿಯಾದರೂ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಲು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ: ಅದಕ್ಕಾಗಿ ಈಗ ಅವಕಾಶ ಜನ ಕೊಟ್ಟಿದ್ದಾರೆ. ಅವರು ಸಂಪೂರ್ಣವಾದ ವಿಶ್ವಾಸವನ್ನು ವ್ಯಕ್ತಪಡಿಸಿಲ್ಲ. ಬಹುಮತ ಇಲ್ಲ. ಅದಕ್ಕಾಗಿ ನಾವು ಸುಮ್ಮನೆ ಇದ್ದೇವೆ. ನಿಮಗೆ ಅವಕಾಶ ಮಾಡಿಕೊಟ್ಟಿದ್ದೇವೆ. ನೀವು ಎಷ್ಟು ದಿವಸ ಇರುತ್ತೀರಿ ಎನ್ನತಕ್ಕಂಥದ್ದನ್ನು ನಾವು ನೋಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಎಷ್ಟು ದಿವಸ ಕಾಲು ಎಳೆಯದೆ ಇರುತ್ತೀರೋ ಅಷ್ಟು ದಿವಸ ನಾವು ಇರುತ್ತೇವೆ. ನಿಮಗಂತೂ ಮಾಡುವ ಯೋಗ್ಯತೆ ಇಲ್ಲ ನಮಗೂ ಸರ್ಕಾರ ಮಾಡಲು ಬಿಡಲಿಲ್ಲ ಎಂದರೆ ನೀವು ಅಡ್ರೆಸ್ ಇಲ್ಲದ ಹಾಗೆ ಹೋಗುತ್ತೀರಿ. ನಾವು ಏನು ಮಾಡುವುದಕ್ಕಾಗುತ್ತದೆ. ಆದರೆ ಒಂದು ಮಾತನ್ನು ಈ ಸದನದ ಮೂಲಕ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಎರಡು ಬಾರಿ ನಮ್ಮ ಸರ್ಕಾರ ಬೇಕಾದರೆ ವಜಾ ಮಾಡಲಿ ಎಂದು ಹೇಳಿದ್ದಾರೆ. ನಾವು ಯಾವಾಗಲೂ ಅಧಿಕಾರ ಬಿಟ್ಟು ಹೋಗುವುದಕ್ಕೆ ತಯಾರಿದ್ದೇವೆ ಹೊರತು ಅನಗತ್ಯವಾಗಿ ಆರ್ಟಿಕಲ್ 356ನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲ. ನಾನು ಈ ಮಾತನ್ನು ನಮ್ಮ ಹಿರಿಯ ನಾಯಕರ ಜೊತೆಗೆ ಡಿಸ್‌ಕಸ್ ಮಾಡಿಯೇ ಹೇಳುತ್ತಿದ್ದೇನೆ. ಅವರು ಮಾಡಿದಂಥ ರಾಜಕಾರಣವನ್ನು ಮಾಡುವುದಾದರೆ ಜನ ನಮ್ಮನ್ನೇಕೆ ಕಳುಹಿಸುತ್ತಿದ್ದರು. ಉತ್ತರ ಪ್ರದೇಶದಲ್ಲಿ ನೀವು ಮಾಡಲಿಲ್ಲವೇ? ಆ ಕೆಲಸ ಮಾಡಬೇಕಾದರೆ ನಾವು ಏಕೆ ಅಲ್ಲಿ ಹೋಗಬೇಕಾಗಿತ್ತು. ಏನ್ರಿ ಯಡಿಯೂರಪ್ಪನವರೆ ಉತ್ತರ ಪ್ರದೇಶದಲ್ಲಿ ನಿಮ್ಮದು ಯಾವ ರೀತಿ ಹೊಂದಾಣಿಕೆ ಎಂದು. ಹೌದು.

SRI P.G.R.SINDHIA: I am very proud to say that my Chief Minister was the only Chief Minister who said that

what was done in U.P.was wrong. I am proud about that.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಮುಖ್ಯಮಂತ್ರಿಗಳು ಕೆಲವು ಸಾರಿ ಒಳ್ಳೆಯ ಮಾತನಾಡುತ್ತಾರೆ. ಆ ರೀತಿ ಹೇಳಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇಷ್ಟೆಲ್ಲ ಗೌರವಯುತವಾಗಿ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು, ಮ್ಯಾನ್‌ಡೇಟ್ ನೋಡಿಕೊಂಡು ನೀವೆಲ್ಲ, ಒಳ್ಳೆಯ ಸಲಹೆ ಕೊಡಿ, ಇಷ್ಟು ವರ್ಷ ಮುಖ್ಯಮಂತ್ರಿಗಳಾಗಿದ್ದೀರಿ ಖಾಲಿ ಮಾಡಿಯಪ್ಪ, ಜನ ಹೇಳಿದ್ದಾರೆ ನಾವು ಬಂದು ಕುಳಿತುಕೊಳ್ಳಲು ಅವಕಾಶ ಮಾಡಿಕೊಡಿ. ಇದನ್ನೆಲ್ಲ ನೀವು ಏತಕ್ಕೆ ಹೇಳುವುದಿಲ್ಲ. ನಮಗೆ ಅದೇ ದುಃಖ ಆಗಿರುವುದು. ಮಾನ್ಯ ಅಧ್ಯಕ್ಷರೆ ಮಾತನಾಡುತ್ತ ವಿಷಯಾಂತರ ಆಗಿಹೋಯಿತು. ನಾನೇನು ಹೇಳುತ್ತಿದ್ದೆ ಎಂದರೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಕೇಂದ್ರದಲ್ಲಿ ನಮ್ಮವರೇ ಆದ ಪ್ರಧಾನಿಯವರು ಇದ್ದಾಗ ಒಂದು ದೈವಿಕವಾದಂಥ ಅವಕಾಶ ಇತ್ತು. ಕಾವೇರಿಯ ಜ್ವಲಂತ ಸಮಸ್ಯೆಗೆ ನೀವು ಪರಿಹಾರ ಹುಡುಕುವುದಕ್ಕೆ ಹೋಗಲಿಲ್ಲ. ಅದನ್ನು ಉಲ್ಬಣಗೊಳಿಸಿದ್ದೀರಿ. ಮತ್ತೆ ಈ ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿ ತರುವಲ್ಲಿ ಅನಗತ್ಯವಾಗಿ ತಜ್ಞರ ಸಮಿತಿಯನ್ನು ರಚನೆ ಮಾಡಿ ಆ ಸಮಿತಿಗೆ ಕಾನೂನಿನ ಸ್ಥಾನ ಮಾನ ಕೊಡಲಿಕ್ಕೆ ಪ್ರಯತ್ನ ಮಾಡಿ ರಾಜ್ಯಕ್ಕೆ ಅವಮಾನ ಮಾಡಿದ್ದು ನಿಮ್ಮವರೆ ತಾನೆ. ಇನ್ನು ಕೊಜೆಂಟ್ರಿಕ್ಸ್ ಎಂದು ಕುಣಿದರಲ್ಲ. ರಾಜ್ಯದ ಇತರ ಜಲವಿದ್ಯುತ್ ಯೋಜನೆಗಳಿಗೆ ತ್ವರಿತ ಮಂಜೂರಾತಿ ನೀಡದೆ ಅವುಗಳನ್ನು ಮೂಲೆಗುಂಪು ಮಾಡಿದ್ದು ಯಾರು? ನೀವೇ ತಾನೆ? ನಿಮ್ಮದೆ ಕೇಂದ್ರ ಸರ್ಕಾರ ಇತ್ತು, ನಿಮ್ಮದೆ ರಾಜ್ಯ ಸರ್ಕಾರ ಇತ್ತು . ನಾವೇನು ಅಡ್ಡಿ ಮಾಡುವುದಕ್ಕೆ ಹೋಗಲಿಲ್ಲ. ನೀವು ಮಾಡಿದಂಥ ಅಪರಾಧ ಏನು ಎನ್ನುವಂಥ ವಿಷಯಕ್ಕೆ ನಾನು ನಂತರ ಬರುತ್ತೇನೆ. ಯಾವ ಮಟ್ಟಿಗೆ ನೀವು ಅಧಿಕಾರವನ್ನು ಉಳಿಸಿಕೊಳ್ಳುವುಕ್ಕೋಸ್ಕರ ಹೋಗಿದ್ದೀರಿ ಎಂದರೆ ಈ ಕೊಜೆಂಟ್ರಿಕ್ಸ್ ಬಗ್ಗೆ ಸಾಕಷ್ಟು ಗೊಂದಲವಾಗಿ ಹೈಕೋರ್ಟ್ ಇವೊತ್ತು ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಸಿ.ಬಿ.ಐ. ತನಿಖೆಯಾಗಬೇಕು, ವರ್ಷದಲ್ಲಿ ಪೂರ್ತಿಯಾಗಬೇಕು, ತಿಂಗಳಿಗೊಮ್ಮೆ ಸೀಲ್ಡ್ ಕವರ್‌ನಲ್ಲಿ ನೀವು ವರದಿಯನ್ನು ಕೊಡಬೇಕು ಎಂದು ಹೈಕೋರ್ಟ್ ಹೇಳಿದಾಗ ನಿಮ್ಮ ಮುಖ್ಯಮಂತ್ರಿಗಳು ಅದನ್ನು ಪ್ರಾಮಾಣಿಕವಾಗಿ ಸ್ವಾಗತ ಮಾಡಬೇಕಾಗಿತ್ತು. ಹೈಕೋರ್ಟ್‌ನವರು ಕೊಜೆಂಟ್ರಿಕ್ಸ್ ಯೋಜನೆಯನ್ನು ನಿಲ್ಲಿಸಬೇಕೆಂದು ಆದೇಶ ಕೊಟ್ಟಿರಲಿಲ್ಲ, ಹತ್ತಾರು ಕೋಟಿ ರೂಪಾಯಿಗಳ ದುರುಪಯೋಗ ಏನು ಆಗಿದೆ ಆ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕೆಂದು ಹೇಳಿತ್ತು. ಆದರೆ ಅದನ್ನು ಸ್ವಾಗತ ಮಾಡಬೇಕಾದಂಥ ಮುಖ್ಯಮಂತ್ರಿಯವರು ಸುಪ್ರೀಮ್ ಕೋರ್ಟಿಗೆ ಹೋಗುತ್ತೇವೆ ಎಂದು ಹೇಳಿದರು ಇದರ ಅರ್ಥ ಏನು? ಅಂದರೆ ಭ್ರಷ್ಟರನ್ನು ರಕ್ಷಣೆ ಮಾಡುವುದು ನಿಮ್ಮ ಸರ್ಕಾರದ ಕೆಲಸವೇನು?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಪ್ರಾವಿಜನ್ ಇದೆಯಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಪ್ರಾವಿಜನ್ ಇದೆ ಎಂದರೆ ಯಾವುದು? ಭ್ರಷ್ಟರನ್ನು ರಕ್ಷಣೆ ಮಾಡುವುದಕೋಸ್ಕರವೇ? ನಿಮ್ಮ ಬಾಯಿಯಿಂದ ನಾನು ಇದನ್ನು ನಿರೀಕ್ಷಿಸಿರಲಿಲ್ಲ. ಪ್ರಾವಿಜನ್ ಇದೆ ಎಂದರೆ ಯಾವುದಕ್ಕೆ? ಯಾವುದರ ಬಗ್ಗೆ ಹೈಕೋರ್ಟ್ ಡೈರೆಕ್ಷನ್ ಕೊಟ್ಟಿರುವಂಥದ್ದು

ಶ್ರೀ ಪಿ.ಜಿ.ಆರ್.ಸಿಂಧ್ಯ: ಅಪೀಲ್ ಹೋಗುವುದಕ್ಕೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಏತಕ್ಕೆ ಅಪೀಲ್ ಹೋಗುತ್ತಿದ್ದೀರಿ? ಭ್ರಷ್ಟಾಚಾರ ಹಗರಣಗಳ ಬಗ್ಗೆ ತಿಂಗಳಿಗೊಮ್ಮೆ ತನಿಖೆ ಮಾಡಿ, ಒಂದು ವರ್ಷದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ, ಆ ಭ್ರಷ್ಟರಿಗೆ ಶಿಕ್ಷೆ ಆಗಬೇಕು ಎನ್ನುವಂಥ ರೀತಿಯಲ್ಲಿ ನೀವು ಮಾಡಬೇಕು ಎಂದು ಹೈಕೋರ್ಟ್ ತೀರ್ಮಾನ ನೀಡಿರುವಂಥ ಕಾಲದಲ್ಲಿ ನೀವು ಅಧಿಕಾರದಲ್ಲಿ ಉಳಿಯುವದಕ್ಕೋಸ್ಕರ ಅವರಿಗೆ ರಕ್ಷಣೆ ಕೊಡುವುದಕ್ಕೆ ಮುಂದೆ ಹೊರಟಿದ್ದೀರಿ. ಈ ರೀತಿ ನೀವು ಮುಂದುವರಿಯಬಹುದೇ ಸ್ವಾಮಿ? ನೀವು ಅಧಿಕಾರ ಬಿಟ್ಟು ಹೋಗುತ್ತಿದ್ದೀರೆಂದು ಹೇಳಿ ಏನೆಲ್ಲ ಮಾಡುವುದಕ್ಕೆ ಹೋಗುತ್ತಿದ್ದೀರಿ? ಇತ್ತೀಚೆಗೆ ಒಂದು ಹೊಸ ಭ್ರಷ್ಟಾಚಾರ ನಡೆದಿದೆ. ಸರ್ಕಾರದ ಸಂಪತ್ತನ್ನು ಲೂಟಿ ಮಾಡುವಂಥ ಒಂದು ಹಗಲು ದರೋಡೆ ನಡದಿದೆ. ದಯವಿಟ್ಟು ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಿ. ಅದು ಯಾವುದು ಎಂದರೆ ಕೊಪ್ಪಳದಲ್ಲಿ ಅರಣ್ಯ ಇಲಾಖೆಗೆ ಸೇರಿದ ಒಂದು ಜಮೀನು ಇದೆ. ಅದು ನಮಗೆ ಬೇಕು ಎಂದು 28 ಜನ ಅರ್ಜಿಯನ್ನು ಹಾಕಿದ್ದಾರೆ. ಅವರು ರೂಲ್ 11ರ ಪ್ರಕಾರ ಅರ್ಜಿಯನ್ನು ಹಾಕಿದ್ದಾರೆ. ಅದನ್ನು ಪರಿಶೀಲನೆ ಮಾಡಲು ಮೂರು ಸದಸ್ಯರ ಒಂದು ಕಮಿಟಿಯನ್ನು ಮಾಡಲಾಗಿದೆ. ಅದರಲ್ಲಿ ಕಾರ್ಯದರ್ಶಿ ಗಣಿ ಮತ್ತು ಭೂ ವಿಜ್ಞಾನ, ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಕಾರ್ಯದರ್ಶಿ ಕಂದಾಯ ಇಲಾಖೆ ಈ ಮೂರು ಜನ ಆ ಕಮಿಟಿಯ ಸದಸ್ಯರು. ಅವರು ಆ ಜಮೀನು ಅರಣ್ಯ ಇಲಾಖೆಗೆ ಸೇರಿದ್ದು ಅದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ಅದನ್ನು ರಿಜೆಕ್ಟ್ ಮಾಡಿದರು. ಅರಣ್ಯ ಇಲಾಖೆಯ ಕಾರ್ಯದರ್ಶಿಯವರು ಕಂದಾಯ ಇಲಾಖೆಯ ಕಾರ್ಯದರ್ಶಿಯವರಿಗೆ ಆ ಜಾಗದಲ್ಲಿ ಬೆಲೆ ಬಾಳುವಂಥ ಪಚ್ಚೇ ಹರಳು ನಿಕ್ಷೇಪ ಇದೆ ಅದು ಸುಮಾರು ಮೂರರಿಂದ ನಾಲ್ಕು ಸಾವಿರ ಕೋಟಿ ರೂಪಾಯಿ ಬೆಲೆ ಬಾಳುತ್ತದೆ ಅದನ್ನು ಅರಣ್ಯ ಇಲಾಖೆಯಿಂದ ಡೀ ನೋಟಿಫೈ ಮಾಡಿ ಎಂದು ಹೇಳಿ ಪತ್ರವನ್ನು ಬರೆದಿದ್ದಾರೆ. ಇಷ್ಟೆಲ್ಲಾ ಆದರೂ ಈ ಸರ್ಕಾರ ಹೈದ್ರಾಬಾದಿನ ರೆಡ್ಡಿ ಎನ್ನುವಂಥವರಿಗೆ 136ಎಕರೆ ಜಮೀನನ್ನು ಮಂಜೂರು ಮಾಡಿಕೊಟ್ಟಿದೆ. ಅದು ಸುಳ್ಳೇನು? ನಾನು ಪ್ರೂವ್ ಮಾಡಿಕೊಟ್ಟರೆ ನೀವು ರಾಜೀನಾಮೆ ಕೊಟ್ಟು ಹೋಗುತ್ತೀರೇನು? ಇವೊತ್ತು ನಿಮ್ಮ ಅರಣ್ಯ ಇಲಾಖೆಯ ಕಾರ್ಯದರ್ಶಿಗಳು ಕಂದಾಯ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಅಲ್ಲಿ ಪಚ್ಚೇ ಹರಳು ನಿಕ್ಷೇಪ ಇದೆ ಅದನ್ನು ಫಾರೆಸ್ಟ್ ಇಲಾಖೆಯವತಿಯಿಂದ ಡೀ ನೋಟಿಫೈ ಮಾಡಿ ಎಂದು ಹೇಳಿದರೆ ನೀವು ಈ

28 ಜನರಲ್ಲಿರುವ ಶ್ರೀ ರೆಡ್ಡಿ ಎಂಬುವರಿಗೆ 136 ಎಕರೆ ಜಮೀನನ್ನು ಏತಕ್ಕೆ ಕೊಟ್ಟಿದ್ದೀರಿ? ಆ 28 ಜನ ಯಾರು ಎಂದು ಅವರ ಅಡ್ರೆಸ್ ಕೊಡುತ್ತೀರೇನು?

3.10 ಪಿ.ಎಂ

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸರ್ವೇ ನಂಬರ್ ಏನು?

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮ ಹತ್ತಿರವೇ ಇದೆಯಲ್ಲ ಹೇಳಿ. ಕರೆಕ್ಟಾಗಿ ಬರೆದುಕೊಳ್ಳಿ. ಸ್ವಾಮಿ ಏನು ನಡೆಸಿದ್ದೀರಿ ಎಂದು. ಅದಕ್ಕೋಸ್ಕರ ನೀವು ಏನು ಈಗ ಮಾಡುವುದಕ್ಕೆ ಹೊರಟ್ಟಿದ್ದೀರಿ, ಬಹುಶಃ ಇದು ಯಾವುದೇ ಕಾರಣಕ್ಕೆ ನಿಮಗೆ ಗೌರವ ತರುವುದಿಲ್ಲ. ನನಗೆ ಏನು ಭಯವೆಂದರೆ ಇವರು ಹೋಗುವಂತಹ ಸಂದರ್ಭದಲ್ಲಿ ಏನೇನು ಮಾಡಿ ಹೊರಟು ಹೋಗುತ್ತಾರೆ ಇನ್ನು ಬರುವಂತಹ ಕೆಲವೇ ದಿವಸದಲ್ಲಿ ಎಂದು. ಈ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅದನ್ನು ಕೊಟ್ಟಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸ್ವಾಮಿ ನಾನೆಲ್ಲಾ ವಿವರ ಕೊಡುತ್ತೇನೆ. ಆ ಅರ್ಜಿದಾರರ ವಿವರ ಕೊಡಿ. ಎಷ್ಟು ಎಕರೆ ಕೊಟ್ಟಿದ್ದೀರಿ ಎಂದು ವಿವರಗಳನ್ನು ಕೊಡುತ್ತೇನೆ. ಆಮೇಲೆ ಗೊತ್ತಾಗುತ್ತದೆ ಏನಂತ ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ರೀತಿಯ ಒಂದು ಜಮೀನು ಕೊಟ್ಟಿರತಕ್ಕಂಥಾದ್ದು, ನಾನು ರೆಕಾರ್ಡ್ಸ್‌ನಲ್ಲಿ ನೋಡಿದ್ದೇನೆ. ಸರ್ಕಾರ ಮಂಜೂರಾತಿ ಕೊಟ್ಟಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಸ್ಪಷ್ಟವಾಗಿ ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ. ನೀವೇ ಆ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದೀರಿ. ಬಹುಶಃ ಆಗ ನಿಮಗೆ ಅರ್ಥವಾಗುತ್ತದೆ, ಏನು ಎಂದು. ಅದನ್ನು ತನಿಖೆ ಮಾಡಿಸಿ. ಏನು ಮಾಡಿದ್ದೀರಿ? ಆ ರೆಡ್ಡಿ ಯಾರು? ಏಕೆ ಕೊಟ್ಟಿದ್ದೀರಿ? ಆಕಸ್ಮಾತ್ ಈ ಕೊನೆ ಗಳಿಗೆಯಲ್ಲಿ ಇದು ಬಹಿರಂಗವಾಗುತ್ತದೆ ಎಂದು ಏಕೆ ವಾಪಸ್ಸು ತೆಗೆದುಕೊಂಡಿದ್ದೀರಾ? ಇದು ಎಲ್ಲಾದರ ಬಗ್ಗೆ ತಾವು ಸಿ.ಬಿ.ಐ. ತನಿಖೆಗೆ ಒಳಪಡಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಯಡಿಯೂರಪ್ಪನವರು ಹೇಳುತ್ತಿರುವಂತಹ ವಿಚಾರದ ಬಗ್ಗೆ ಯಾವುದೇ ರೀತಿಯ ತನಿಖೆ ಮಾಡುವುದಕ್ಕೆ ಸರ್ಕಾರ ತಯಾರಿದೆ. ಯಾವ ಸಂದರ್ಭದಲ್ಲಿ ಕೂಡ ಮಾಡುತ್ತದೆ. ಏಕೆಂದರೆ ಇದು ಸರ್ಕಾರದ, ರಾಜ್ಯದ ಸಂಪತ್ತು. ನೀವು ಆಗಲಿ, ನಾವಾಗಲಿ, ಮತ್ತೊಬ್ಬರಾಗಲಿ ಲೂಟಿ ಮಾಡುವುದಕ್ಕೆ, ಅನ್ಯಾಯವಾಗಿ ಹೋಗುವುದಕ್ಕೆ ಅವಕಾಶ ಮಾಡಿಕೊಡಬಾರದು. ಅದಕ್ಕೆ ಸರ್ಕಾರ

ಸಿದ್ಧವಿದೆ. ಆದರೆ ಆ ರೀತಿಯ ಜಮೀನು ಎಲ್ಲೂ ಸಹ ಮಂಜೂರಾತಿ ಮಾಡಿಲ್ಲ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆ ಬೇರೆ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಹೌದು, ಅದಕ್ಕೆ ನಾನು ಸರ್ವೆ ನಂಬರ್ ಕೇಳಿದೆ. ಅದೇ ಇರಬಹುದೋ ಅಥವಾ ಬೇರೆಯದೊ ಎಂದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅದೇ, ನೀವು ಇಟ್ಟುಕೊಂಡಿರುವ ಫೈಲ್‌ನಲ್ಲಿ ಇದೆ. ನನಗೆ ದುಃಖ ಆಗುವಂತಾದ್ದು, ಮೊನ್ನೆ ದಿವಸ ಟೈಮ್ಸ್ ಆಫ್ ಇಂಡಿಯಾದಲ್ಲಿ 9ನೇ ಮಾರ್ಚ್ 1998ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಇಂಟರ್‌ವ್ಯೂ. "Free from shackles: Patel ready to crack the whip". "I was not allowed to function independently. I am now free of all these agonies of elections and internal squables. My hands were tied because of these internal groups trying to de-stablise me", a relieved Chief Minister J.H.Patel said in an interview to the Times of India on the eve of the crucial Karnataka Legislature Session beginning on Monday. Mr.Patel said that the people having given their mandate, he is free from the shackles of the likes of DeveGowda, Ramakrishna Hegde and R.L.Jalappa, whose daily utterances had made it almost impossible for him to run his Government. "I have been suffering. They have not given me a real opportunity to show my ability." Is it not a shame on the part of the Chief Minister? ಹೇಳುತ್ತೇನೆ, ಏಕೆ ಎಂದು. ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಯಾವುದೋ ಒಂದು ಕಪಿಮುಷ್ಟಿಯಲ್ಲಿ ಸಿಕ್ಕಿಹಾಕಿಕೊಂಡು ಫ್ರೀ ಆಗಿ ಈ ರಾಜ್ಯದಲ್ಲಿ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಒಂದು ಮುಕ್ಕಾಲು ವರ್ಷದ ನಂತರ, ಈಗ ನಾನು ಫ್ರೀ ಆಗಿದ್ದೇನೆ. ರಾಜ್ಯದ ಜನರ ಸೇವೆ ಮಾಡುತ್ತೇನೆ ಎಂದು ಹೇಳುವಂತಾದ್ದು ಅವರಿಗೆ ಶೋಭೆ ತರುವಂತಹ ಸಂಗತಿಯೇ? ಇದು ಒಂದೇ ಸಾಕು ರಾಜೀನಾಮೆ ಕೊಟ್ಟು ಹೋಗುವುದಕ್ಕೆ. ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನಿಮಗೆ ಯಾವುದೇ ಒಂದು ನೈತಿಕ ಹಕ್ಕಿಲ್ಲವೆಂದು ಹೇಳುತ್ತೇನೆ. ನಾನು ಒಂದು ವಿಚಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಜನ ಮಾತನಾಡುತ್ತಿದ್ದಾರೆ. ಹಿಂದೆ ಅವರೇ ಮೆನ್‌ಷನ್ ಮಾಡಿದಂತ ದೇವೇಗೌಡರು ಇಂತಹ ಪಾಳೇಗಾರರ ಮನೆಯಲ್ಲಿ ಜೆ.ಹೆಚ್.ಪಟೇಲರು ದಾರಿ ತಪ್ಪಿದ

ಮಗನಂತೆ ಇದ್ದರೇನು? ಈಗ ಸ್ವಾತಂತ್ರ್ಯ ಬಂದಿದೆ. ಹೌದು, ಸ್ವಾತಂತ್ರ್ಯ ನಂತರ ಜವಾಬ್ದಾರಿ ಇದೆ. ಹಾಗಾದರೆ ಮೊದಲು ಜವಾಬ್ದಾರಿ ಇರಲಿಲ್ಲವೇನು? ಇಷ್ಟು ದಿನ ಜವಾಬ್ದಾರಿ ಇಲ್ಲದೆ ಸ್ವೇಚ್ಛಾಚಾರದ ಆಡಳಿತ ನೀವು ನಡೆಸಿದಿರಿ ಏನು? ಹಾಗಾದರೆ ಕಳೆದ ಒಂದು ಮುಕ್ಕಾಲು ವರ್ಷದಿಂದ ಈ ರಾಜ್ಯದ ಮುಖ್ಯಮಂತ್ರಿಯಾಗಿ ಯಾವುದೋ ಒಂದು ಮುಲಾಜಿಗೆ, ಒತ್ತಡಕ್ಕೆ ನಾನು ಒಳಗಾಗಿದ್ದೇನೆ ಎಂದು ಹೇಳುತ್ತಾರೆ. ಅವರು ಯಾರು? ಯಾವುದೇ ಒಬ್ಬ ಮುಖ್ಯಮಂತ್ರಿಗೆ ಯಾವ ಮುಲಾಜು? ಸಂವಿಧಾನಕ್ಕೆ, ಜನತೆಗೆ ಭದ್ರವಾಗಿ ನಡೆದುಕೊಳ್ಳಬೇಕು. ಅದೇ ಒಂದು ಮಾತನ್ನು ಪ್ರಮಾಣವಚನ ಸ್ವೀಕಾರದ ಸಂದರ್ಭದಲ್ಲಿ ನಾವು ಹೇಳುವಂತಹ ಮಾತಿದೆ. ಈಗ ಹೇಳುತ್ತಾರೆ, ಈ ಒಂದು ಒತ್ತಡಕ್ಕೆ ಮುಲಾಜಿಗೆ ಸಿಕ್ಕಿಬಿದ್ದಿದ್ದೆ. ಆಗ ನನಗೆ ಸ್ವಾತಂತ್ರ್ಯ ಇರಲಿಲ್ಲ, ಈಗ ನನಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದು. ನಾನು ಕೇಳುತ್ತೇನೆ, ಯಾರ ಮುಲಾಜಿಗೆ, ಯಾರ ಒತ್ತಡಕ್ಕೆ ನೀವು ಸಿಕ್ಕಿಹಾಕಿಕೊಂಡಿದ್ದೀರಿ? ಯಾವ ರೀತಿಯ ಒತ್ತಡ? ಯಾವ ರೀತಿಯ ಮುಲಾಜು? ಈ ಒತ್ತಡದ, ಮುಲಾಜಿನ ಬೆಲೆ ಏನು? ನಾನು ಪೇಪರ್ ಕಳುಹಿಸಿಕೊಡುತ್ತೇನೆ, ಅದನ್ನು ಓದಿ. ಈ ಒತ್ತಡದ, ಮುಲಾಜಿಗೆ ಈ ಕರ್ನಾಟಕದ ಜನತೆಗೆ, ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಾನಿಯಾಗಿದೆ? ತಾತ್ಕಾಲಿಕ ಹಾನಿ ಎಷ್ಟು? ಈ ಮುಲಾಜಿನಿಂದ ಶಾಶ್ವತ ಹಾನಿ ಎಷ್ಟು? ಈ ರಾಜ್ಯದ ಮುಖ್ಯಮಂತ್ರಿಗಳ ಸ್ವಾತಂತ್ರ್ಯಹರಣ ಯಾರು ಮಾಡಿದರು? ಹತ್ತಾರು ಬಾರಿ ಹೇಳಿದ್ದೇವೆ. ನೀವು ಮುಲಾಜಿಗೆ ಸಿಕ್ಕಿಹಾಕಿಕೊಂಡಿದ್ದೀರಿ, ನೀವು ಮೊದಲ ಮುಖ್ಯಮಂತ್ರಿಯಾಗಿ ಕಾಣುತ್ತಿಲ್ಲ, ಏನು ಎಂದು ಬಹಿರಂಗ ಮಾಡಿ ಎಂದು ಹೇಳಿದೆವು. ಆಗ ಹೇಳದೆ ಈಗ ಹೇಳುತ್ತಾರೆ. ಒಳ್ಳೆಯದಾಯಿತು. "Free from all" ಇದು ರಾಜ್ಯದ ಒಬ್ಬ ಮುಖ್ಯಮಂತ್ರಿ ಒಂದು ಮುಕ್ಕಾಲು ವರ್ಷದ ನಂತರ ಈ ರೀತಿ ಮಾತನ್ನು ಹೇಳುತ್ತಾರೆ ಎನ್ನುವುದಾದರೆ ಒಂದು ಕ್ಷಣ ಕೂಡ ಅವರು ಮುಖ್ಯಮಂತ್ರಿಯಾಗಿ ಆ ಸ್ಥಳದಲ್ಲಿ ಹೇಗೆ ಮುಂದುವರೆಯುತ್ತಾರೆ? ನಾನು ಕೇಳುವುದಕ್ಕೆ ಇಚ್ಛೆಪಡುವುದೇನೆಂದರೆ ಅದಕ್ಕೋಸ್ಕರ ರಾಜೀನಾಮೆ ಕೊಡಿ. ಇದು ಒಂದು ಬೇಜವಾಬ್ದಾರಿ ಪರಮಾವಧಿ ಎಂದು ಹೇಳುತ್ತೇನೆ. ಇಲ್ಲಿ ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ. ರಾಜ್ಯಪಾಲರ ಭಾಷಣದ ಬಗ್ಗೆ ಒಂದು ಕವಡೆ ಕಾಸಿನ ಬೆಲೆ ಕೊಡುವುದಕ್ಕೆ ನಾನು ತಯಾರಿಲ್ಲ. ಏಕೆಂದರೆ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಾವು ಬಿಡುವುದಿಲ್ಲ. ನೀವು ಎಲ್ಲಿ ಇರುತ್ತೀರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಯಡಿಯೂರಪ್ಪನವರೇ ಒಂದು ಮನವಿ. ಯಾವಾಗ ಸಿಂಧ್ಯಾರವರು ಈ ಕಡೆ ಬರುತ್ತಾರೆ? ಪಟೇಲರು ಬರುತ್ತಾರೆ ಗೊತ್ತಿಲ್ಲ ಏಕೆ ಇಷ್ಟು ಬಯ್ಯುತ್ತೀರಿ? ಕೊನೆಗೆ ಮುಂದಿನ ಸೆಷನ್‌ನಲ್ಲಿ ಇಕ್ಕಟ್ಟಿಗೆ ಸಿಕ್ಕುವ ಹಾಗೆ ಬೀಳುತ್ತೀರಿ? ಮುಂದಿನ ಸೆಷನ್‌ನಲ್ಲಿ ಇಕ್ಕಟ್ಟಿಗೆ ಸಿಗಬೇಕೆಂದರೆ ಇದನ್ನು ಹೇಳಬೇಡಿ. ಇಲ್ಲದಿದ್ದರೆ ಕಷ್ಟದಲ್ಲಿ ಬೀಳುತ್ತೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನು ನೀರಾವರಿ ಬಗ್ಗೆ ನಮಗೆ ನಾಗೇಗೌಡರು ಮಾತನಾಡಿದರು.

ಅಧ್ಯಕ್ಷರು: ನೋಡಿ ಇದು ಬಹಳ ಜಾಣತನ ನಿಮ್ಮದು ಅವರು ಒಂದು ವಿಚಾರ ಹೇಳಿದರು. ಅದಕ್ಕೆ ಉತ್ತರ ಹೇಳಬೇಕೋ ಬೇಡವೋ? ಅದು ಬಿಟ್ಟು ಮತ್ತೇ ನೀವು ನೀರಾವರಿ ಕಡೆ ಹೊರಟಿರಿ. ಇನ್ನು ಪತ್ರಿಕೆಯವರು ನಾಳೆ ಎಲ್ಲಾ ಬಿಟ್ಟು ಇದನ್ನೇ ದೊಡ್ಡ ವಿಚಾರ ಎಂದು ಹೇಳಿ ಅವರು ಏನೂ ಉತ್ತರಿಸಲಿಲ್ಲ ಎಂದು ಹೇಳಿ ಸುಮ್ಮಸುಮ್ಮನೆ ಅವರ ಮೇಲೆ ಏನಾದರೂ ಮಾಡುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಬೆಳಿಗ್ಗೆ ನಾವು ಅವರಿಗೆ ಹೇಳಿದ ಹಾಗೆ ಪರಿಶೀಲಿಸುತ್ತೇವೆ ಎಂದು ಹೇಳಿ ಮುಂದಿನ ಸಬ್ಜೆಕ್ಟ್‌ಗೆ ಹೋಗುತ್ತಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ನನಗೂ ಅರ್ಥವಾಗಲಿಲ್ಲ. ಮಾನ್ಯ ಜೆ.ಹೆಚ್.ಪಟೇಲರು ಒಂದು ಸಾರಿ ಹೇಳಿದ್ದಾರೆ, ಡೆಲ್ಲಿಯಿಂದ ಬಂದಕೂಡಲೇ ಬಿ.ಜೆ.ಪಿ.ಯವರು ಸಿಂಗಲ್ ಲಾರ್ಜೆಸ್ಟ್ ಪಾರ್ಟಿಯಾಗಿದೆ. ಅವರದ್ದೇ ಸರ್ಕಾರ ನಡೆಸಲಿ ಎಂದು ಹೇಳಿ ಆಮೇಲೆ ಅವರು ನಾವು ಪ್ರಯತ್ನ ಮಾಡುತ್ತೇವೆ, ಯುನೈಟೆಡ್ ಫ್ರಂಟ್‌ನವರು ಎಂದು ಹೇಳುವುದಕ್ಕೆ ಹೋಗಲಿಲ್ಲ. ಅವರಿಗೆ ಸಿಕ್ಕಿದೆ, ಮಾಡಲಿ ಎಂದು ಹೇಳಿದರು. ಈಗ ಗೊತ್ತಾಯಿತು. ಮಾತುಕತೆ ನಡೆದಿದೆ, ಯಡಿಯೂರಪ್ಪ ಪರಿಶೀಲನೆ ಮಾಡುತ್ತಿದ್ದಾರೆ, ಇದರ ಮೇಲೆ ಎಂದು ಅರ್ಥವಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನು ನೀರಾವರಿ ಬಗ್ಗೆ ಬಹಳ ಮಾತನಾಡಿದರು. 1,200 ಕೋಟಿ ರೂಪಾಯಿ ಕೃಷ್ಣ ಜಲಾನಯನ ಪ್ರದೇಶಕ್ಕೆ ನಾವು ಖರ್ಚು ಮಾಡುತ್ತೇವೆ ಎಂದು. ನೀವೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ 1997-98ರಲ್ಲಿ 1,240 ಕೋಟಿ 63 ಲಕ್ಷ ರೂಪಾಯಿ ಖರ್ಚು ಮಾಡುವಂತಹ ಸಂದರ್ಭದಲ್ಲಿ ವೆಚ್ಚವಾಗಿರುವಂತಹ ಹಣ 543 ಕೋಟಿ 76 ಲಕ್ಷ ರೂಪಾಯಿ. ಇದು ಜನವರಿ 1998ರವರೆಗೆ. ಎಂದರೆ ನೀವು ಖರ್ಚು ಮಾಡಿರುವಂತಹ ಹಣ 543 ಕೋಟಿ ರೂಪಾಯಿ ಎಂದರೆ ಇದರಲ್ಲಿ ಕೇಂದ್ರ ಸರ್ಕಾರ ಕೊಟ್ಟಂತಹ 200ಕೋಟಿ ರೂಪಾಯಿ ಸೇರಿಕೊಂಡಿದೆ. ಈಗ ಮಾರ್ಚ್ ಮುಗಿಯುತ್ತಾ ಬಂತು. ಎಂದರೆ ರೈತನ ನೆರವಿಗೆ ಬರಬೇಕಾದಂತಹ ಅತ್ಯಂತ ಪ್ರಮುಖವಾಗಿರತಕ್ಕಂಥ ಇಲಾಖೆಯಲ್ಲಿ ಯಾವರೀತಿಯ ದಿವ್ಯ ನಿರ್ಲಕ್ಷ್ಯ ನಿಮ್ಮದು. ನೀವು ಕೇವಲ ಅಂಕಿಅಂಶಗಳನ್ನು ಕೊಡುತ್ತಿದ್ದೀರಿ ಹೊರತು, ನಿಮ್ಮ ರಾಜ್ಯಪಾಲರ ಭಾಷಣದಲ್ಲಿ 1997-98ರ ಸಾಲಿನಲ್ಲಿ ಏನಾಗಿದೆ ಎಂದು ಏನೂ ಹೇಳಿಲ್ಲ. ಹಳೇ ಕತೆ ಹೇಳುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಅಷ್ಟೇ. ಈ ರಾಜ್ಯದ ರೈತ ಸಮೂಹವನ್ನು ಸಂಪೂರ್ಣವಾಗಿ ಮರೆತಿದ್ದೀರಿ. ಇವತ್ತು ನೀರಾವರಿ ಇಲಾಖೆಯಲ್ಲಿ 180 ಕೋಟಿ ರೂಪಾಯಿ ಬಾಕಿ ಬಿಲ್ಸ್ ಪಾವತಿ ಮಾಡಿಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ 24-26 ಕೋಟಿ ರೂಪಾಯಿ ಬಾಕಿ ಇದೆ. ಒಬ್ಬ ಕಂಟ್ರಾಕ್ಟರ್ ಮುಂದೆ ಬರುತ್ತಿಲ್ಲ.

ಶಿವಮೊಗ್ಗ ಜಿಲ್ಲೆ ಕಡೆ ಪೇಮೆಂಟ್ ಆಗದೇ ಎಲ್ಲಾ ಕೆಲಸಗಳು ನಿಂತು ಹೋಗಿದೆ. ಮಲೆನಾಡು ಅಭಿವೃದ್ಧಿ ಮಂಡಳಿ ಅದಕ್ಕೆ ಒಬ್ಬ ಕಾರ್ಯದರ್ಶಿ ಎಂದು ಇದ್ದಾರೆ. ನಿಮಗೆ ಒಂದು ಉದಾಹರಣೆ ನಾನು ಕೊಡುತ್ತೇನೆ. ನಾನು ಫೋನ್ ಮಾಡಿದೆ, ಚುನಾವಣೆ ನಡೆಯುವುದಕ್ಕೆ ಇನ್ನು 10-15 ದಿವಸ ಇತ್ತು. ಸ್ಯಾಂಕ್ಷನ್ ಆಗಿರುವ ವರ್ಕ್ ಮಾಡುವುದಕ್ಕೆ ತಯಾರಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: 30ಕೋಟಿ ರೂಪಾಯಿಗಳಲ್ಲಿ ಇವತ್ತಿನವರೆಗೂ ಹಣ ಬಂದಿದ್ದು 5 ಕೋಟಿ ರೂಪಾಯಿಗಳು ಮಾತ್ರ. ಹೀಗಾದರೆ ಕೆಲಸ ಹೇಗೆ ಆಗಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ: ಎಲ್ಲಿಟ್ಟಿದ್ದೀರಾ ದುಡ್ಡು ಸಿಂಧ್ಯಾ ಅವರೇ? ಪ್ರಶ್ನೆ ಏನೆಂದರೆ ಇಷ್ಟೆಲ್ಲಾ ಬಂದಂತಹ ಹಣ, ತೆರಿಗೆ ಕೊಟ್ಟಂತಹ ಹಣ ಟ್ರೆಜರಿಯಲ್ಲಿ ಇಲ್ಲ. ಖರ್ಚು ಮಾಡಿಲ್ಲ. ಆ ದುಡ್ಡು ಎಲ್ಲಿದೆ ಎಂದು ಅದೇ ನನಗೆ ಅರ್ಥ ಆಗಿಲ್ಲ. ಸಂಪೂರ್ಣವಾಗಿ ಜನರನ್ನು ಮಾರಣಹೋಮ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೀರಿ. 1995-96ರಲ್ಲಿ ಬಜೆಟ್ ನಿಗದಿತ ಮೊತ್ತ 770 ಕೋಟಿ 60 ಲಕ್ಷ ರೂಪಾಯಿ ಆದರೆ ಅದರಲ್ಲಿ 89 ಕೋಟಿ 34 ಲಕ್ಷ ರೂಪಾಯಿಯನ್ನು ಕಡಿತ ಮಾಡಿದಿರಿ. 1996-97ನೇ ಸಾಲಿನ ಬಜೆಟ್‌ನಲ್ಲಿ ನಿಗದಿತ ಮೊತ್ತ 1035 ಕೋಟಿ ರೂಪಾಯಿ ಆದರೆ 103 ಕೋಟಿ ರೂಪಾಯಿಗಳನ್ನು ಕಡಿತಗೊಳಿಸಿದ್ದೀರಿ. ಈ ಬಾರಿ 1997-98ರಲ್ಲಿ ಬಜೆಟ್‌ಗೆ ನಿಗದಿತ ಮೊತ್ತ 1,242 ಕೋಟಿ 96ಲಕ್ಷ ಆದರೆ ನೀವೇ ಕೊಟ್ಟಿರುವಂತಹ ಅಂಕಿಅಂಶಗಳ ಪ್ರಕಾರ ಅದು 550 ಕೋಟಿ ರೂಪಾಯಿಗಳನ್ನು ದಾಟಲಿಲ್ಲ. ಯಾವ ರೀತಿ ನೀರಾವರಿ ಇಲಾಖೆಯನ್ನು ಸಂಪೂರ್ಣ ನಿರ್ಲಕ್ಷ್ಯಗೊಳಿಸಿದ್ದೀರಿ ಎನ್ನುವುದಕ್ಕೆ ಇದೊಂದು ಉದಾಹರಣೆ ಸಾಕು. ಇನ್ನು ಕೆಇಬಿಯನ್ನು ತೆಗೆದುಕೊಳ್ಳಿ, 1000 ಕೋಟಿ ರೂಪಾಯಿಗಳನ್ನು ತೆರಿಗೆಯನ್ನು ಗ್ರಾಹಕರ ಮೇಲೆ ಹಾಕಿದ್ದೀರಿ. ಇವತ್ತು 730 ಕೋಟಿ ರೂಪಾಯಿಯನ್ನು ಕೆಪಿಸಿಗೆ ಬಾಕಿ ಕೊಟ್ಟಿಲ್ಲ. ಕೆಪಿಸಿಯನ್ನು ಮುಚ್ಚಿಹಾಕುವಂತಹ ಸ್ಥಿತಿಗೆ ಬರುತ್ತಾ ಇದ್ದೀರಾ. ಕುಡಿಯುವ ನೀರಿನ ಹಾಹಾಕಾರ, ವಿದ್ಯುತ್ ಅಭಾವ ರೈತ ವಿಷ ತೆಗೆದುಕೊಂಡು ಸಾಯುವಂತಹ ಸ್ಥಿತಿ ಬಂದಿದೆ. ಜನ ಸತ್ತಿದ್ದಾರೆ, ಬದುಕಿದ್ದಾರೆ ಎಂದು ನೋಡುವುದಕ್ಕೆ ಒಬ್ಬ ಮಂತ್ರಿ ಹೋಗಲಿಲ್ಲ. ಈ ರೀತಿಯಾಗಿ ಬೇಜವಾಬ್ದಾರಿಯಾಗಿ ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದೀರಾ. ಬಜೆಟ್‌ನಲ್ಲಿ ಅನೇಕ ವಿಷಯಗಳನ್ನು ತಾವು ಹೇಳಿದ್ದೀರಾ ಅದರಲ್ಲಿ ಏನಾದರೂಂದು ಅರ್ಥ ಇದೆಯಾ. ನಿಮ್ಮ ಮಾತಿಗೆ ಕವಡೆಕಾಸಿನ ಬೆಲೆ ಇದೆಯೇನು? ಪಡಿತರ ಕಾರ್ಡುಗಳ ಬಗ್ಗೆ ಚರ್ಚೆಯಾಗತಕ್ಕ ಕಾಲದಲ್ಲಿ ನಾನು ಕೇಳುವುದೇನೆಂದರೆ ಬಡವರ ಬಗ್ಗೆ ಮಾತನಾಡುತ್ತೀರಾ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ ನೀವು ಮಾತನಾಡುತ್ತೀರಿ? ಇವತ್ತು ನಿಮ್ಮ ಆಹಾರ ಸಚಿವರು ಒಪ್ಪಿಕೊಳ್ಳುತ್ತಾರೆ, 6 ಲಕ್ಷ ಕುಟುಂಬಕ್ಕೆ ಸರ್ವೆ ಮುಗಿದ ನಂತರ ನೀವು 3 ವರ್ಷವಾದರೂ ಗ್ರೀನ್ ಕಾರ್ಡ್ ಕೊಡುವುದಕ್ಕೆ ಆಗಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಬಂದ ಹಣವನ್ನು ನೀವು ಇಲ್ಲಿಯವರೆವಿಗೂ ಖರ್ಚು ಮಾಡಿಲಿಲ್ಲ. ಸಮಾಜದ

ದುರ್ಬಲವರ್ಗದವರಿಗೆ ವಸತಿಸೌಕರ್ಯವನ್ನು ಒದಗಿಸುವುದು ಸರ್ಕಾರದ ಮೊದಲ ಆದ್ಯತೆ ಆಗಿದೆ. 20 ಲಕ್ಷ ಸೂರಿಲ್ಲದವರಿಗೆ ಹಂತಹಂತವಾಗಿ ವಸತಿಯನ್ನು ಒದಗಿಸುವ ಕಾರ್ಯನೀತಿಯನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಹೇಳಿದ್ದೀರಿ. ಮಾಡಿರುವುದು ಎಷ್ಟು ಎಂದು ಹೇಳಿ ಮುಂದೆ ಮಾಡುವುದು ಆಮೇಲೆ. ನನ್ನ ಸರ್ಕಾರ ಪಂಚಯತ್‌ರಾಜ್ಯ ಸಂಸ್ಥೆಗಳನ್ನು ಉತ್ಸಾಹಪೂರ್ಣ ಬೆಂಬಲದಿಂದಾಗಿ ರಾಜ್ಯ ಸರ್ಕಾರದ ಈ ಕ್ರಾಯಕ್ರಮದ ಅಡಿಯಲ್ಲಿ 97ನೇ ಡಿಸೆಂಬರ್ ಅಂತ್ಯದವರೆಗೆ ಗ್ರಾಮೀಣ ಪ್ರದೇಶದಲ್ಲಿರುವ ಕುಟುಂಬದವರಿಗೆ 3.6 ಲಕ್ಷಕ್ಕಿಂತ ಹೆಚ್ಚು ಶೌಚಾಲಯವನ್ನು ಕಟ್ಟಿಸಿಕೊಟ್ಟಿದ್ದೇವೆ. 50 ಪರ್ಸೆಂಟ್ ಶೌಚಾಲಯಗಳಿಲ್ಲ. ಆದರೆ ಕೊಟ್ಟಂತಹ ಉಪಕರಣಗಳನ್ನು ಯಾರೋ ಮಾರಿಕೊಂಡಿದ್ದಾರೆ. ಬನ್ನಿ ತೋರಿಸಿ ಎಲ್ಲಿದೆ ಶೌಚಾಲಯಗಳು? ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರು ನಿಮಗೆ ಬಡಿಗ ತೆಗೆದುಕೊಂಡು ಬೆನ್ನು ಹತ್ತುವ ಕಾಲ ಹತ್ತಿರ ಬರುತ್ತಾ ಇದೆ. ಗಂಗಾಕಲ್ಯಾಣ ಯೋಜನೆಯಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಜನಾಂಗದವರಿಗೆ 8 ಸಾವಿರ ಕೊಳವೆ ಬಾವಿಗಳನ್ನು ತೋಡಲಾಯಿತು. ವಿದ್ಯುತ್ ಸಂಪರ್ಕ ನೀಡುವ ಕಾರ್ಯಗಳನ್ನು ತ್ವರಿತಗೊಳಿಸಲು ನನ್ನ ಸರ್ಕಾರ ವಿದ್ಯುತ್ ಸಂಪರ್ಕಕ್ಕೆ ತಗಲುವ ಸಂಪೂರ್ಣ ವೆಚ್ಚವನ್ನು ಭರಿಸಲಿದೆ. ಇದಕ್ಕಾಗಿ ಕೆಇಬಿಗೆ ನೀವು ದುಡ್ಡು ಕಟ್ಟಾಗಿದೆ. ದುಡ್ಡ ಕಟ್ಟಿ ಒಂದು ವರ್ಷ ಕಳೆಯುತ್ತಾ ಬಂದರೂ ಇವತ್ತು 8 ಸಾವಿರ ಕೊಳವೆಬಾವಿಗಳಲ್ಲಿ 500 ಕೊಳವೆಬಾವಿಗಳಿಗೂ ಕೂಡ ನೀವು ವಿದ್ಯುತ್ ಸಂಪರ್ಕವನ್ನು ಇವತ್ತಿನವರೆಗೂ ನೀವು ಮಾಡಿಕೊಡಲಾಗಲಿಲ್ಲ. ನೀವು ಏನು ಹೇಳುತ್ತಿದ್ದೀರಿ, ನೀವು ಉತ್ತರ ಕೊಡತಕ್ಕ ಕಾಲದಲ್ಲಿ ಹೇಳಿ, ನಿಮ್ಮ ಪಕ್ಕದಲ್ಲಿರುವ ಸಚಿವರನ್ನು ಕೇಳಿ ನನ್ನ ಹತ್ತಿರ ನಿಮ್ಮ ರಿಟರ್ನ್ ರಿಪ್ಲೈ ಇದೆ. 8 ಸಾವಿರ ಕೊಳವೆಬಾವಿಗಳನ್ನು ಯಾವಾಗ ತೆಗೆದಿದ್ದೀರಿ, ಈ ವರ್ಷ ತೆಗೆದಿದ್ದು ಎಷ್ಟು? ಎಷ್ಟಕ್ಕೆ ವಿದ್ಯುತ್ ಸಂಪರ್ಕವಾಗಿದೆ? ನೀವು ಕೆಇಬಿಗೆ ದುಡ್ಡುಕಟ್ಟಿದ ಮೇಲೆ ಅವರು ಏಕೆ ಕೆಲಸ ಮಾಡುತ್ತಿಲ್ಲ. ಏನನ್ನೋ ಹೇಳುವುದರ ಬದಲು ನೀವು ಉತ್ತರ ಕೊಡುವ ಸಂದರ್ಭದಲ್ಲಿ ಅಂಕಿಅಂಶಗಳ ಸಮೇತ ಕೊಡಿ ನಾನು ಬೇಡವೆಂದು ಹೇಳುವುದಿಲ್ಲ. ನಿಜವಾಗಿ ಹೇಳಬೇಕೆಂದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಕೂಡ ನಾನು ಇಷ್ಟಪಡುವುದಿಲ್ಲ. ಇಂಪ್ಲಿಮೆಂಟ್ ಮಾಡುವುದಕ್ಕೆ ನೀವು ಇಲ್ಲದಿರುವಾಗ ಇದರ ಬಗ್ಗೆ ನಾವೇಕೆ ಚರ್ಚೆ ಮಾಡಬೇಕು. ನಾನು ಹೇಳುತ್ತೇನೆ, ಸಂಪೂರ್ಣವಾಗಿ ಈ ರಾಜ್ಯದ ಜನತೆ ನಿಮ್ಮನ್ನು ತಿರಸ್ಕಾರ ಮಾಡಿದ್ದಾರೆ. ವಿಳಾಸ ಇಲ್ಲದಂತೆ ದುಸ್ಥಿತಿಗೆ ತಳ್ಳಿದ್ದಾರೆ. ದಯಮಾಡಿ ಜನಾದೇಶವನ್ನು ಅರ್ಥಮಾಡಿಕೊಂಡು ಯಾರು ಅಧಿಕಾರಕ್ಕೆ ಬರುತ್ತಾರೆ ಅದು ಬಹಳ ಮುಖ್ಯವಾದುದು. ನಾನು ಯಾರ ಜೊತೆನೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲವೆಂದು ನಾನು ಇವತ್ತು ತಮಗೆ ಆಶ್ವಾಸನೆ ಕೊಡುತ್ತೇನೆ. ಹೋಗೋಣ ಜನರ ಮುಂದೆ, ಬಿಜೆಪಿ ರಾಜ್ಯಘಟಕದ ಅಧ್ಯಕ್ಷನಾಗಿ ನಿಮಗೆ ನಾನು ಭರವಸೆಯನ್ನು ಕೊಡುತ್ತೇನೆ. ಹೊಂದಾಣಿಕೆ ಮಾಡಿಕೊಂಡು ಆತುರದಿಂದ ಅಧಿಕಾರಕ್ಕೆ ಬರುತ್ತೇವೆ ಅನ್ನುವ ಭ್ರಮೆಯಲ್ಲಿ ನಾವಿಲ್ಲ. ಯಾವ ಜನ ನಿಮ್ಮ ವಿರುದ್ಧ ಜನಾದೇಶ ಕೊಟ್ಟಿದ್ದಾರೆ ಅವರನ್ನು ತೆಗೆದುಕೊಂಡು

ಅಧಿಕಾರ ಮಾಡುವಂಥ ದುಸ್ಥಿತಿ ಬರಬಾರದೆನ್ನುವ ಎಲ್ಲಾ ರೀತಿಯ ಪ್ರಯತ್ನವನ್ನು ನಾನು ಮಾಡುತ್ತೇನೆ. ಅದನ್ನಾದರೂ ಒಂದು ಆಶ್ವಾನೆ ಎಂದು ತಿಳಿದುಕೊಳ್ಳಿ. ಬಹಳ ಒದ್ದಾಡಿಕೊಂಡು ಒಂದು, ಒಂದೂವರೆ ವರ್ಷದಿಂದ ಹೇಗೋ ಮ್ಯಾನೇಜ್ ಮಾಡಿಕೊಂಡು ಕಳೆದುಕೊಂಡಿರುವ ಡಿಫಾಸಿಟ್‌ನ್ನಾದರೂ ಉಳಿಸಿಕೊಳ್ಳಬಹುದು ಎಂದು ಯೋಚನೆ ಮಾಡುತ್ತಿರುವುದು ನನಗೆ ಗೊತ್ತಿದೆ. ಅದು ಸಾಧ್ಯವಾಗಲಾರದು.

ಅಧ್ಯಕ್ಷರು: ತಮ್ಮ ಕ್ಲಾರಿಫಿಕೇಷನ್‌ಗೆ ಅವರು ಸ್ವಲ್ಪ ಸಹಾಯ ಮಾಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೆ, We want fresh mandate. I am very clear. We will go to the people. ನೀವು ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ನೈತಿಕ ಹಕ್ಕಿಲ್ಲ. ವಿಧಾನಸಭೆ ವಿಸರ್ಜನೆ ಮಾಡಿ, ಹೊಸ ಜನಾದೇಶವನ್ನು ಪಡೆದುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಫ್ರೇಶ್ ಎಲೆಕ್ಷನ್ ಮಾಡಬೇಕು, ಅದು ನಮ್ಮ ಬೇಡಿಕೆ ಎಂದು ಅವರು ಹೇಳಿದರು. ಪರ್ಯಾಯವಾಗಿ ಇನ್ನೊಂದನ್ನು ಸಹ ಅವರು ಯೋಚನೆ ಮಾಡುತ್ತಿದ್ದಾರೆ. ಅದು ಏನೆಂದರೆ ಹೆಗಡೆಯವರು ಬಂದು ಇಲ್ಲಿ ಮುಖ್ಯಮಂತ್ರಿಯಾದರೆ ಅವರಿಗೆ ನಾವು ಬೆಂಬಲ ಕೊಡಬಹುದು. ದೇಶಪಾಂಡೆ ಮತ್ತ್ಯಾರಾದರೂ ಬಂದರೆ ಕಷ್ಟವಾಗಬಹುದು, ಏಕೆಂದರೆ ನಾವು ಇಷ್ಟು ವರ್ಷ ಕಷ್ಟಪಟ್ಟುಕೊಂಡು ಕಟ್ಟಿದಂತಹ ಮನೆಯಲ್ಲಿ ಯಾರೋ ಬಂದು ಸೇರಿಕೊಂಡರೆ ಅದು ಕಷ್ಟವಾಗುತ್ತದೆ, ಅದು ಬೇಡ ಎಂದು.

ಅಧ್ಯಕ್ಷರು: ನೀವು ಹೇಳುತ್ತಿದ್ದೀರಲ್ಲಾ, ಇದಕ್ಕೂ ಕ್ಲಾರಿಫಿಕೇಷನ್ ಕೊಡಬೇಕಾ ಅವರು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹೆಗಡೆಯವರು ಬಂದು ಕುಳಿತರೆ ನಾವು ಬೆಂಬಲ ಕೊಡುವುದಕ್ಕೆ ಕಷ್ಟವಾಗುವುದಿಲ್ಲ. ಬೇರೆಯವರು ಬಂದರೆ ಕಷ್ಟವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಿ.ಜೆ.ಪಿ, ಲೋಕಶಕ್ತಿ ಹೊಂದಾಣಿಕೆ ಅನೇಕ ವರ್ಷಗಳು ಮುಂದುವರಿಯುತ್ತದೆ. ಬಹಳ ಆತ್ಮೀಯವಾದಂತಹ ಸಂಬಂಧವಿದೆ. ಕೇವಲ ಕಾರ್ಯಕರ್ತರು ಅಲ್ಲ, ರಾಜ್ಯದ ಜನ ಇದನ್ನು ಸ್ವಾಗತ ಮಾಡಿದ್ದಾರೆ. ಬಿ.ಜೆ.ಪಿ, ಲೋಕಶಕ್ತಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಇಷ್ಟು ವರ್ಷಗಳಿಂದ ಜನತೆಗೆ ಆಗಿರತಕ್ಕಂತಹ ಅನ್ಯಾಯವನ್ನು ಸರಿಪಡಿಸಿ ಜನ ನೆಮ್ಮದಿಯಿಂದ ಗೌರವದಿಂದ ಸ್ವಾಭಿಮಾನದಿಂದ ಬದುಕುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವುದಕ್ಕೆ ಬದ್ಧರಾಗಿದ್ದೇವೆ. ನಮ್ಮ ಆದ್ಯತೆ ಮೊದಲು ಜನಾದೇಶಕ್ಕೆ ಹೋಗುವುದು. ಏನಾಗಿದೆ ಎಂದರೆ, ಮೊನ್ನೆ ತಾನೇ ಲೋಕಸಭಾ ಚುನಾವಣೆಯಾಗಿದೆ, ಮತ್ತ್ಯಾಕೆ ನೀವು

ಬಡಿದಾಡಿಕೊಂಡು ನಮ್ಮ ಹತ್ತಿರ ಬರುತ್ತಿದ್ದೀರಾ? ಎನ್ನತಕ್ಕ ಗೊಂದಲ ಜನರಲ್ಲಿದೆ. ಜನರನ್ನು ಕನ್‌ವಿನ್ಸ್ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಆದ್ದರಿಂದ ಬರುವಂತಹ ದಿವಸಗಳು ಭಾರತೀಯ ಜನತಾಪಕ್ಷ, ಲೋಕಶಕ್ತಿಯ ದಿವಸಗಳಾಗಿದ್ದಾವೆ. ಆ ಕಡೆ ಕುಳಿತಿರುವಂತವರಿಗೆ ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತತ್ವಗಳನ್ನು ಮಾತನಾಡುವುದಕ್ಕೆ ಹೋಗಬೇಡಿ. ನಿಮಗೆ ತೊಂದರೆಯಾಗುತ್ತದೆ, ಬಹಳ ಹುಷಾರಾಗಿರಿ. ಅವರಿಗೆ ನೀವು ಬೈದಿರಲ್ಲ, ಲೋಕಶಕ್ತಿಯ ಮುಖಂಡರಾದ ಹೆಗಡೆಯವರು ರಾಷ್ಟ್ರದಲ್ಲಿ 25-30 ವರ್ಷ ಆಡಳಿತ ನಡೆಸಿರಲಿಲ್ಲವೊ? ನೀವು ಅವರ ಜೊತೆ ಸೇರಿಕೊಳ್ಳುತ್ತೀರೋ ಅವರ ಪಾಪವನ್ನು ನೀವು ಜೊತೆಯಲ್ಲಿ ಹೊರುತ್ತೀರೋ ಆದ್ದರಿಂದ ಬಹಳ ಹುಷಾರಾಗಿ ಮಾತನಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆತ್ಮಸಾಕ್ಷಿಯಾಗಿ ಅವರು ಒಪ್ಪುತ್ತಿಲ್ಲ. ಯಾವ ಕಡೆಯಿಂದ ಬಂದರಪ್ಪ ಲೋಕಶಕ್ತಿಯವರು ಎನ್ನತಕ್ಕ ಅಭಿಪ್ರಾಯ ಮನಸ್ಸಿನೊಳಗಿದೆ. ಆದರೆ ಹೇಳುವ ಹಾಗಿಲ್ಲ. ಏಕೆಂದರೆ ಹೈಕಮಾಂಡಿನಿಂದ ಆದೇಶ. ಇಲ್ಲಿಯವರೆಗೆ ಹೈಕಮಾಂಡ್, ಹೈಕಮಾಂಡ್ ಎಂದು ನಮಗೆ ಹೇಳುತ್ತಿದ್ದರು. ಈಗ ಅವರು ಹೈಕಮಾಂಡಿನ ಮಾತನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಲಿ ನೋಡೋಣ? ನಾಳೇ ನಾಡಿದ್ದರಲ್ಲಿ ಹೈಕಮಾಂಡಿನಿಂದ ಇನ್ನೊಂದು ಆದೇಶ ಬರುತ್ತದೆ. ಅದನ್ನು ಒಪ್ಪಲ್ಲ; ಎಂದು ಹೇಳಲಿ ನೋಡೋಣ?

ಅಧ್ಯಕ್ಷರು: ನಿಮ್ಮ ಪಕ್ಷದವರು ಶಿಸ್ತಿನ ಸಿಪಾಯಿಗಳಂತೆ ಮೇಲಿನವರು ಹೇಳಿದ ಹಾಗೆ ಕೇಳುತ್ತಾರೆ. ಏನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಿ.ಜೆ.ಪಿ ಮತ್ತು ಲೋಕಶಕ್ತಿಯ ಹೊಂದಾಣಿಕೆ ಬಹಳ ವರ್ಷಗಳು ಮುಂದುವರಿಯುತ್ತದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಾವು ಲೋಕಶಕ್ತಿಯ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತೇವೆ. ಆ ಕಡೆ ಕುಳಿತಿರುವಂಥವರಿಗೆ ಈ ನಾಯಕರನ್ನು ಬಿಟ್ಟರೆ ನಾವು ಅಡ್ರೆಸ್ ಇರುವುದಿಲ್ಲ ಎಂದು ಗೊತ್ತು. ಇವರ ಜೊತೆ ಹೋದರೆ ಏನಾಗುತ್ತದೆ ಎಂಬ ಭಯ. ಈ ಗೊಂದಲದಲ್ಲಿ ಇದ್ದಾರೆ. ನಾನು ಹೇಳುವಂಥದ್ದು ಜನರ ತೀರ್ಪಿಗೆ ಮನ್ನಣೆ ಕೊಟ್ಟು ಹೊಸ ಜನಾದೇಶವನ್ನು ತೆಗೆದುಕೊಳ್ಳುವುದಕ್ಕೋಸ್ಕರ ಜನ ಮುಂದೆ ಹೋಗೋಣ. ದಯಮಾಡಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಬಹಳ ಒಳ್ಳೆಯ ಸೋಷಿಯಲಿಸ್ಟ್ ಪಾರ್ಟಿಯ ಹಿನ್ನೆಲೆಯಲ್ಲಿ ಬಂದಿರತಕ್ಕಂಥವರು ಈ ಒಂದು ಹ್ಯುಮಿಲೇಷನ್, ಈ ಒಂದು ಮುಕ್ಕಾಲು ವರ್ಷ ಯಾರ ಕೈಗೊ ಸಿಕ್ಕಿಹಾಕಿಕೊಂಡು ನರಳಿ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಆಗಲಿಲ್ಲ. ಮತ್ತೆ ಪ್ರತಿಯೊಬ್ಬರನ್ನೂ ತೃಪ್ತಿಪಡಿಸುವುದಕ್ಕೆ ಕಾಲಹರಣ ಮಾಡಿ ಈ ರಾಜ್ಯದ ನಾಲ್ಕು ಮುಕ್ಕಾಲು ಕೋಟಿ ಜನ ಸ್ಪಷ್ಟವಾಗಿ ಈ ಅನಿಷ್ಟ ಸರ್ಕಾರ ಹೋಗಬೇಕು ಎನ್ನುವ ತೀರ್ಪನ್ನು ಕೊಟ್ಟಿರುವುದಕ್ಕೆ ಮನ್ನಣೆ ಕೊಟ್ಟು ವಿಧಾನಸಭೆಯನ್ನು

ವಿಸರ್ಜನೆ ಮಾಡಿ ಹೊಸದಾಗಿ ಬರುವವರು, ಹೊಸದಾಗಿ ರಾಜ್ಯಪಾಲರ ಭಾಷಣವನ್ನು ಮಾಡಿಸಿ ಒಳ್ಳೆಯ ಆಡಳಿತವನ್ನು ಕೊಡಲು ಅವಕಾಶ ಮಾಡಿಕೊಡಿ ಎಂದು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

(5) ಗಮನ ಸೆಳೆಯುವ ಸೂಚನೆ

ವಿಷಯ: ಕುಷ್ಟಗಿ ತಾಲ್ಲೂಕಿನ ಸೇಬಿನ ಕಟ್ಟಿ ಗ್ರಾಮದ ಸರ್ವೆ ನಂ:49:1ರಲ್ಲಿರುವ ಕೆಂಪುಬಣ್ಣವುಳ್ಳ ಗಣಿಯನ್ನು ಕಾನೂನುಬಾಹಿರವಾಗಿ ಶ್ರೀರಂಗ ಇಂಡಸ್ಟ್ರೀಸ್ ಅವರಿಗೆ ಸರ್ಕಾರದಿಂದ ಮಂಜೂರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಸೇಬಿನ ಕಟ್ಟಿ ಗ್ರಾಮದ ಸರ್ವೆ ನಂ:49:1ರಲ್ಲಿರುವ ಕೆಂಪುಬಣ್ಣವುಳ್ಳ ಗಣಿಯನ್ನು ಕಾನೂನುಬಾಹಿರವಾಗಿ ಶ್ರೀರಂಗ ಇಂಡಸ್ಟ್ರೀಸ್ ಅವರಿಗೆ ಸರ್ಕಾರ ಮಂಜೂರು ಮಾಡಿರುವ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ,

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ಸೇಬಿನಕಟ್ಟಿ ಗ್ರಾಮದ ಸರ್ವೆ ನಂ.49:1ರಲ್ಲಿ ಮೆ:ಶ್ರೀ ರಂಗ ಇಂಡಸ್ಟ್ರೀಸ್, ಇವರಿಗೆ 25-1-1979 ರಿಂದ 5ವರ್ಷಗಳ ಅವಧಿಗೆ 62-00 ಎಕರೆ ಪ್ರದೇಶದಲ್ಲಿ ಪಿಂಕ್ ಗ್ರಾನೈಟ್ ಶಿಲೆಯನ್ನು ತೆಗೆಯಲು ಕಲ್ಲು ಗಣಿ ಗುತ್ತಿಗೆ ಮಂಜೂರಾಗಿತ್ತು. 1982 ರಿಂದ 1991ರವರೆಗೆ ಸರ್ಕಾರದ ಸಂಸ್ಥೆಗಳಲ್ಲದೆ ಬೇರೆ ಯಾರಿಗೂ ಕಲ್ಲು ಗಣಿ ಗುತ್ತಿಗೆಗಳನ್ನು ನೀಡಬಾರದೆಂಬ ನಿಷೇದಾಜ್ಞೆಯಿತ್ತು. ಸದರಿ ಕಲ್ಲು ಗಣಿ ಗುತ್ತಿಗೆಯನ್ನು ನವೀಕರಿಸಲು ಕೋರಿ ಈ ಸಂಸ್ಥೆಯವರು ದಿನಾಂಕ: 12-1-1991ರಂದು ಹಾಗೂ ನೂತನ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರನ್ವಯ ದಿನಾಂಕ: 27-6-94ರಂದು ಅರ್ಜಿ ಸಲ್ಲಿಸಿದ್ದರು. ಜೊತೆಗೆ, ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 22580:90ಯನ್ನು ಸಲ್ಲಿಸಿ ಮಧ್ಯಂತರ ಆಜ್ಞೆ ಪಡೆದಿದ್ದಲ್ಲದೆ, ನ್ಯಾಯಾಲಯದಿಂದ ಅವರು ಸಲ್ಲಿಸಿರುವ ಅರ್ಜಿಯನ್ನು ಆದಷ್ಟು ಬೇಗನೆ ನಿಯಮಗಳನ್ವಯ ಇತ್ಯರ್ಥಗೊಳಿಸಲು ಆದೇಶವನ್ನೂ ಸಹ ಪಡೆದಿದ್ದರು.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 1994ರ, ನಿಯಮ 11 ರನ್ವಯ ಅರ್ಜಿಯನ್ನು ಪರಿಶೀಲಿಸಿ ಮೆ: ಶ್ರೀರಂಗ ಇಂಡಸ್ಟ್ರೀಸ್ ಇವರು ಸಣ್ಣ ಪ್ರಮಾಣದ ಕೈಗಾರಿಕಾ ಘಟಕ ಅಥವಾ ಶೇಕಡ 100 ಈ.ಓ.ಯು. ಹೊಂದಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸದಿದ್ದ ಕಾರಣ ಕರ್ನಾಟಕ